ಪ್ರಬುದ್ಧ ಕರ್ಣಾಟಕ

ಸಂಪುಟ ೩೪—ಸಂಚಿಕೆ ೪

೧೩೪

ನಂದನ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೩

ವಿಷಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ನಂದನ ಸಂವತ್ಸರ | ೧೩೪ | ಪುಷ್ಯ ಸಂಚಿಕೆ

ಕನ್ನಡ ಅಮರುಶತಕ

೧. ಮಂಗಳಾಚರಣೆ

ಹೆದೆಯನೆಳೆವೆಸಕದೊಳು ಬಿಗಿದ ಕಟಕಾಮುಖದ ಕೈಯ ಹಿಂಬದಿಯ
ಅದುರುತಿಹ ಸೆಳ್ಳುಗುರ ಪೊಗರ ಕದಿರೋಳಿಯೊಡವೆರೆದ ಅಂಬಿಕೆಯ
ಚಿಗುರೆಲೆಯ ಮಂಜರಿಯ ಕಿವಿದೊಡವ ತಾನೆಳಸಿ ಸುಳಿಸುಳಿಯುವಳಿಯ
ಸೂಗುರಿಯ ತಳೆದೆಸೆವ ಕುಡಿನೋಟ ಕಾಪಿಡಲಿ ನಿಮ್ಮ ತಾನೊಲಿದು

‘ಜ್ಯಾಕೃಷ್ಟಿ ಬದ್ಧ. . . .’

೨. ಮಂಗಳಾಚರಣೆ

ಕೈಬಿಡದೆ ಹಿಡಿದರೂ ಒದರಿ ತಳ್ಳಿಸಿಕೊಳುವ
ತುದಿ ಸೆರಗನಾಂತರೂ ಕಡು ಹೊಯ್ಲಿಸಿಕೊಳುವ
ಕುರುಳ ನೇವರಿಸಿದರು ಮತ್ತೆ ನೂಕಿಸಿಕೊಳುವ
ಕಾಲಬಳಿ ಬಿದ್ದರೂ ಕಡೆಗಣಿಸಿಕೊಳುವ
ಸಡಗರದೊಳಪ್ಪಿದರು ಬಿಡದೆ ಕೊಡಹಿಸಿಕೊಳುವ
ಹೊಸ ತಪ್ಪನೆಸಗಿರುವ ಕಾಮಿವೊಲು ಬರುವ
ನೈದಿಲೆಯ ಕಣ್ಗಳಲಿ ನೀರು ಸಲೆ ತುಂಬಿರುವ
ಮುಪ್ಪೊಳಲಿನಂಗನೆಯರಂದುಕಂಡಿರುವ
ಶಂಭುವಿನ ಕಣೆ ಬೆಂಕಿ ಸುಡಲಿ ದುರಿತವನು

‘ಕ್ಷಿಪ್ತೋ ಹಸ್ತಾವಲಗ್ನ : . . .’

೩. ಮಂಗಳಾಚರಣೆ

ತೊನೆದಾಡುವ ಕಿವಿಯೋಲೆಯ ಮಿಳಿರುತಲಿಳಿ
ದಾಡುವ ಕುರುಳೋಳಿಯ ತಳೆದಿರುವ
ಕಡುಕಳಲಿದ ಬೆಮರಿನ ನೀರ್ವನಿ ತುಂತುರೊ
ಳಿನಿಸಳಿಸಿದ ಹಣೆ ಬೊಟ್ಟಿನೊಳೆಸೆವ
ಸುಸಿಲಿನ ಮುಗಿತಾಯದೊಳಾದಾಯಸದೊಳು
ಜೋಲುವ ಕುಡಿನೋಟವನುರೆ ಮೆರೆವ
ಪುರುಷಾಯತ ಸಂಭೋಗದೊಳಿಂತೊಪ್ಪುವ
ಅಸಿಯಳ ಮೊಗವೆಮ್ಮನು ಚಿರಕಾಲ
ಸಲಹಲಿ ; ಹರಿಹರ ಷಣ್ಮುಖ ಮೊದಲಾಗಿಹ
ಸುರರಿಂದಿನ್ನಾಗುವುದೆಮಗೇನು !

'ಆಲೋಲಾಮಲಕಾ. . . .'

೪. ಸಖೀವಾಕ್ಯ

ಮೆಲ್ಲನೆ ಹೊರಳುತ ಒಲವೊಳು ಕರಗುತ
ಮರಳಿ ಮರಳಿ ಮುಗುಳಾಗುತ್ತ
ಚಣವೆದುರಾಗುತ ನಾಣೊಳು ಬಳುಕುತ
ಎವೆ ಮುಚ್ಚುವುದನೆ ಮರೆವುತ್ತ
ಹೃದಯದೊಳಡಗಿದ ಭಾವದ ಬಯಕೆಯ
ಕಾರುವ ತೆರದೊಳು ತೋರುತ್ತ
ಸುಕೃತಿ ಅದಾರನು ನೀನಿಂದೀ ಪರಿ
ದಿಟ್ಟಿಸಿ ನೋಡುವೆ ನುಡಿ ಮುಗುದೆ.

'ಅಲಸವಲಿತೈಃ . . .'

೫. ಸಖೀವಾಕ್ಯ

ಬೆರಳ ತುದಿಯುಂಗುರಿನಲಿ ಕಂಬನಿಯ ಮಿಡಿಮಿಡಿದು
ಮುನಿದವಳೆ ಕೆಮ್ಮನಿಂತೇತಕಳುವೆ ?
ಕೊಂಡೆಯದ ನುಡಿಗಳಿಂದೀ ಮುನಿಸು ಹೆಚ್ಚಿದರೆ
ನಿರ್ವಿಣ್ಣನಾಗುವನು ನಿನ್ನಿನಿಯನು ;
ಅಲ್ಲದಿರಲನುನಯಕುದಾಸೀನನಾಗುವನು
ಬಿಕ್ಕಳಿಸಿ ನೀ ಅಳುವೆ ಅಂದು ಮತ್ತೆ.

'ಅಂಗುಲ್ಯಗ್ರನಖೇನ. . . .'

೬. ಸಖೀವಾಕ್ಯ

ನೀನೆ ಒಲವನಿವಳಿಗೆರೆದೆ ನೀನೆ ನುಡಿದು ಲಲ್ಲೆಗೈದು ನಲಿಸಿದೆ
ದೈವವಶದೊಳಿಂದು ನೀನೆ ಹೊಸತು ವಿಪ್ರಿಯವನು ಇವಳೊಳೆಸಗಿದೆ
ಇವಳ ಕೋಪ ತಾಳಲರಿದು ಸಂತವಣೆಯ ನುಡಿಗಳಿಂದಲಳಿಯದು
ಓವೊ ಕರುಣೆಯಿಲ್ಲದವನೆ ಇಂತು ಅವನ ಮನಸು ಕರಗುವಂದದೆ
ಕೆಳದಿ ಅಳಲಿ ಘಟ್ಟಿಯಾಗಿ ಬಾಯಿಬಿಟ್ಟು ಅವನು ಕೇಳುವಂದದೆ.

'ದತ್ತೋಽಸ್ಯಾಃ ಪ್ರಣಯಃ. . .'

೭. ಸಖೀವಾಕ್ಯ

ಹೊರಗೆ ನಲ್ಲನು ತಲೆಯ ತಗ್ಗಿಸಿ ನೆಲವ ಕೆರೆಯುತಲಿರುವನು
ಸಖಿಯರುಣಿಸನು ತೊರೆದು ಅತ್ತತ್ತವರ ಕಣ್ಣುಗಳೂದಿವೆ
ಪಂಜರದಲಿಹ ಗಿಣಿಗಳೆಲ್ಲವು ನಕ್ಕು ನುಡಿವುದನುಳಿದಿವೆ
ನಿನ್ನ ಗತಿಯೋ ಇಂತು ಬಿಡು ನೀನಿಂದು ಕಠಿನಳೆ ಮುನಿಸನು.

'ಲಿಖನ್ನಾಸ್ತೇ ಭೂಮಿಂ. . .'

೮. ಸಖೀವಾಕ್ಯ

ನಾರಿಯರು ಮುಗ್ಧ ಶಠರಿನಿಯನನು ಸೆಳೆಯುವರು
ಮತ್ತೆ ನೀ ತಡೆದರೂ ಸುಮ್ಮನಿರರು
ಅದರಿನೇತಕೆ ಬಳಲಿ ಬರಿದೆ ನೀನಳುತಿರುವೆ
ಅವರೊಂದು ಬಯಕೆಯನು ಸಲ್ಲಿಸದಿರು
ಕಾತರೆಯೆ ಹೇಳು ನೀನಾದೊರೆಯ ಸುಂದರನು
ಸಹೃದಯನು ಕೇಳಿರತನಾಯುವಕನು
ಬಿಟ್ಟತಹ ನಮ್ಮೊರಟು ನೂರಾರು ನುಡಿದಾಳಿ
ಯಿಂದೆಮಗೆ ಬೆಲೆಗಿಂದು ದೊರೆವನೇನು!

'ನಾರ್ಯೋ ಮುಗ್ಧ ಶಠಾ. . .,'

೯. ಕವಿವಾಕ್ಯ

ಮುಳಿದ ದಯಿತೆ ತೊನೆವ ಬಳ್ಳಿದೋಳ ಪಾಶದಿಂದಲೆಳೆದು ಬಿಗಿದು ಕಟ್ಟುತೆ
ಸಂಜೆಹೊತ್ತು ಸಖಿಯರೆದುರು ಕಾಂತನನ್ನು ಮನೆಯೊಳಕ್ಕೆ ಎಳೆಯುತೊಯ್ಯುತೆ
ಮತ್ತೆ ಇಂತೆ ಎಂದು ಜಾರುತಿರುವ ಮೆಲುನುಡಿಯೊಳು ತೋರೆ ದುಶ್ಚರಿತೆಯನು
ಅಳುತ ನಲ್ಲೆ ಹೊಡೆದೊಡಿಲ್ಲವೆಂದು ನಗುತ ಮಾಜುವಿನಿಯನವನೆ ಧನ್ಯನು!

'ಕೋಪಾತ್ ಕೋಮಲ ಲೋಲ . . .'

೧೦. ನಾಯಕೋಕ್ತಿ

"ತೆರಳಿದವರು ಮರಳಿ ಸೇರದಿರುವರೇನು ಚೆನ್ನೆ ಹೇ!
ನನ್ನ ಕುರಿತು ಚಿಂತಿಸದಿರು ನೀನು ಬಹಳ ಸೊರಗಿಹೆ!"
ಹೇಳಲವಳಿಗಿಂತು ನಾನು ಕಣ್ಣ ನೀರು ತುಂಬುತೆ;
ನಾಚಿಕೆಯಲಿ ಮೆಲ್ಲ ಮೆಲ್ಲನಾಲಿಗಳನು ತಿರುಹುತೆ
ಸುರಿವ ಕಂಬನಿಯನು ತಡೆದು ಹರವುಗಣ್ಣೊಳೆನ್ನನು
ನೋಡಿ, ತಾನು ಸೂಚಿಸದಳು ಮುಂದಣವಳ ಸಾವನು.

'ಯಾತಾಃ ಕಿಂ ನ ಮಿಲನ್ತಿ . . .'

೧೧. ನಾಯಿಕಾ ವಾಕ್ಯ

ಅವನ ಮೊಗದ ಎದುರು ನಿಂದು ಮೊಗವ ನಾನು ತಗ್ಗಿಸಿದೆನು
ಕಾಲುಗಳಲಿ ನೋಟವಿದನು ನಿಲಿಸಿದೆ.
ಇನಿಯನಾಡುವಿನಿದು ನುಡಿಯ ಕೇಳುವೊಂದು ಕೌತುಕದೊಳು
ಕದಡಿದೆನ್ನ ಕಿವಿಗಳನ್ನು ಮುಚ್ಚಿದೆ.
ಕೆನ್ನೆಗಳಲಿ ನಿಮಿರಿ ನಿಂದ ನವಿರಿನೊಡನೆ ಒಗೆದ ಬೆಮರ
ನದನು ನನ್ನ ಕೈಗಳಿಂದಲೊರಸಿದೆ.
ಕೆಳದಿ ಜನರೆ ಪೆರತನೇನನೆಸಗಲಹುದು ನನ್ನ ಕುಪ್ಪ
ಸದೊಳು ಹೊಲಿಗೆ ನೂರುಕಡೆಯೊಳೊಡೆಯಿತು.

'ತದ್ವಕ್ತ್ರಾಭಿಮುಖಂ ಮುಖಂ . . .'

೧೨. ಪ್ರವಾಸಕಥನ

ಮೊದಲ ಯಾಮದ ಕಡೆಯೊಳೋ ಮೇಣಿಂದು ಮಧ್ಯಾ
ಹ್ನದೊಳೊ ಮೇಣೀ ಹಗಲ ಮುಂದಣದೊಂದು ಯಾಮದೊಳೊ
ಅಲ್ಲದಿರಲಿನ್ನದರ ಮುಂದಣ ಯಾಮದೊಳೊ ಮೇ
ಣಿಂದಿನೀ ಹಗಲೆಲ್ಲವೂ ಕೊನೆಗೊಂಡ ವೇಳೆಯೊಳೋ
ಇನಿಯ ನೀನೈತರುವುದಿಲ್ಲಿಗದೆಂದಿಗೆಂದಾ
ನೂರು ದಿನಗಳು ಹಿಡಿವ ದೇಶಕೆ ಹೋಗುವಾತನನು
ತಡೆದಳಾ ಪಯಣವನು ಬಾಲಿಕೆ ಕಣ್ಣನೀರನು
ಸುರಿಸುತಾಡಿದ ತನ್ನ ಬಾಲಾಲಾಪದಿಂದವಳು.

'ಪ್ರಹರವಿರತೌ ಮಧ್ಯೇ . . .'

ಪ್ರಯಾಣೋನ್ಮುಖನಾದ ನಾಯಕನನ್ನು ನಾಯಿಕೆ ಮುಗ್ಧಾಲಾಪಗಳಿಂದ ತಡೆಯುತ್ತಾಳೆ.

೧೩. ಪ್ರವಾಸಕಥನ

ಕೇಳಿ ನಿಶಿಯೊಳು ನೀರನೆರಚುವ ಮೋಡದೋಳಿಯ ವೊಳಗಿನೊಂದುಲಿಯ,
ನೀಳವಾದುಸಿರೆಳೆದು ನೆನೆದನು ತುಂಬಿ ಕಂಬನಿ ಬಾಲೆ ವಿರಹಿಣಿಯ.
ನೆನೆದು ದಾರಿಗ ರಾತ್ರಿಯೆಲ್ಲಾ ಬಾಯಿಬಿಟ್ಟಳುತಿದ್ದ ಹಳ್ಳಿಯೊಳು
ಹಳ್ಳಿಯವರಾ ಹಳ್ಳಿಯಿಂದಾತನನು ಹೊರಗಿರದಟ್ಟುವಂದದೊಳು.

'ಧೀರಂ ವಾರಿಭರಸ್ಯ . . .'

೧೪

ದೂರದಿಂದಲೆ ಮಂದಹಾಸ ಮನೋಜ್ಞ ಸುಸ್ವಾಗತವ ನೀಡಿರುವೆ
ಮತ್ತೆ ಮಾರುತ್ತರವನೀಯದೆ ನನ್ನ ಆಜ್ಞೆಯ ಶಿರದೊಳಾಂತಿರುವೆ
ಕಠಿನ ಹೃದಯಳೆ ಗುಪ್ತಕೋಪವ ಗೋಪನಂಗೈವೊಂದು ರೀತಿಯಿದೆನ್ನುತೆ
ನಿನ್ನ ಈ ಚರ್ಯೆಗಳಿವೆಲ್ಲದರಿಂದ ಚೇತನ ತಪ್ತವಾಗುತಿದೆ.

'ಕೃತೋ ದೂರಾದೇವ . . .'

೧೫. ನಾಯಿಕಾವಾಕ್ಯ

ಎಂತೊ ಕೆಳದಿ ಆಟಕೆಂದು ಕೆರಳುತಂದು ತೆರಳು ಎಂದು ನುಡಿದೆನು
ಕಠಿನ ಹೃದಯ ಹಾಸನುಳಿದು ಝುಗ್ಗನೆದ್ದು ಹೋದನೆನ್ನ ನಲ್ಲನು
ಭರದೊಳಿಂತು ಒಲವ ಮುರಿದ ಕರುಣಹೀನನವನ ಮರಳಿ ನೆನೆಯುತೆ
ನಾಣನುಳಿದ ನನ್ನ ಮನವಿದಾಶಿಸುವುದು ಪಿರತನೇನಗೈವೆನು.

'ಕಥಮಪಿ ಸಖಿ ಕ್ರೀಡಾಕೋಪಾತ್ . . .'

ಸಖಿಯನ್ನು ಕುರಿತು ನಾಯಿಕೆ ಹೇಳುವ ಮಾತು.

೧೬. ಕವಿವಾಕ್ಯ

ಗಂಡಹೆಂಡಿರು ರಾತ್ರೆ ಆಡಿದ ಮಾತನಾಲಿಸಿ ಮನೆಯ ಗಿಣಿ ಬೆಳ
ಗಿನೊಳು ಹಿರಿಯರ ಮುಂದೆ ಹೇಳಲು ದೊಡ್ಡದನಿಗೈದು
ನಾಚಿ ದಾಳಿಂಬೆಯನು ತಿನಿಸುವ ನೆವದೊಳಾ ವಧು ಕಿವಿಯ ಓಲೆಯ
ಕೆಂಪು ಹರಳನು ಕೊಕ್ಕಿನೊಳಗಿಟ್ಟದರ ಬಾಯನು ಮುಚ್ಚಿಸಿದಳಂದು.

'ದಂಪತ್ಯೋರ್ನಿಶಿ ಜಲ್ಪತೋ . . .'

೧೭. ನಾಯಿಕಾವಾಕ್ಯ

ಶಠನೆ ಪರಿಭವದಿಂದ ಮೊಗದಿರುಹುತ್ತ ದುಃಖಿಸುವೆನ್ನನರಿಯದೆ ಅಪ್ಪಲು
ಬಂದುದೇನೈ ನನ್ನ ಸೌಭಾಗ್ಯವನು ನೀನಿಂದಿಂಥ ದೆಸೆಗಿದನೊಡ್ಡಲು
ನೋಡು ದಯಿತೆಯು ಮೊಲೆಯ ಸೋಂಕಿನ ಅಂಗರಾಗದೊಳರುಣಗೊಂಡಿಹ ನಿನ್ನೆದೆ
ಎಣ್ಣೆಗೆಸರಿನ ಕೊಳೆಯ ಬಣ್ಣದೊಳೆನ್ನ ವೇಣಿಯದೊಂದು ಗುರುತನ್ನಾಂತಿದೆ!

'ಅಜ್ಞಾನೇನ ಪರಾಙ್ಮುಖೀಂ . . .'

ನಾಯಕನನ್ನು ಕುರಿತು ನಾಯಿಕೆ ಹೇಳುವ ಮಾತು.

೧೮. ಕವಿವಾಕ್ಯ

ದೂರದಿಂದಲೆ ಎದುರುಗೊಳ್ಳಲು ನಡೆದ ಕತದಿಂ
ದೊಂದೆ ಪಾಸೊಳು ಕುಳಿತುಕೊಳುವುದು ತಪ್ಪಿತು
ವೀಳೆಯವ ತರುವೊಂದು ನೆವದೊಳು ಮತ್ತೆ ಬಿಗಿದೆಳೆ
ದಪ್ಪಿಕೊಳುವುದಕಿರದೆ ತಾನೆಡರಾಯಿತು
ಪತಿಯ ಬಳಿಯೊಳು ಪರಿಜನಂಗಳ ಬೆಸಸುತಿರುವಂ
ದೊಡನೆ ನುಡಿಯುತಲಿರುವುದೂ ಸಹ ತಪ್ಪಿತು
ಚತುರೆ ಕೋಪವನಿಂತು ಸಾರ್ಥಕಗೊಳಿಸಿಕೊಂಡಳು
ನಲ್ಲಗುಪಚಾರವನು ಮಾಡುವ ನೆವದೊಳು

'ಏಕತ್ರಾಸನ ಸಂಸ್ಥಿತಿಃ ಪರಿಹೃತಾ . . .'

೧೯. ಕವಿವಾಕ್ಯ

ಒಂದೆ ಹಾಸಿನೊಳಿನಿಯರಿಬ್ಬರು ಕುಳಿತುದನು ಕಾಣುತ್ತ ಹಿಂಬದಿಯಿಂದಲೈತಂದು
ಒಲಿದು ಒಬ್ಬಳನಾಟವಾಡುವ ಸೋಗುನೆವದೊಳು ಮುಚ್ಚುತೊಡನಂದು
ಕೊರಳ ನಸುಕೊಂಕಿಸುತ ಪೊಂಪುಳಿವೋದ ಧೂರ್ತನು ಒಲುಮೆ ದಳವೇರಿರುವ ಬಗೆಯಿಂದ
ತಾನೆ ತನ್ನೊಳಗೊಳಗೆ ನಗುತಿರಲೆಸೆವ ಕೆನ್ನೆಯ ಬೇರೆಯೊಬ್ಬಳನೆಳೆದು ಮುದ್ದಿಸಿದ.

'ದೃಷ್ಟ್ವೈಕಾಸನ ಸಂಸ್ಥಿತೇ . . .'

೨೦. ಕವಿವಾಕ್ಯ

ಕಾಲಿಗಂದಿರದೆರಗುವುದನವಳಲ್ಲಗಳೆದುದರಿಂದಲನುನಯ ವಿಮುಖನು
ಗುಟ್ಟಿನಿಂದಲೆ ಮೋಸಗೈಯುವ ನಡತೆಯವನೆನೆ ಸಿಟ್ಟುಗೊಂಡತಿ ಬೆಟ್ಟನು
ತೆರಳಲಿನಿಯನು ದೊಡ್ಡ ನಿಟ್ಟುಸಿರೆಳೆದು ಮೊಲೆಗಳ ಮೇಲೆ ಕೈಗಳನಿಟ್ಟಳು
ಕಣ್ಣ ನೀರಿನೊಳೊದ್ದೆಯಾಗಿಹ ನೋಟವನು ತಾ ತನ್ನ ಸಖಿಯರೊಳಿಟ್ಟಳು.

'ಚರಣ ಪತನ ಪ್ರತ್ಯಾಖ್ಯಾನ . . .'

೨೧. ಕವಿವಾಕ್ಯ

'ಮತ್ತಿದೇತಕಿಂತು ಮುಗ್ಧ ನಯನೆ ಡಾಬಿನಿಂದಲೆಳೆದು ಕಟ್ಟಿ ಸೀರೆ ಸೆರಗನು
ಮಲಗಿರುವಳು' ಎಂದು ಅವಳ ಪರಿಜನವನು ಸ್ವೇಚ್ಛೆಯಾಗಿ ಕೇಳುತಿರಲು ನಲ್ಲನು
'ತಾಯಿ! ನನ್ನ ನಿದ್ರೆಯಿದನುಮಿವನು ಕೆಡಿಸುತಿರುವನಿಂದು' ಎಂದು ಕೋಪ
ಗೊಂಡಳು
ತಿರುಗಿ ಮಗ್ಗುಲಾಗುವೊಂದು ನೆವದೊಳವಳು ಹಾಸುಗೆಯೊಳು ಅವನಿಗೆಡೆಯನಿತ್ತಳು.

'ಕಾಂಚ್ಯಾ ಗಾಢತರಾ . . .'

೨೨. ಕವಿವಾಕ್ಯ

ಒಂದೆ ಹಾಸಿನೊಳಿದ್ದ ಪದದೊಳು ಮುಗ್ಧೆ ಕೇಳಿ ವಿಪಕ್ಷರಮಣಿಯ ಹೆಸರನು
ಒಡನೆ ಕೋಪದೊಳಿರದೆ ಮೊಗದಿರುಹುತ್ತ ಬೇಗುದಿಗೊಂಡು ಚಾಟೂಕ್ತಿಗಳನಾಡಿದರು
ನಲ್ಲನನು ಆವೇಗದಿಂದಪಚಾರಗೊಳಿಸಲು ಕೆಮ್ಮನಾಗಲು ಆತನು
ನಿದ್ದೆಹೋದನೊ ಏನೊ ಎಂದಿರದೊಡನೆ ಸರ್ರನೆ ಕೊರಳ ತಿರುಗಿಸುತವಳು ನೋಡಿದಳು.

'ಏಕಸ್ಮಿನ್ ಶಯನೇ ವಿಪಕ್ಷರಮಣೀ . . .'

೨೩. ಕವಿವಾಕ್ಯ

ಒಂದೆ ಹಾಸೊಳು ಒಬ್ಬರೊಬ್ಬರ ಮನದೊಳೊಲಿದರು ಆತ್ಮಗೌರವವುಳಿವ ಸಲುವಾಗಿ
ಗಂಡ ಹೆಂಡಿರು ಮಾತನಾಡದೆ ಮೊಗವ ತಿರುಗಿಸಿ ಕೆಮ್ಮನಿರುತಿರಲಂದು ಕಡುಸೊರಗಿ
ಮೆಲ್ಲ ಮೆಲ್ಲನೆ ಅವರ ಕಡೆಗಣ್ಣುಗಳ ಆ ಕುಡಿನೋಟ ಚಲಿಯಿಸಿ ಕಂಗಳೊಡವೆರೆಯೆ
ಭಗ್ನವಾದನು ಮಾನಕಲಿ ತಾ ನೊಡನೆ ಕಿಲ ಕಿಲ ನಕ್ಕು ಕೊರಳಪ್ಪುಗೆಯೊಳವರೆಸೆಯೆ.

'ಏಕಸ್ಮಿನ್ ಶಯನೇ ಪರಾಙ್ಮುಖತಯಾ . . .'

೨೪. ನಾಯಕೋಕ್ತಿ

ನನ್ನೊಳಿವಳೇಗೈವಳೆನುವುದನಿಂದು ನೋಡುವೆನೆಂದು
ನಾನತಿಸ್ಥೈರ್ಯದಿಂದಿರುತಿದ್ದೆನು
ನನ್ನನೇತಕೆ ನುಡಿಸನೀತನು ಶಠನೊ ಏನೋ ಎಂದು
ತಾನತಿ ಸಿಟ್ಟನಿಂದಿರುತಿದ್ದಳು
ಒರುವರೊರುವರನಿಂತು ನಾಚಿಕೆವೆರೆದ ನೋಟದೊ
ಳೀಕ್ಷಿಸುತ್ತಿರುವೊಂದವಸ್ಥಾಂತರದೊಳು
ನಾನು ನೆವವನ್ನಿಟ್ಟು ನಕ್ಕೆನು ಅವಳು ಬಗೆಯನು
ಕದಡುವಂದದೊಳತ್ತು ಕಣ್ಣೀರಿಟ್ಟಳು.

'ಪಶ್ಯಾಮೋ ಮಯಿ ಕಿಂ ಪ್ರಪದ್ಯತ . . .'

೨೫. ನಾಯಕೋಕ್ತಿ

ಮಾನ ಮಲಿನತೆ ಹೊಂದಿದಂದವಳಾನನೇಂದುವ ಬೊಗಸೆಗೈಗಳಿನಾಂತಳು.
ನಾನು ಕ್ಷೀಣೋಪಾಯನಾದಂದೆರಗಿ ಮಣಿವುದದೊಂದೆ ಶರಣೆನುತಿದ್ದೆನು.
ತಡೆದ ಎವೆದುದಿಯಿಂದೆ ಜಾರುತೆ ಸಿಡಿದು ಕುಚತಟದಿಂದಲೊಡೆಯುತಲಿಳಿಯುತೆ
ಒಡನೆ ಸುರಿಯುವ ಕಣ್ಣ ಹನಿಯಿಂದೆನಗನುಗ್ರಹವೆಂದು ಸೂಚಿತವಾದುದು.

'ಪರಿಮ್ಲಾನೇ ಮಾನೇ. . ,'

೨೬. ನಾಯಕೋಕ್ತಿ

ಅವಳ ಸಾಂದ್ರ ವಿಲೇಪನಸ್ತನಯುಗಳದಾಲಿಂಗನದ ಮುದ್ರಾಂಕಿತವನು
ಕಾಲಿಗೆರಗುವ ನೆವದೊಳೇತಕೆ ಮುಚ್ಚಿಕೊಳುತಿಹೆ ಮಾಜದಿರಲೆಂದೆದೆಯನು.
ಹೀಗೆ ಹೇಳಲು ಎಲ್ಲಿ ಅದು ಎನುತೊಡನೆ ತೊಡೆದುದನಳಿಸಲೆಂದಾನು
ಅವಳನಪ್ಪಲು ಭರದೊಳಾ ಸುಖವಶದೊಳಸಿಯಳು ಮರೆತಳೆಲ್ಲವನು.

'ತಸ್ಯಾಃ ಸಾಂದ್ರವಿಲೇಪನ. . . .'

೨೭. ನಾಯಕೋಕ್ತಿ

ರವಿಕೆಗಳೆದರೆ ನೀ ಮನೋಹರ ಶೋಭೆ ತಳೆಯುವೆ ವಾಮಲೋಚನೆಯೆ !
ಎಂದು ಹೇಳಲು ಅವಳ ಪ್ರಿಯತಮ ರವಿಕೆದಾರವನಿರದೆ ತಾನೆಳೆಯೆ,
ಕುಳಿತು ಹಾಸೊಳು ನಗುವ ವಧುವಿನ ಕಣ್ಣಹಬ್ಬದೊಳುಬ್ಬಿದಾಳಿಯರು
ಮೆಲ್ಲ ಮೆಲ್ಲನೆ ಸುಳ್ಳುನೆಪವನು ನುಡಿಯುತೆಲ್ಲರುಮಿರದೆ ಜಾರಿದರು

'ತಂ ಮುಗ್ಧಾಕ್ಷಿ ವಿನೈವ ಕಂಚುಳಿಕಯಾ'

೨೮. ನಾಯಿಕಾ ವಾಕ್ಯ

ಹುಬ್ಬು ಗಂಟಿಕ್ಕಿದ್ದರೂ ಈ ದಿಟ್ಟಿ ಕಟ್ಕಾತುರವ ತೋರುತಲಿರುವುದು,
ಮಾತು ತಡೆಗಟ್ಟಿದ್ದರೂ ಈ ಸುಟ್ಟ ಮೊಗದೊಳು ನಗೆಯು ಮೊಳೆಯುತಲಿರುವುದು,
ಮನಸು ಬೆಟ್ಟಿತ್ತಾದರೂ ಈ ಮೈಯು ರೋಮಾಂಚನವ ತಾಳುತಲಿರುವುದು
ಸಿಟ್ಟಿನೀ ನಿರ್ವಾಹವಾತನು ಕಂಡ ಬಳಿಕಿನ್ನೆಂತು ನಡೆವುದೊ ಅರಿಯೆನು.

'ಭ್ರೂಭಂಗೇ ರಚಿತೋಪಿ ದೃಷ್ಟಿರಧಿಕಂ. . .'

೨೯. ಸಖೀವಾಕ್ಯ

ಸಖಿಯರೊಂದುಪದೇಶ ದೊರೆಯದೆ ನಲ್ಲನೆಸಗಿದ ಮೊದಲ ತಪ್ಪಿನ ಸಮಯದೆ
ಬಿಂಕದಿಂದಲಿ ಮೈಯ ಬಳುಕಿಸಿ ಕೊಂಕು ನುಡಿಯೊಳು ತಿಳುಹುವುದ ನೀನರಿಯದೆ
ಹೊಳೆವ ಬೆಳ್ಳನೆ ಕೆನ್ನೆ ತಳದಿಂದಿಳಿದು ಜಾರುತೆ ಮಿಳಿರುವಲಕವ ತೋಯಿಸಿ
ಬಾಲೆ ಕೆಮ್ಮನೆ ಅಳುವೆ ನೈದಿಲೆಗಣ್ಣ ತುಂಬುತಲಿಳಿವಕಂಬನಿ ಸುರಿಯಿಸಿ.

'ಸಾ ಪತ್ಯುಃ ಪ್ರಥಮಾಪರಾಧ ಸಮಯೇ. . .'

೩೦. ನಾಯಿಕಾವಾಕ್ಯ

ತಿಳಿಯಿತಾಗಲಿ ಮತ್ತೆ ವ್ಯರ್ಥಾಲಾಪವೇತಕೆ ತೆರಳಬಹುದೈ ನಲ್ಲನೆ!
ನಿನ್ನೊಳೊಂದಿನಿಸಾದರೂ ತಪ್ಪಿಲ್ಲ ನಮ್ಮೀ ವಿಧಿಯೆ ತಾ ಪ್ರತಿಕೂಲವಾಗಿಹುದು.
ನಿನ್ನ ಆ ತೆರನಾದ ಪ್ರೇಮವೆ ಇಂದು ಪಡೆದಿರಲಿಂಥ ದೆಶೆಯಿದನು;
ನಿಜದೆ ಚಂಚಲೆಯಾದ ಹತಜೀವಿತಳು ಅಳಿದರೆ ಪೀಡೆ ತಾನೇನು!

'ಭವತು ವಿದಿತಂ ವ್ಯರ್ಥಾಲಾಪೈರಲಂ. . .'

೩೧. ಅಭಿಸಾರಿಕೆ

ಹೊಳೆ ಹೊಳೆಯುವ ತಾರಹಾರವಿದನು ಉರದೊಳಿರಿಸುತೆ
ಘಲಿರು ಘಲಿರು ಕಾಂಚಿಯ ಘನ ಜಘನದೆಡೆಯೊಳಿರಿಸುತೆ
ಝುಣಿರು ಝುಣಿರು ನೇವುರವನು ಪಾದಗಳಲಿ ಧರಿಸುತೆ
ಪ್ರಿಯನನರಸಲಿಂತು ನಡೆದು ಡಿಂಡಿಮವನು ಬಡಿಯುತೆ
ದಿಕ್ಕನೇಕೆ ನೋಡುತಿರುವೆ ಮುಗುದೆ ಬೆಚ್ಚಿ ನಡುಗುತೆ!

'ಉರಸಿ ನಿಹಿತಸ್ತಾರೋಹಾರ: . . .'

೩೨. ಪ್ರವಾಸಕಥನ :—ವಿರಹಿಣಿ

ಮಲಯ ಮಂದಾನಿಲನು ಸಂದಸು ಬಿರಿದ ಮಲ್ಲಿಗೆ
ಯಲರುಗಂಪಿನ ಗ್ರೀಷ್ಮನೈದಿದನು.
ಘನನೆ! ನಿಸ್ನೇಹಿಯನು ಘಟಿಯಿಸಲಿಂದು ಕೇಳು
ತ್ಸ್ನಾಹಿಯಾದರೆ ಮುಂದೆ ನಡೆ ನೀನು.
ಯಾರು ದನವನು ಮರಳಿ ತರುವನೊ ಅವನೆ
ಪಾರ್ಥನು ನನಗೆ ಅದರಿಂದಹುದು ಕುಂದೇನು.

'ಮಲಯ ಮರುತಾಂವ್ರಾತಾ. . .'

೩೩. ನಾಯಿಕಾವಾಕ್ಯ

ದಿನವು ಬೆಳಗಿನ ನಸುಕೊಳೈತರಲೆನ್ನ ಕಂಗಳು ನಿದ್ದೆಗೆಟ್ಟಿಹವು.
ಮಂದಳಾದೆನ್ನೊಂದು ಗೌರವವಿಳಿದು ಹೋಯಿತು ಹಗುರಳಾಗಿಹೆನು.
ನೀನಿವಾರಿಸದಾದೆ ಇವುಗಳ ನಾನು ತೊರೆದೆನು ಸಾವಿನಂಜಿಕೆಯ.
ದುಃಖದಿಂದಿಹೆ ತೆರಳು ಮುಂದಕೆ ನಾನು ನೆಗಳಿದೆನೆಂದು ಕೇಳುವೆ ಪಥ್ಯವಾದುದನು.

'ಪ್ರಾತಃ ಪ್ರಾತರುಪಾಗತೇನ ಜನಿತಾ . . .'

೩೪

ಆಕೆ ಹೆಂಗಸು ನಾವೆ ಕಾತರರಾಕೆ ಬಾಲಕಿ ನಾವೆ ಚಂಚಲ ಚಿತ್ತರು,
ಆಕೆ ಪೀನ ಪಯೋಧರದ್ವಯಭಾರವಾಂತರು ನಾವೆ ಖೇದಾವಿಷ್ಟರು,
ಆಕೆ ಗುರುತರ ಜಘನಭಾರಾಕ್ರಾಂತಳಾದರು ನಾವೆ ನಡೆಯಲಶಕ್ತರು,
ಹೆರರೊಳೊಗೆದಿಹ ದೋಷದಿಂದಸಮರ್ಥರಾದೆವು ನಾವಿದದ್ಭುತವು.

'ಸಾ ಬಾಲಾ ವಯಮಪ್ರಗಲ್ಭಮನಸಃ . . .'

ಪ್ರವಾಸಕಥನ

೩೫. ನಾಯಿಕಾವಾಕ್ಯ

ಪಯಣಗೈದವು ಬಳೆಗಳೆಡವಿಡದುದುರಿದವು ಕಂಬನಿಗಳೊಲುಮೆಯ ಸಖಿಯರು,
ಧೈರ್ಯದಿಂದಿರದಿಂದು ಕ್ಷಣವುಂ, ಮುಂದೆ ನಡೆಯಲು ಮನವು ನಿಶ್ಚಯಿಸಿರುವುದು.
ಇಂತು ನಿಶ್ಚಿತಮನನು ನಲ್ಲನು ತೆರಳುವಂದವನೊಡನೆ ಹೊರಟಿಹರೆಲ್ಲರು.
ತೆರಳಬೇಕಾಗಿರುವ ಜೀವವೆ ಒಲುಮೆಗೆಳೆಯರ ಗುಂಪನೇತಕೆ ತೊರೆಯುವೆ.

'ಪ್ರಸ್ಥಾನಂ ವಲಯೈಃ ಕೃತಂ . . .'

೩೬. ಕವಿವಾಕ್ಯ

ಚಿಗುರುದುಟಿಯನು ಕಡಿಯಲದುರುತ ಕೈಯ ತುದಿಯನು ಒದರುವ
ಶಠನೆ! ಬಿಡು ಬಿಡು ಬೇಡವೆನ್ನುತ ಮುನಿದು ಹುಬ್ಬನು ಕುಣಿಸುವ
ಮತ್ತೆ ಸೀತ್ಕಾರವನು ತೋರುವ ಕಣ್ಣ ಕೊನೆಯನು ಮೆರೆಯುವ
ಮಾನಿನಿಯ ಭರದಿಂದ ಮುದ್ದಿಡುವವರಿಗಮೃತವು ದೊರೆವುದು.
ಮೂಢರಮರರು ಬರಿದೆ ಕಡಲನು ಬಳಲಿ ಕಡೆದರು ನವೆದರು.

'ಸಂದಷ್ಟೇಽಧರ ಪಲ್ಲವೇ . . .'

ನಾಯಿಕಾವಾಕ್ಯ

೩೭. ತರಳೆ

ನಿದ್ದೆಹೋದನಿವನು ಕೆಳದಿ ನಿದ್ದೆಗೈಯಲೆಂದು ಸಖಿಯರಿಂತು ಹೋದನಂತರ
ಪ್ರೇಮಭರದೊಳೊಲುಮೆವೆರೆದು ತರಳೆ ನಾನು ಅವನ ಮೊಗದೊಳೆನ್ನ ಮೊಗವನಿರಿಸಿದೆ.
ನವಿರುಗೊಂಡ ಧೂರ್ತನೆರೆಯ ಸುಳ್ಳು ಸುಳ್ಳೆ ಕಣ್ಣುಮುಚ್ಚಿಕೊಂಡಿರುವುದನರಿಯುತೆ
ನಾಚಿದೆನ್ನ ನಾಚಿಕೆಯನು ಕಳೆದನವನು ಮುಂದೆ ಮಾಳ್ಪುದಾವುದದನು ಮಾಡುತೆ.

'ಸುಪ್ತೋಽಯಂ ಸಖಿ ಸುಪ್ಯತಾಂ . . .'

ನಾಯಿಕಾವಾಕ್ಯ

೩೮. ಮಾನಿನಿ

ಹುಬ್ಬು ಬಿಗಿವುದೆ ಎಲ್ಲಿ ಕೋಪವೊ ಮೌನವಿರುವುದೆ ಎಲ್ಲಿ ಶಿಕ್ಷೆಯೊ
ಎಲ್ಲಿ ಮೇಣೆನ್ನೊಬ್ಬರೊಬ್ಬರ ನಗುವುದನುನಯ, ನೋಡುವುದೆ ದಯವೊ
ನಮ್ಮ ಆ ತೆರನಾದ ಒಲವಿದು ನೋಡು ಈದಿನವೆಂಥ ಹಗೆಯಾಗಿರುವುದು!
ಕಾಲಬಳಿಯಲಿ ನೀನು ಹೊರಳುವೆ ಕೋಪವಾದರೊ ಹೊಲ್ಲಳೆನ್ನನು ತೊರೆಯದು.

'ಕೋಪೋ ಯತ್ರ ಭ್ರುಕುಟಿರಚನಾ . . .'

೩೯. ಕವಿವಾಕ್ಯ

'ಮೌನವನು ಬಿಡು ಸುತನು ನೋಡಿದೊ ಕಾಲಿಗೆರಗಿರುವೆನ್ನನು
ನೀನು ತಳೆದಿರಲಿಲ್ಲವಲ್ಲವೆ ಹಿಂದೆ ಇಂತಹ ಸಿಟ್ಟನು'
ಎಂದು ನಲ್ಲನು ಹೇಳಲರೆಗಣ್ಣಾಗಿ ಆ ಕಡೆ ನೋಡದೆ -
ಕಣ್ಣನೀರನು ಬಹಳ ಸುರಿದಳು ಮಾತನೊಂದನು ಆಡದೆ.

'ಸುತನು ಜಹಿಹಿ ಮೌನಂ . . .'

೪೦. ನಾಯಕೋಕ್ತಿ

ಭರದಲಿ ಬಿಗಿದೆಳೆದಪ್ಪಿರಲಮುಕಿದ ಮೊಲೆಗಳಿಸೊಗೆದಿಹ ನವಿರಿನ ಮೈಯವಳು
ಗಾಢ ಸ್ನೇಹದ ರಸದತಿರೇಕದೊಳುದುರಿದ ಚೆಂದದ ಪೊರೆವಾರುಡೆಯವಳು
ಬಿಡು ಬಿಡು ಮಾನದ! ನನ್ನೊಳಲಂಪಿದು ಬೇಡವೊ ಸಾಕೆಂದಗ್ಗಿದ ದನಿಯೊಳು ನುಡಿವವಳು
ನಿದ್ದೆಯೊಳಿದ್ದಳೊ ಸಾವ್ವೈದಿದಳೋ ಮನದೊಳಗದ್ದಳೊ ಕರಗಿದಳೋ!

'ಗಾಢಾಲಿಂಗನ ವಾಮನೀಕೃತ . . .'

ಕವಿವಾಕ್ಯ

೪೧. ನವವಧು

ಮೊಗವ ತಗ್ಗಿಪಳೊಗೆದ ವಿನಯದೊಳಿನಿಯ ಹಿಡಿಯಲು ಸೆರಗನು
ಹಟದೊಳಪ್ಪುಗೆಗೆಳಸಲಿವಳಿರದೆಳೆದುಕೊಳುವಳು ಮೈಯನು.
ಶಕ್ಯಳಲ್ಲೆಂದೆನಲು ನಗುಮೊಗದವರ ಸಖಿಯರ ನೋಡುತ
ಪ್ರಥಮ ಪರಿಹಾಸದೊಳು ನವವಧುವಿಹಳು ನಾಣೊಳು ಬಾಡುತ.

'ಪಟಾಲಗ್ನೇ ಪತ್ಯೌ ನಮಯತಿ ಮುಖಂ . . .'

೪೨. ಕವಿವಾಕ್ಯ

ಆವುದಿನಿನುಡಿಗಳಿಂದಾರದಿಹುದೊಲುಮೆ ಕೆಳೆವಾತಿನೊಳಗೊಳಸರಿಯದು
ಯತ್ನದಿಂದಾವುದೀ ನಿಡುಹಗಲೊಳತಿ ಕಷ್ಟದಿಂದಾಂತುದೆನಿಸಿದುದು
ಆ ಮಾನವೆಂತೆಂತೊ ತಿರುಗಿಸಿದ ಓರೋರ್ವರಾ ಮೊಗದೊಳೊಲಿದು
ಕುಡಿನೋಟವೆರೆದು ನಗುಬಿರಿದೊಡನೆ ಇಬ್ಬರನು ತೊರೆದುದಂದು.

'ನೋಪೇತೋಽನುನಯೇನಯಃ . . .'

೪೩. ನಾಯಿಕಾವಾಕ್ಯ

ಒಲುಮೆ ಬಿಗಿದಿಹ ಕಟ್ಟುಕಳಚಲು ಪ್ರೀತಿ ಗೌರವವಿಳಿಯಲು
ನೇರ್ಪು ತೊಲಗಲು ಜನರು ನಡೆದಂತವನು ನನ್ನೊಳು ನಡೆಯಲು
ಇದನು ಪ್ರಿಯಸಖಿ! ಊಹಿಸೂಹಿಸಿ ಕಳೆದ ದಿನಗಳ ನೆನೆಯುತೆ
ಸೀಳದೇತಕೊ ಅರಿಯೆನೆದೆಯಿದು ನೂರು ತೆರದೊಳು ಬಿರಿಯುತೆ

'ಗತೇ ಪ್ರೇಮಾಬಂಧೇ . . .'

೪೪. ಕವಿವಾಕ್ಯ

ಬಹಳ ದಿನದಿಂದಗಲಿದವರತಿ ಕಾತರತೆಯೊಳು
ಸೊರಗಿ ಬಡವಾಗಿರುವ ಪ್ರೈಯವರು
ಮತ್ತೆ ಜಗ ಹೊಸದಾಗಿ ಹುಟ್ಟಿತೊ ಎಂಬ ವೊಲು ಬಹು
ಮೋದದೊಳು ತಾ ಮರಳಿ ನಲಿವವರು
ನೀಳವಾಗಿಹ ಹಗಲದೆಂತೋ ಕಳೆದು ರಾತ್ರಿಯೊ
ಳೊಂದು ಗೂಡಿದ ಯುವಕ ಯುವತಿಯರು
ಎಂತು ವೇಳೆಯ ಸರಸದಾಲಾಪದೊಳು ಕಳೆವರೊ
ಅಂತು ಕಳೆಯರು ರತಿಯೊಳಾ ಅವರು

'ಚಿರವಿರಹಿಣೋಽತ್ಯುತ್ಕಂಠಾ . . .'

೪೫. ಕವಿವಾಕ್ಯ

ನೀಳಮಾಲೆಯ ನೋಟದೊಳೆ ತಾನೆಸಗಿ ಮಣಿದಳು, ತರದೆ ನೈದಿಲೆಯ.
ಬೊಗಸೆಹೂವಿನ ಸೇಸೆ ತಳಿದಳು ಪೊಳೆವ ನಗೆಯೊಳು ತರದೆ ಮಲ್ಲಿಗೆಯು.
ಬೆವರು ಸುರಿಯುವ ಮೊಲೆಗಳಿಂದವಳರ್ಘ್ಯವಿತ್ತಳು ತರದೆ ಬಿಂದಿಗೆಯ.
ತನ್ನ ಅಂಗಗಳಿಂದ ಮಂಗಳಗೈದಳಿಂತೊಳವುಗಲು ತನ್ನೆರೆಯ.

'ದೀರ್ಘಾ ವಂದನ ಮಾಲಿಕಾ . . .'

೪೬. ನಾಯಿಕಾವಾಕ್ಯ

ತಪ್ಪಿತಸ್ಥನು ನಲ್ಲ ನಿಂದಿತನಿರದೆ ಕೆಳದಿಯು ಸೋಗಿ
ನಿಂದ್ಯೆತಂದು ನಿಂದಂದು
ಭ್ರಾಂತಿಯಿಂದೊಡನಪ್ಪಿಕೊಂಡೆನ್ನಿನಿಯನನು ನಾ ಕೂಡು
ವಾಸೆಯ ಗುಟ್ಟನೊರೆದಂದು
"ಮುಗುದೆ! ದುಷ್ಕರವಾದುದಿದು" ಎಂದವನು ಮಿತಿಮೀರಿರುವ
ಹಾಸದೊಳೆನ್ನ ಬರಸೆಳೆದು
ಅಪ್ಪಿದುದರಿಂದ್ಹಿಂತು ಕಿತವನು, ನಾನು ವಂಚಿತಳಾದೆ
ನವನಿಂದಿಂದು ಬೆಳಗಿನೊಳು.

'ಕಾಂತೇ ಸಾಗಸಿ ಶಾಪಿತೇ . . .'

೪೭. ನಾಯಕೋಕ್ತಿ

ಸೀರೆಯುಂಚಿನೊಳಡಿಯನಾದರದಿಂದ ಮುಚ್ಚುವಳೆರಗಿದಪೆನೆಂದೂಹಿಸಿ.
ನಗೆಯು ಮೊಳೆ ಮಿನುಗುವುದನಡಗಿಪಳಿರದೆ ನೆವದೊಳು ನೋಡಳೆನ್ನನು ದಿಟ್ಟಿಸಿ.
ನಾನು ನುಡಿಸಿದೊಡಾಳಿ ಜನರೊಡನಾಡುತಿಹಳು ವಿರೋಧವಚನವನಸಿಯುಳು.
ಇವಳ ಗಾಢಪ್ರಣಯವಂತಿರಲಿಂಥ ಮುನಿಸೂ ನೋಡಲತಿ ರಮಣೀಯವು.

'ಆಶಂಕ್ಯ ಪ್ರಣತಿಂ ಪಟಾಂತ ಪಿಹಿತೌ . . .'

೪೮. ನಾಯಕೋಕ್ತಿ

ಸುಳ್ಳುಮಾತಿನ ಸಖಿಯರಿಂದವಳೆಷ್ಟುಪದಗಳ ಪಾಠವನು ತಾ ಕಲಿತಳು
ಅಷ್ಟುಪದಗಳ ಬೇಗನಾಡುತೆ ತಪ್ಪು ಮಾಡಿದ ನಲ್ಲ ಬರಲವನೆದುರೊಳು
ಮುಂದೆ ಮನಸಿಜನಿಚ್ಛೆ ತಾನೆಂತಂತು ನಡೆಯಲು ಮತ್ತೆ ತಾ ತೊಡಗಿದ್ದಳು
ಮುಗ್ಧತೆಯ ತೊಡವಾಂತ ಪ್ರೇಮಕೆ ಸಹಜಕೋಪವು ಬೇರೆ ಸೊಬಗನು ಕೊಡುವುದು.

'ಯಾವಂತ್ಯೇವ ಪದಾನ್ಯಲೀಕ . . .'

೪೯. ಕವಿವಾಕ್ಯ

ದೂರದಿಂದೌತ್ಸುಕ್ಯಗೊಳ್ಳುತೆ ಬರಲು ತಿರುಗುತೆ ಮಾತನಾಡಿಸಲರಳುತೆ
ತಬ್ಬಿಕೊಳ್ಳಲು ಕೆಂಪಗಾಗುತೆ ಬಟ್ಟೆಹಿಡಿಯಲು ಮುನಿದು ಹುಬ್ಬನು ಬಿಗಿಯುತೆ
ಕಾಲಿಗಿರದೆರಗಿರುವ ಪದದೊಳು ಕಣ್ಣನೀರನು ನೋಟದೊಳು ಸತಿ ತುಂಬುತೆ
ಕಣ್ಗಳೆಸೆದವು ತಪ್ಪನೆಸಗಿದ ನಲ್ಲನೊಳು ಜಗದಗಲ ಚತುರತೆಯಾನುತೆ.

'ದೂರಾದುತ್ಸುಕಮಾಗತೇ ವಿವಲಿತಂ . . .'

೫೦. ಕವಿವಾಕ್ಯ

'ಏಕೆ ಕಡುಸೊರಗಿರುವುದಂಗವಿದೇಕೆ ನಿರ್ಗರವಿಂತು ನಡುಗುತಲಿರುವುದು'
ಮುಗ್ಧೆ ಆನನವಿಂತು ಪಾಂಡು ಕಪೋಲ ತಾನಾರಿಂದಲಾದುದು ನುಡಿವುದು
ಎಂದು ಜೀವಿತನಾಥ ಕೇಳಲು 'ಒಡನೆ ಸಹಜವಿದೆಲ್ಲವೆನ್ನೊಳು' ಎನ್ನುತೆ
ರೆಪ್ಪೆಯೊಳಗಡಗಿದ್ದ ನೀರನು ತಿರುಗಿ ಆಕಡೆ ಸುರಿಸಿದಳು ಬಿಸುಸುಯ್ಯುತೆ.

'ಅಂಗಾನಾಮತಿ ತಾನವಂ ಕುತ ಇದಂ . . .'

೫೧. ನಾಯಕೋಕ್ತಿ

ಅಸಿಯಳೆದುರೊಳು ತಪ್ಪು ಹೆಸರನು ಹೇಳಿ ಹೆದರಿದೆ ದೈವಹತಕನು ಎನಿಸಿದೆ.
ತಲೆಯ ತಗ್ಗಿಸಿ ಬೇರೆ ಮನದಿಂದೇನನೋ ನೆಲದಲ್ಲಿ ಬರೆಯಲು ತೊಡಗಿದೆ.
ಹೇಗೆಹೇಗೋ ಗೀರುಗೆರೆಗೆರೆ ಕೊನೆಗೆ ಆಕಾರದೊಳು ಅವಳನೆ ತಿದ್ದಿತು.
ಆರ ಹೆಸರನು ಉಚ್ಚರಿಸಿದೆನೊ ಅದುವೆ ತರುಣಿಯ ರೂಹು ನೆಲದೊಳು ಎದ್ದಿತು.

'ಪುರಸ್ತನ್ವ್ಯಾ ಗೋತ್ರಸ್ಖಲನ . . .'

೫೨. ನಾಯಕೋಕ್ತಿ

ಬಳಿಕ ತಿಳಿದು ಹೊಳೆದು ಮೆರೆಯುವರುಣಕಾಂತಿಯಾ ಕಪೋಲದಾ ಮನಸ್ವಿನಿ
ರೂಢವಾದ ಪ್ರಣಯದೊಂದು ಅಣಕದಿಂದ ಗಡಸುಗೊಂಡ ತನ್ನದೊಂದು ದನಿಯೊಳು
ಓಹೊ ಚಿತ್ರವಿದುವಿಚಿತ್ರವೆಂದು ಅಶ್ರುಕಲುಷರೋಷದಿಂದಲಂದು ಇನಿಯಳು
ಬ್ರಹ್ಮಾಸ್ತ್ರವೆಸೆಯುವಂತೆ ತಲೆಯಮೇಲೆ ವಾಮಚರಣವಿಟ್ಟಳು.

'ತತಶ್ಚಾಭಿಜ್ಞಾಯ ಸ್ಫುರದರುಣ . . .'

೫೩. ನಾಯಕೋಕ್ತಿ

'ಕಠಿನ ಹೃದಯಳೆ' ಕಟ್ಟು ಕಥೆಯಿಂದೊಗೆದ ಭ್ರಾಂತಿಯನುಳಿವುದು
ಪಿಶುನ ವಚನಗಳಿಂದಲೆನ್ನನು ತಗದು ಬೇಗುದಿಗೊಳಿಪುದು
ಹೇಳು ನಿಸ್ಸಂಕೋಚದಿಂದೆನಗಾವ ಶಿಕ್ಷೆಯ ನೀನು ನಿಶ್ಚಯಿಸಿರುವುದು
ಪ್ರಿಯಳೆ ನಿನಗಭಿರುಚಿತವಾವುದು ಅದನು ವಿಧಿಸುತ ನೀನು ಸುಖದಿಂದಿರುವುದು.

'ಕಠಿನ ಹೃದಯೇ ಮುಂಚ ಭ್ರಾಂತಿಂ . . .'

೩೮. ಕವಿವಾಕ್ಯ

ಪ್ರಾಣನಾಥನ ಕೊರಳ ಮೂಢಳದೇಕೆ ಬಿಗಿದೆಳೆದಪ್ಪಿಕೊಳದಾದೆ
ಏಕೆ ನೋಡದೆಹೋದೆ ಮುದ್ದಿಡುವಂದು ಮೊಗವನದೇಕೆ ತಗ್ಗಿಸಿದೆ
ಬೇಡವೆಂದೇಕೆಂದೆನೆಂದಾ ನವವಧೂಚೇಷ್ಟಿತವ ನೆನೆದವಳು
ತರುಣಿ ಪ್ರೇಮೋದಯದೆ ಪಶ್ಚಾತ್ತಾಪಪಡುವಳು ರಸವನರಿತವಳು

'ಶ್ಲಿಷ್ಟಃ ಕಂಠೇ ಕಿಮಿತಿ ನ ಮಯಾ . . .'

೩೯. ನಾಯಿಕಾವಾಕ್ಯ

ಆರ ಹೆಸರನು ಕೇಳಿದೊಡನೆಯೆ ನವಿರು ನಿರಿನಿರಿ ನಿಮಿರಿ ನಿಲುವುದೊ ಮೈಯೊಳು
ಆರ ವದನೇಂದುವನು ಕಂಡೊಡನಿಂದು ಕಾಂತವನನುಸರಿಸುವುದೊ ತನುವಿದು
ಅಂಥ ನನ್ನಾ ಪ್ರಾಣನಾಥನೆ ಬಂದು ಕೊರಳಪ್ಪುಗೆಯ ಸನಿಹದೊಳಿದ್ದರೆ
ವಜ್ರ ಕರ್ಕಶಳಾದರೂ ನಾ ಮಾನಚಿಂತಾಭಗ್ನವಾದವಳಾಗುವೆ

'ಶ್ರುತ್ವಾ ನಾಮಾಪಿ ಯಸ್ಯ . . .'

೬೦. ನಾಯಿಕಾವಾಕ್ಯ

ಹಣೆಯೊಳಲತಿಗೆ ಗುರುತು ಮೆರೆವುದು ಗಳದೊಳಂಗದ ಮುದ್ರೆ ತೋರುವುದು
ಬಾಯಿ ಕಾಡಿಗೆಗಪ್ಪನಾಂತುದು ಕಣ್ಣು ತಂಬುಲಗೆಂಪು ತಾಳಿಹುದು
ಕೋಪ ಬರಿಸುವ ಪ್ರಿಯನ ಮಂಡನವಿದನು ನೀಡುಂ ನೋಡಿ ಬೆಳಗಿನೊಳು
ಹುಲ್ಲೆಗಣ್ಣವಳುಸಿರು ಬಿಟ್ಟಳು ಕೈಯೊಳಾಟಕೆ ಹಿಡಿದ ತಾವರೆ ಹೂವಿನೊಡಲಿನೊಳು.

'ಲಾಕ್ಷಾಲಕ್ಷ್ಮಲಲಾಟಪಟ್ಟಮಭಿತಃ . . .'

೬೧. ಪ್ರವಾಸಕಥನ

'ಕಣ್ಣ ನೀರನು ಸುರಿದು ಶಪಥಂಗೈದು ಚರಣಕೆ ಮಣಿದು ತಾನಂದು
ಇತರ ಪ್ರಿಯತರ ಕಾರ್ಯದಿಂದಾ ಪ್ರಾಣನಾಥನ ಪಯಣವನು ತಡೆದು
ನಾನು ಧನ್ಯಳು ತೆರಳು ಮಂಗಳ ಸುದಿನವಪ್ಪುದು ನೀನು ಹೊರಟಿಹುದು
ಬಳಿಕ ಕೇಳುವೆ ಒಲವಿಗನುಗುಣವಾವುದದನೆಯೆ ಗೈದೆ ನಾನೆಂದು.'

'ಲೋಲೈರ್ಲೋಚನವಾರಿಭಿಃ . . .'

೬೨. ಪ್ರವಾಸಕಥನ

ಸೆರಗಿನಿಂದ ಬಳ್ಳಿದೋಳ ಬಿಗಿಯಲಿಲ್ಲ, ಬಾಗಿಲೆದುರು ನಿಲ್ಲಲಿಲ್ಲ,
ಕಾಲಮೇಲೆ ಮತ್ತೆ ಮತ್ತೆ ಬೀಳಲಿಲ್ಲ, ನಿಲ್ಲು ಎಂದು ಹೇಳಲಿಲ್ಲ,
ಮುಗಿಲಿನಿಂದ ಮಲಿನಗೊಂಡ ಮಳೆಯ ದಿನದೊಳಂದು ಶಠನು ತೆರಳುತಿರಲು
ಕಣ್ಣನೀರ ಸರಿಯತೊರೆಯ ನೆರೆಯದೊಂದರಿಂದಲಸಿಯಳವನನಿರದೆ ತಡೆದಳು

'ಲಗ್ನಾನಾಂಶುಕಪಲ್ಲವೇ. . .'

೬೩. ನಾಯಿಕಾವಾಕ್ಯ

ನಂಬಿ ಸಖಿಯರ ನಡೆವುದಿರಲಾ ನನ್ನ ಮನದಾಶಯದ
ಸಾರವನರಿಯುವಿನಿಯನೊಳು
ಭಾವಗರ್ಭಿತ ದೃಷ್ಟಿಯರ್ಪಣಗೈಯಲಿಂದಸಮರ್ಥ
ಳಾದೆನು ವ್ರೀಡೆಯಿಂದಾನು
ಪರರ ಪರಿಹಾಸದೊಳು ಚತುರರು ಅತುಲ ಸೂಕ್ಷ್ಮೇಂಗಿತರು
ಲೋಗರು ಸುತ್ತಣೀ ಜನರು.
ತಾಯೆ ಆರನು ಶರಣುಹೋಗಲಿ ಹೃದಯದೊಳಗೆಯೆ ಒಲವಿ
ನುರಿಯಿರದುಡುಗುತಿಹುದಿಂದು.

'ಆಸ್ತಾಂ ವಿಶ್ವಸನಂ ಸಖೀಷು. . .'

೬೪. ನಾಯಿಕಾವಾಕ್ಯ

ನನ್ನ ನಲ್ಲನು ಬಂದು ಎದುರೊಳು ನಿಂದು ನಲ್ಮೆಯ ಸವಿಯ ನುಡಿಯೊರೆಯೆ
ನನ್ನ ಇಂದ್ರಿಯವೆಲ್ಲ ಕಣ್ಣಾಗುವುದೊ ಕಿವಿಯಾಗುವುದೊ ನಾನರಿಯೆ.

'ನ ಜಾನೇ ಸಂಮುಖಾಯಾತೇ. . .'

೬೫. ನಾಯಕೋಕ್ತಿ

'ಬಹಳ ಚಿಂತೆಯ ಮೋಹ ಭಾರದೊ
ಳಿಂತು ಚಲಿಸದೆ ಸಹಜ ಶೋಭೆಯ
ಬಳುಕಿ ನಿಲುವೀ ತೊಡವು ಮಾತ್ರದೊ
ಳಿಂದು ನೀನಿರೆ ನೋಡಿದೊಡನೆಯೆ
ನಿನ್ನ ಈತನು ಚಕಿತಗೊಳಿಸುವುದೆನ್ನನು'

'ಅನಲ್ಪ ಚಿಂತಾಭರಮೋಹವಿಹ್ವಲಾ. . . .'

೬೬. ಕವಿವಾಕ್ಯ

ಇಂತು ನಲ್ಲನು ಕೇಳುತಿರಲಾ ಮಾನವಿಹ್ವಲೆ
ಎಂತೊ ಕಂಬನಿತಡೆದು ಗದ್ಗದ ದನಿಯೊಳು
ಇಲ್ಲವೇನೂ ಎಂದು ವಧು ತಾನೇನನೊರೆದಳೊ
ಅನಿತರಿಂದಲೆ ಅವನಿಗವಳಿಂದಾವುದಾದುದವರ್ಣ್ಯವು !

'ಇತಿ ಪ್ರಿಯೇ ಪೃಚ್ಛತಿ ಮಾನವಿಹ್ವಲಾ. . .'

೬೭. ನಾಯಿಕಾವಾಕ್ಯ

ತನುವ ತನುಗೈದಿಹನು ವಾಮನು ವಿರಹ ವಿಷಮನು ಕಾಮನು
ದಿವಸಗಣನಾ ದಕ್ಷನಾದನು ದಯವಿಹೀನನು ಕಾಲನು
ನೀನೊ ಮಾನವ್ಯಾಧಿಗೊಳಗಾಗಿರುವೆ ನಾಥನೆ ಯೋಚಿಸು
ಚಿಗುರವೊಲು ಮೃದುವಾದ ಪ್ರಮದಾ ಜನರು ಪೇಳೆಂತುಳಿವುದು.

'ವಿರಹವಿಷಮಃ ಕಾಮೋ. . .

೬೮. ಕವಿವಾಕ್ಯ

ಕಾಲಿಗೆರಗಲು ಬಹಳ ಹೊತ್ತಿಂತೇಕೆ ಮುಗ್ಧೆಯೆ ನಿನ್ನ ತನು ಬಾಗಿರುವುದು
ತಪ್ಪು ತಗ್ಗಿರಲಿನಿಯನೊಳು ಮತ್ತೇಕೆ ನೀನಪರಾಧವನೆ ಚಿಂತಿಸುವುದು
ಹೀಗೆ ಪರಿಜನ ಕಥನದೊಳು ಕೋಮಲೆಯ ಕೋಪಾವೇಗ ಶಾಂತಿಯೊಳದ್ದುದು.
ಕಣ್ಣ ನೀರಿನ ಹೊನಲು ತುಂಬಿದುದುದುರಲಾರದು ನಿಲ್ಲಲೂ ತಾನಾರದು.

'ಪಾದಾಸಕ್ತೇ ಸುಚಿರಮಿಹ ತೇ. . .'

೬೯. ನಾಯಿಕಾವಾಕ್ಯ

ಮೊದಲು ಬೇರ್ಪಡದೊಂದೆ ಮೈ ನಮಗೆಂಬ ರೀತಿಯಲಂತು ನಾವಿರುತಿದ್ದೆವು.
ಬಳಿಕ ನೀನೋ ಪ್ರಿಯನು ನಾನು ಹತಾಶೆ ಪ್ರಿಯತಮೆಯಾಗಿ ನಾವಿರುತಿದ್ದೆವು.
ಈಗ ನಾಥನು ನೀನು ನಾನೋ ಮಡದಿ ಮುಂದಿದರಾಚೆಗಿನ್ನೇನೆಂಬೆನು !
ಪಡದೆ ನಾನಿಂದಿಂತು ನೋಡೀ ಕುಲಿಶ ಕರ್ಕಶವಾದ ಪ್ರಾಣದ ಫಲವನು !

'ತಥಾಭೂದಸ್ಮಾಕಂ ಪ್ರಥಮಮವಿಭಕ್ತಾ. . .'

೭೦. ನಾಯಿಕೆ ಮತ್ತು ಸಖಿ ಇವರ ಸಂವಾದ

'ಮುಗ್ಧೆ ಮುಗ್ಧತೆಯಿಂದಲೇ ನೀ ಕಾಲವೆಲ್ಲವನಿಂತು ಕಳೆಯುತಲಿರುವೆಯ
ಹೂಡು ಕೆಚ್ಚನು ತೋರು ಮುನಿಸನು ದೂರವಿರಿಸೌ ನಲ್ಲನೊಳು ನೀ ಋಜುತೆಯ'
ಇಂತು ಸಖಿ ಸಂಬೋಧಿಸುತ್ತಿರಲಾಕೆ ಬೆದರಿದ ಮೊಗದೆ ಮರುನುಡಿ ನುಡಿದಳು
ಮೆಲ್ಲನುಸುರೌ ಕೇಳಿಸೀತೀ ನನ್ನ ಹೃದಯದೊಳಿರುವ ನಲ್ಲನಿಗೆಂದಳು.

'ಮುಗ್ಧೇ ಮುಗ್ಧತಯೈವ ನೇತುಮಖಿಲಃ. . .'

೨೧. ಅಭಿಸಾರಿಕೆ

'ಹೊರಟಿರುವೆ ಕರಭೋರು ಘನ ನಿಶಿಯೊಳೆತ್ತ'
'ನನ್ನ ಪ್ರಾಣಾಧಿಕನು ನಲ್ಲನಿರುವತ್ತ'
'ಬೆದರೆಯೆಲೆ ಬಾಲೆಯೆಂತೇಕಾಕಿ ನೀನು'
'ಗರಿಯಂಬಿನೀ ಮದನ ಜೊತೆಗಿಲ್ಲವೇನು!'

'ಕ್ವ ಪ್ರಸ್ಥಿತಾಸಿ ಕರಭೋರು. . . .'

ಕವಿವಾಕ್ಯ

೨೨. ಧೂರ್ತ

ಅನ್ಯವನಿತೆಯು ತುಟಿಯ ಕಚ್ಚಿರುವಿನಿಯನನು ತಾ
ಕೈಯ ತಾವರೆಯಿಂದ ಹೊಡೆದಂದು
ಅದರ ಕೇಸರದಿಂದ ದೂಷಿತವಾದುದೀಕ್ಷಣ
ವೆಂದು ಆ ಕ್ಷಣ ಮುಚ್ಚಲಕ್ಷಿಯನು
ಭ್ರಾಂತಿಯಿಂದಾ ಮುಗ್ಧೆ ಕುಟ್ಮಲಿತಾನನೇಂದುವಿ
ನಿಂದೆ ಗಾಳಿಯನೂದುತಿರುವಂದು
ಧೂರ್ತನಾದುದರಿಂದಲಾತನು ನಮನಗೈಯದೆ
ಅವಳ ನೀಡುಂ ಮುದ್ದಿಸಿದನಂದು.

'ಲೀಲಾ ತಾಮರಸಾಹತೋ. . . .'

೨೩. ಕವಿವಾಕ್ಯ

'ಎದೆಯು ಸೀಳಲಿ ತನ್ನ ಮನಬಂದವೊಲು ಮದನನು ಮೈಯ ಕುಂದಿಸಲಿ
ಚಪಲ ಪ್ರೇಮದ ನಲ್ಲನೊಳು ನನಗೆಸಕವಿಲ್ಲವು ಕೇಳು ಓ ಆಲಿ!'
ಹರಿಣಲೋಚನೆ ತನ್ನ ಮಾನಾವೇಶದುಬ್ಬಿನ ಬಿರುಸೊಳಿಂತೊರೆದು
ಹೋದ ರಮಣನ ಹಾದಿಯನೆ ತಾ ಬಿಡದೆ ನಿಟ್ಟಿಸುತಿದ್ದಳಿರದಂದು.

'ಸ್ಫುಟತು ಹೃದಯಂ ಕಾಮಃ ಕಾಮಂ, . . .'

೨೪. ನಾಯಕಾವಾಕ್ಯ

ಗಾಢಾಲಿಂಗನದಿಂದುದುರಿರುವೀ ಚಂದನ ಧೂಳಿಯ ರಾಶಿಯಲಿ
ಬಿಟ್ಟಿತು ಹಾಸುಗೆ ಓ ತನ್ವಂಗಿಯೆ ನೋಡೆಂದಿನಿಯನು ಹೇಳುತಲಿ
ಬರಸೆಳೆದೆನ್ನನು ವಕ್ಷದೊಳಾನುತೆ ಮನವನು ಕೆರಳಿಸಿ ತುಟಿಕಚ್ಚಿ
ಉಟ್ಟಿರುವೆನ್ನಂಬರವನು ಸೆಳೆಯುತೆ ಅಡಿವೆರಳಿಕ್ಕುಳದಿಂದುರ್ಚಿ
ತತ್ಕಾಲೋಚಿತ ಕರ್ಮವ ನೆನೆಯುತೆ ಧೂರ್ತನು ನೆಗಳಿದನದನಂತೆ.

'ಗಾಢಾಶ್ಲೇಷವಿಶೀರ್ಣಚಂದನರಜಃ. . . .'

೭೫. ಕವಿವಾಕ್ಯ

ಎಂತೊ ಧಿಕ್ಕರಿಸುತ್ತ ನಲ್ಲನಿಗವಳು ತೊದಲುತ್ತರವನೀಯುತಲಿದ್ದಳು
ವಿರಹಕೃಶೆ ತಾನಾವುದೋ ನೆವದಿಂದ ಕೇಳಿಸದೊಂದು ಸೋಗಿನೊಳಿದ್ದಳು
ತನ್ನ ಅಸಹನ ಸಖಿಯು ಕೇಳಿಸಿಕೊಳುವಳೆಂದಿರದವಳು ಶಂಕಾತುರದೊಳು
ಒಡನೆ ತನ್ನ ಬೀಳುನೋಟವ ಶೂನ್ಯಗೇಹದೊಳಿಟ್ಟು ನಿಟ್ಟುಸಿರೆಳೆದಳು.

'ಕಥಮಪಿ ಕೃತ ಪ್ರತ್ಯಾಖ್ಯಾನೇ. . . .'

೭೬. ಪ್ರವಾಸಕಥನ

ಕಣ್ಣು ಹರಿಯುವ ತನಕ ನಲ್ಲನ ಹಾದಿಯನು ತಾ ನೋಡಿ ಖೇದವನಾನುತೆ
ಹಗಲು ಮುಗಿಯಲು ಜನದ ಸುಳಿವಳಿದಿರುವ ದಾರಿಯ ಕವಿದು ಕತ್ತಲೆ ಹಬ್ಬಲು
ಮನೆಯ ಕಡೆಗೆಂದೊಂದು ಹೆಜ್ಜೆಯ ದುಗುಡದಿಂದಿಡುತೊಡನೆ ಕತ್ತನು ತಿರುಹುತೆ
ಮರಳಿ ಬಂದಿರಲಾರನೇನೀಕ್ಷಣದೊಳೆನ್ನುತೆ ನೋಡುತಿದ್ದಳು ಪಥಿಕಜನವನಿತೆ.

'ಆದೃಷ್ಟಿಪ್ರಸರಾತ್ ಪ್ರಿಯಸ್ಯ. . . .'

೭೭. ಕವಿವಾಕ್ಯ

ನೂರು ತೆರನ ಮನೋರಥಂಗಳಿನೆಂತೊ ಹಗಲದು ಕಳೆದು ತಾನೈತಂದ ಬಳಿಕಿನಿಯು
ರಸಿಕ ಬುದ್ಧಿಯನರಿಯದೆಯೆ ಜಡರಾದ ಪರಿಜನರಿರದೆ ತೊಡಗಿರೆ ಮತ್ತೆ ನಿಡುಗತೆಯು
ಕಚ್ಚಿತೇನೋ ಎಂದು ಹೇಳುತೆ ಒಡನೆ ರೇಸಿಮೆಸೀರೆ ಸೆರಗನು ಕೊಡಹಿ ಹಾರಿಸುತೆ
ದೀಪ ಕಳಿಕೆಯನಸಿಯುಳಿರದಂದಾರಿಸಿದಳಾಮತ್ತ ನಿಜರತಿಚಿತ್ರ ಕಾತರಿತೆ.

'ಆಯಾತೇ ದಯಿತೇ ಮನೋರಥಶತೈಃ . . .'

೭೮. ಪ್ರವಾಸಕಥನ

ಸುತ್ತ ಹರಹಿದ ಹೂವು ಹುಡಿಯನು ಕುಡಿಯಲಾಶಿಸಿ
ಮೊರೆವ ಪೆಣ್ದುಂಬಿಗಳ ತಳಿದೆಸೆದು
ನಲಿವ ನಮ್ಮಂಗಳದ ಬಾವಿಯ ಬಳಿಯ ಮಾವಿನ
ಮರದ ಮಂಜರಿಯೊಂದ ತಾ ಹಿಡಿದು
ನೆನೆವೆನವಳನು ಹೊದೆದ ವಲ್ಲಿಯ ಸೆರಗಿನಿಂದಾ
ಬಾಲೆ ಮೊಗವನು ಮುಚ್ಚಿಕೊಳುತಂದು
ಹೊಳೆವ ಕೊರಳಿನ ದನಿಯ ಕುಗ್ಗಿಸಿ ಕುಚವ ಕುಣಿಸುವ
ಉಸಿರನೆಳೆದೆಳೆದಳುತಲಿಹಳೆಂದು.

'ಆಲಂಬ್ಯಾಂಗಣವಾಟಿಕಾ ಪರಿಸರೇ. . . .'

೭೯. ನಾಯಿಕಾವಾಕ್ಯ

ಹೋಗಿ ಬರುವೆನೆಂದು ತೆರಳಲಿರುವ ನಲ್ಲನೆಂದ
ನುಡಿಯ ಶಾಂತಳಾಗಿ ಕೇಳಿದೆ
ದೂರಹೋಗುತ್ತಿದ್ದ ನಲ್ಲನೆನಿತೊ ತಿರುಗಿ ತಿರುಗಿ
ನಿಂತರೂ ಉಪೇಕ್ಷೆ ಮಾಡಿದೆ
ಅವನು ತೊರೆದ ಮನೆಯೊಳಿಹೆನು ನನ್ನ ಜೀವವಿಂತು
ಗಟ್ಟಿಯಾಗಿ ಉಳಿದು ನಿಂತಿದೆ
ಜೀವದಾಸೆ ಇರುವ ನಾನೊ ದಂಭಕಾಗಿ ಅಳುತಲಿಹೆನು
ಸುಮ್ಮನಿರುವುದೋವೊ ಸಖಿಯರೆ!

'ಯಾಸ್ಯಾಮೀತಿ ಸಮುದ್ಯತಸ್ಯ. . . .'

೮೦. ಸಖೀವಾಕ್ಯ

ಗುಣಿಸಿ ನೋಡದೆ ಪ್ರೇಮ ಫಲವನು ಸುಹೃದರೆನಿಪರ ನುಡಿಯ ಲೆಕ್ಕಿಸದೆ
ನೀನಕಾಲದೊಳಿಂತಿದೇತಕೆ ತರಳೆ ಕೋಪವ ತೋರಲಾಶಿಸಿದೆ
ನೀನೆ ಮತ್ತೀ ಪ್ರಳಯದಗ್ನಿ ಜ್ವಾಲೆಯಂತೆಸೆದುರಿವ ಕೆಂಡವನು
ನಿನ್ನ ಕೈಗಳಿನೆಳೆದುಕೊಂಡಿಹೆ ಸಾಕು ನಿಲ್ಲಿಸರಣ್ಯ ರುದಿತವನು.

'ಅನಾಲೋಚ್ಯಪ್ರೇಮ್ಣಃ . . . .'

೮೧. ನಾಯಕೋಕ್ತಿ

ನಿನ್ನ ಕೆನ್ನೆಯ ಪತ್ರರಚನೆಯನೊತ್ತಿ, ಕರತಲವಳಿಸಿದೆ!
ಅಮೃತ ಮಧುರದ ಅಧರ ರಸವನು, ಮತ್ತೆ ನಿಟ್ಟುಸಿರೀಂಟಿಹೆ!
ಕೊರಳ ಸೆರೆ ಬಿಗಿಹಿಡಿದ ಗದ್ಗದ, ನಡುಗಿಸುತ್ತಿಹುದೆದೆಯನು!
ನಿರನುರೋಧೆಯೆ! ಅಲ್ತು ನಾನಾ ಮನ್ಯು ನಿನಗಿಂದಿನಿಯನು!

'ಕಪೋಲೇ ಪತ್ರಾಲೀ . . .'

೮೨. ಕವಿವಾಕ್ಯ

ಶಯನಮಂದಿರ ಶೂನ್ಯವಾದುದನರಿದು ಮೆಲ್ಲನೆ ಹಾಸನಿರದುಳಿದೇಳುತೆ
ಸೋಗುನಿದ್ದೆಯೊಳಿದ್ದ ನಲ್ಲನ ಮುದ್ದು ಮೊಗವನು ಬಾಲೆ ನೀಡುಂ ನೋಡುತೆ
ಶಂಕೆಯಿಲ್ಲದೆ ಮುತ್ತನೊತ್ತಿರಲೊಗೆದ ಗಂಡಸ್ಥಲದ ಪುಲಕವ ಕಾಣುತೆ
ಬಾಲೆ ನಾಚುತೆ ಮೊಗವ ತಗ್ಗಿಸಲಿನಿಯ ನೀಡುಂ ಮುದ್ದಿಸಿದ ನಗುತೆ.

'ಶೂನ್ಯಂ ವಾಸಗೃಹಂ ವಿಲೋಕ್ಯ . . .'

೮೩. ಕವಿವಾಕ್ಯ

ಬಳ್ಳಿಹುಬ್ಬನು ಕುಣಿಸಿ ತೋರಲು ಸವತಿ ದಿಕ್ಕನು, ತಲೆಯ ಕೊಡಹಿದನು.
ಅದರ ವೃತ್ತಾಂತವನು ನೋಡಲು, ನಿಂತನಿನಿಯನು, ಮಾಡಿ ನಮನವನು.
ಕೆನ್ನೆ ಕೋಪಕೆ ಕೆಂಪಗಾಗಲು, ಕಾಲೊಳಿಟ್ಟನು ಕಣ್ಣನೋಟವನು.
ಬಿಡರು ಗುರುಸನ್ನಿಧಿಯೊಳಾದರು ಅವರು ಕಾಲೋಚಿತದ ಕರ್ಮವನು.

'ಲೋಲದ್ಭ್ರೂಲತಯಾ . . .'

೮೪. ನಾಯಿಕಾವಾಕ್ಯ

ಬಗೆಯ ಕದಡದೆ ಕುಚವ ಸೋಂಕದೆ ಮೈಯ ಪುಳಕಂಗೊಳಿಸದೆ
ಬೆವರು ಹನಿಯನು ಮೊಗದೆ ಬರಿಸದೆ ಶಠನ ಕಂಡೊಡನೆನ್ನದೆ
ಮಾರು ಹೋದುದು, ಕೇಳು ನನ್ನೀ ಮನವನಿನಿಯನು ಕದ್ದನು!
ಧೈರ್ಯಗೆಡಿಸುವ ಪ್ರಾಣನಾಥನ ಬಳಿಯೊಳೆನ್ನೀ ಮುನಿಸನು
ಆವ ನಿಪುಣೋಪಾಯಗಳನೆಸಗುತ್ತಲಿದನಾ ನಿಲಿಪೆನು?

'ಜಾತಾ ನೋತ್ಕಲಿಕಾ . . .'

೮೫. ಪ್ರವಾಸಕಥನ

ನಿಡಿದು ನೋಡಿದಳವಳು ಕಾತರಗೊಂಡ ಕಣ್ಣೊಳು ಬೊಗಸೆಗೈಗಳನೊಡ್ಡಿ ಬೇಡಿದಳು.
ಹಿಡಿದು ಕೊಂಡಳು ಬಳಿಕ ವಲ್ಲಿಯಸೆರಗ ನಾಬಳಿಕಿರದೆ ನಲ್ಲನ ಕೆಮ್ಮನಪ್ಪಿದಳು.
ಇಂತಿದೆಲ್ಲವ ತೊರೆದು ನಿರ್ದಯಶಠನು ತಾನಿರದೈದಲನುವಾದಂದು ಆ ದಯಿತೆ
ಮೊದಲು ಬಿಟ್ಟಳು ಜೀವದಾಸೆಯ, ಬಳಿಕ ಬಿಟ್ಟಳು ಹಿಡಿದ ನಲ್ಲನ ಕೈಯ ತಾನಂತೆ.

'ದೃಷ್ಟಃ ಕಾತರನೇತ್ರಯಾ ಚಿರತರಂ. . . .'

ಪ್ರವಾಸಕಥನ

೮೬. ವಿರಹಿ

ನನ್ನ ನಿಡಿದಗಲಿಕೆಯ ಬೆಂಕಿಯೊಳುರಿದು ಸಲೆ ಬೆಂದು
ಬೆಳ್ಳಗಾಗಿರುವಿನಿಯಳೆದೆಯೊಳು ಕಣ್ಣ ಹನಿಬಿಂದು
ದಾರಿಯೊಳೆ ನೆಟ್ಟಿರುವ ಕುಗ್ಗಿದ ನೋಟದಿಂದಿಳಿದು
ಚೊಂಯ್ಯ ಚೊಂಯ್ಯನೆ ಬೀಳುತಿಹವೆಂದೂಹಿಸುವೆನಿಂದು.

'ತಪ್ತೋ ಮಹಾವಿರಹವಹ್ನಿ. . . .'

೮೭. ಪ್ರವಾಸಕಥನ

ಅಂತು ಚಿಂತಾ ಮೋಹನಿಶ್ಚಲ ಮೌನಮನದಿಂದವಳ
ಪಾದಾನತನು ತಾನಾದಾತನು
ತೆರಳಲನುವಾದಂದು ಪ್ರಿಯತಮನವಳ ಧಿಕ್ಕಾರದೊಳು
ನೊಂದವನುರುಪರಾಙ್ಮುಖನು
ಸಂತತವು ಕವಿದಿಳಿವ ಬಾಷ್ಪದೊಳಾಕುಲಂಗೊಳು
ತಿರುವ ವ್ರೀಡಾಲಸದ ನೋಟದೊಳು
ತನ್ನ ಶ್ವಾಸೋತ್ಕಂಪಿಕುಚವನು ನೋಡಿ ನೀಡುಂ
ತಡೆದಳವನನು ಜೀವದಾಶೆಯೊಳು.

'ಚಿಂತಾಮೋಹವಿನಿಶ್ಚಲೇನ. . . .'

೮೮. ಕವಿವಾಕ್ಯ

ಕಂದಿ ಕುಂದಿದ ಬಿಳಿಚಿಕೊಂಡಿಹ ಲಾಸವಿಲ್ಲದ ಕವಿದ
ಮುಂಗುರುಳಿಳಿದ ಮಂದಾನನವನು
ತೆರಳಿದವನೈತಂದ ಒಡನೆಯೆ ಮರಳಿ ತಾನಾಮಧುರ
ಕಾಂತಿಯನಾಂತು ಮೆರೆವಾನನವನು
ಸುರತ ಕೇಲೀಕಾಲದತ್ಯಾನಂದ ರಭಸದ ಸರಸ
ಸಾಟೋಪಾತ್ತ ರಾಗಾನನವನು
ಒರೆವುದೆಂತಾ ಸುತನುವದನವನಂದು ನಾನೆಳೆದೀಂಟೆ
ಲಮಿತಾನಂದವಾದಾ ಪರಿಯನು.

'ಮ್ಲಾನಂ ಪಾಂಡು ಕೃಶಂ. . . .'

೮೯. ನಾಯಿಕಾವಾಕ್ಯ

ನಾನೆ ಇಂದಾ ಪ್ರಮದೆಯಾಗಿಹೆನವುಗಳೇ ಈ ಬಳೆಗಳು
ಸಹಜಲಜ್ಜಾಧನರು ನಾರಿಯರೀ ಅವೃತ್ತಿಯು ನಮ್ಮದು
ಇಂಥ ಪುರುಷಾಯತದ ಈ ವಿಪರೀತವಾಗಿಹ ರತಿಯೊಳು
ನೆನವು ಮರಳಲು ಇಂತು ನಾಚುತೆ ನನ್ನ ಮೈಯನು ತಿಳಿದೆನು
ಮೊದಲು ಪುಂಭಾವವನು ತೊರೆದೆನು ಬಳಿಕ ತೊರೆದೆನು ಪತಿಯನು.

'ಸೈವಾಹಂ ಪ್ರಮದಾ. . . .'

೯೦. ಕವಿವಾಕ್ಯ

ಚಿಗುರುಗೈಯನು ಚಾಚಿ ಬಳಚುತಲರಸುತಿರುವಳು ತನ್ನ ಕಳೆದುಡೆಯ
ಹರಿದ ಹೂವಿನ ಮಾಲೆಯುಳಿಕೆಯನೆಸೆದು. ಕೆಡಿಪಳು ದೀಪದೆಳೆಕುಡಿಯ
ಪತಿಯ ಕಣ್ಗಳಲಿರಿಸಿ ಕಣ್ಗಳ ಮರಳಿ ನೋಳ್ಪಳು ಸೂಸುತೆಳನಗೆಯ
ಸುರತ ವಿರತ ಸಮಾಕುಲಾಂಗನೆ ಮೆರೆವಳೀ ತೆರದೊಂದು ನವ ಪರಿಯ.

'ಕರಕಿಸಲಯಂ ಧೂತ್ವಾ ಧೂತ್ವಾ. . . .'

೯೧. ಸಖೀವಾಕ್ಯ

ಇಲ್ಲಿ ಮನೆಮನೆಯಲ್ಲಿ ಯುವತಿಯರಿಹರು ನಿನ್ನವೊ
ಲವರ ಬಳಿ ನೀ ಹೋಗಿ ಕೇಳಿಂದು
ಅವರ ನಲ್ಲರು ದಾಸನಂತಹ ನಿನ್ನ ನಲ್ಲನ
ತೆರದೊಳವರಿಗೆ ಮಣಿವರೇನೆಂದು
ಆತ್ಮವಂಚಕಿ! ಎಂದಿಗೂ ಕಿವಿಗೊಡುವುದಾಗದು
ನೀನು ಆ ದುರ್ಜನರ ನುಡಿಗೊಲಿದು
ಸ್ನೇಹರಸ ತಾನೊಮ್ಮೆ ಕಡಿದರೆ ಮತ್ತೆ ಪುರುಷರ
ಕೆಳೆಯು ಪಡೆವುದು ಕಠಿನವೆನಿಸುವುದು.

'ಸಂತ್ಯೇವಾತ್ರ ಗೃಹೇ ಗೃಹೇ. . . .'

೯೨. ನಾಯಿಕಾವಾಕ್ಯ

ಮೊಗವ ದಹಿಸುತಲಿಹುದು ನಿಟ್ಟುಸಿರಿರದೆ ಬೇರ್ವೈರಸದೆಯು ಬಿರಿಯುತಲಿರುವುದು.
ನಿದ್ದೆ ಬಾರದು ಪ್ರಿಯನ ಮುಖ ಕಾಣಿಸದು ಕಂಬನಿ ಹಗಲು ಇರುಳೂ ಸುರಿವುದು.
ದೇಹ ಒಣಗುತಲಿಹುದು ಪಾದಾನತನ ದಯಿತನನಂತುಪೇಕ್ಷಿಸಲಾದುದು.
ಹೇಳಿ ಸಖಿಯರೆ! ಆವ ಲಾಭಕೆ ಮಾನವನು ತೋರಿನಿಯನೊಳು ನೀನೆಂದುದು.

'ನಿಶ್ವಾಸಾ ವದನಂ ದಹನ್ತಿ. . . .'

೯೩. ನಾಯಿಕಾವಾಕ್ಯ

ಇಂದು ಮೊದಲಿಂದಿನಿಯನೊಳು ನಾ ಮರಳಿ ಮುನಿಸನು ಮರೆದು ತೋರಿದೆನಾದರೆ
ಅಲ್ಲದಿರಲೀ ಒರಟುಮನದೊಳಗನ್ಯರೀತಿಯೊಳಿನಿತನಾದರು ನೆನೆದರೆ
ಇನಿಯನಿಲ್ಲದ, ತುಂಬುತಿಂಗಳ ಹೊಳೆವ ಬೆಳುದಿಂಗಳಿನ ಇರುಳುಗಳನ್ನೆ ನೂಕುವುದಾಗಲಿ
ಅಲ್ಲದಿರಲಾ ವರ್ಷಋತುವಿನ ಮೋಡಗಪ್ಪಿನೊಳಿರುವ ಹಗಲನು ಕಳೆವುದೆನ್ನಿಂದಾಗಲಿ.

'ಅದ್ಯಾರಭ್ಯ ಯ ದಿಪ್ರಿಯೇ. . . .

೯೪. ನಾಯಿಕಾವಾಕ್ಯ

'ಕಪ್ಪಿದಲ್ಲವೆ?' 'ಕಪ್ಪು' 'ಪ್ರಿಯತಮ' ಬಿಳುಪಿದಲ್ಲವೆ ಅಲ್ಲದಿನ್ನೇನು!'
'ನಡೆವ ಮುಂದಕೆ' 'ಓಹೊ ನಡೆಯುವ' 'ಸಾಕು ನಡೆದುದು ನಾಥ' 'ಸರಿ ಸಾಕು'
ಆವನಿಂತನುಸರಿಸುತಿದ್ದನು ಮೊದಲು ಬಹುದಿನವೆನ್ನ ಮನವಿದನು
ಅವನೆ ಹೆರರಂತಾದನೆಲೆ ಸಖಿ ಎಂತು ಪುರುಷರೊಳಿಹುದು ಕೆಳೆ! ತಾನು!

'ಇದಂ ಕೃಷ್ಣಂ ಕೃಷ್ಣಂ. . . .'

೯೫. ನಾಯಿಕಾವಾಕ್ಯ

ಕಾಲಿಗೆರಗುವನಳುತಲೊರೆವನು ಮುದ್ದು ಮಾತನು ನುಡಿವನು
ಸೊರಗಿದಂಗವನಪ್ಪಿಕೊಳುವನು ಫಕ್ಕನೀವನು ಮುತ್ತನು
ಇಂತು ಬಹುಫಲ ಮುನಿಸೊಳಾದರು ನಾನು ಹೀನೋತ್ಸಾಹಳು
ಇನಿಯನೆನಿತೋ ಬಗೆಗೆ ಚೆಲುವನು ಮತ್ತೆ ನಾನೇಗೈವೆನು?

'ಚರಣಪತನಂ ಸಖ್ಯಾಲಾಪಾ. . . .'

೯೬. ನಾಯಕೋಕ್ತಿ

ಅಂದು ತನ್ನಾ ಹಿರಿಯರೆದುರೊಳು ಕಂಬನಿಯನೊಳಗೊಳಗೆ ತಡೆದಿರಲದರ ನೀರಿನೊಳು
ಇನಿಯನಗಲಿಕೆಯಿಂದಲುರಿಯುವನಂಗ ಶಿಖಿಯನು ನಂದಿಸಿದಳಾ ಅಸಿಯಳು
ಉಸಿರುಬಿಡುವಾಯಾಸದಿಂದಿದೊ ಚೆದುರಿ ಹಾರುವ ಅಳಿಯಮಾಲೆಯ
ಹೋಲುವಂದದೊಳು
ಆಗಲಾರಿದ ಕಿರಿಣದುರಿಯಾ ಹೊಗೆಯ ಸುರುಳಿಯಿದಿಂತು
ಮೊಗದಿಂದೊಗೆಯಿತೆಂದಿಹೆನು

'ತನ್ವಂಗ್ಯಾ ಗುರುಸನ್ನಿಧೌ . . .

೯೭. ನಾಯಿಕಾವಾಕ್ಯ

ಬಹಳ ಹೊತ್ತಿಂದಿರದೆ ಗುಣಿಸಿಹೆನೆಂತು ಮುರಿವುದು ಹುಬ್ಬನೆನುವುದನು
ಅಂತೆ ನೆನೆದಿಹೆನಿರದೆ ಬಿಂಕದೊಳೊಡನೆ ಕಣ್ಣನು ಮುಚ್ಚಿಕೊಳುವುದನು
ಮುಗುಳು ನಗೆಯನು ತಡೆವುದೆಂತೆನುವುದನು ಆದರದಿಂದ ಕಲಿತಿಹೆನು
ಸ್ಥಿರತೆಯಿಂದಿಹುದೆಂತು ಎನುವುದನೆನ್ನ ಚೇತನಕೆಂತೊ ಕಲಿಸಿಹೆನು
ಸಿದ್ಧವಾಗಿಹುದೆಲ್ಲ ಪರಿಕರವಿಂತು ಕೈಗೊಳಲಾನು ಮಾನವನು
ಸಿದ್ಧಿ ತಾನವಲಂಬಿಸಿರುವುದು ಮುಂದಕಿನ್ನಾ ದೈವದಿಚ್ಛೆಯನು.

'ಭ್ರೂಭೇದೋ ಗುಣಿತಶ್ಚಿರಂ. . . .'

೯೮. ನಾಯಿಕಾವಾಕ್ಯ

'ಬಳಿಗೆ ಬಾ ನಿನಗೊರೆವೆನೇಕಾಂತದೊಳದಾವುದೊ ಗುಟ್ಟನೊಂದನು' ಎಂದನು.
ಸರಸಹೃದಯುಳು ಚಿತ್ತವಿಟ್ಟದನಾಲಿಸಲು ನಾ ಸನಿಹದೊಳು ಕುಳಿತಿದ್ದೆನು.
ಬಳಿಕ ಕಿವಿಯೊಳದೇನನೋ ಒರೆವೊಂದು ನೆವದೊಳು ಮೂಸಿ ನನ್ನೀ ಮೊಗವನು
ಹಿಡಿದು ನಿಡು ಜಡೆಯೆಳೆದು ಕೆಳದಿಯೆ ನನ್ನ ಈ ತುಟಿ ರಸವನೀಂಟಿದನಿನಿಯನು.

'ಅಹಂ ತೇ ನಾಹೂತಾ ಕಿಮಪಿ. . . .'

೯೯. ಪ್ರವಾಸಕಥನ

ನಡುವೆ ಬೇರ್ಪಡಿಸಿಹವು ನೂರಾರೂರುಗಳು ಆ
ಬೆಟ್ಟ ಹೊಳೆಕಾಡುಗಳು ತನ್ನಿಂದವಳನು
ಎನಿತು ಯತ್ನಿಸಿ ನಿಲುಕಿ ದಣಿದರು ತನ್ನ ಕಂಗಳಿ
ಗಿನಿಯೆ ಕಾಣಿಸಳೆನುವುದನು ತಾ ಬಲ್ಲನು.
ಆದರೂ ಕೊರಳೆತ್ತಿ ನೆಲವನು ತನ್ನ ಮೆಟ್ಟುಂ
ಗಾಲೊಳೊತ್ತುತೆ ಕಂಬನಿಯನಿರದೊರಸುತೆ
ಮತ್ತೆ ಆ ದಿಕ್ಕನ್ನೆ ದಿಟ್ಟಿಸುತಂತೆ ನಿಲುವನು
ಪಥಿಕ ತಾನಿನ್ನೇನನೋ ನೆನೆನೆನೆಯುತೆ.

'ದೇಶೈರಂತರಿತಾ ಶತೈಶ್ಚ. . . .'

೧೦೦. ನಾಯಕೋಕ್ತಿ

ಕಣ್ಣ ನೋಟದ ಬೇಟದಿಂದೀ ಮನವು ಉಬ್ಬಿರೆ
ಕೆಳೆಯ ಬೆಳೆಯಿಸುವಂಥ ಬಗೆಯನು ನೆನೆದಿರೆ
ದೂತಿಕಾ ಸಂಚಾರ ಗೋಚರವಾಗುತಿರೆಯಿರೆ
ಒಲುಮೆಯಿಂಪಿನಲಂಪು ಸೊಂಪನು ತಳೆದಿರೆ
ದೂರವಿರಲಾ ದಯಿತೆಯನು ನಾ ಸೆಳೆದು ಭರದಿಂ
ದಪ್ಪಿಕೊಳ್ಳುವ ಸೊಗದ ಸವಿಸಂಮೋದವು!
ಮನೆಯ ಬಳಿಯಾ ಹಾದಿಯಲೆ ಸಲೆಸುಳಿವುದೂ ಸಹ
ಇಂದು ನನ್ನೀ ಹೃದಯಕೆಸಿತಾನಂದವು!

'ಚಕ್ಷುಃ ಪ್ರೀತಿಪ್ರಸಕ್ತೇ. . . .'

೧೦೧. ನಾಯಿಕಾವಾಕ್ಯ

ಸೆಜ್ಜೆಗಿನಿಯನು ನಲಿದು ತಾನೈತಂದ ವೇಳೆಯೊಳೊಡನೆ
ತಾನಾಗಿರದೆ ನೀವಿಯು ಜಾರಿತು
ಅಳಕವಾದೀ ಮೇಖಲೆಯು ಎಳೆಗಂಟಿಕೊಂಡುದರಿಂದ
ಉಡುಗೆ ನಿತಂಬದೊಳಗಿನಿಸುಳಿಯಿತು
ಇಷ್ಟು ಮಾತ್ರವನಿಂದು ನಾನರಿತಿಹೆನು ಕೆಳದಿಯೆ ಬಳಿಕ
ಪ್ರಿಯತಮನಂಗ ಸಂಗಮವಾದುದು
ಮುಂದೆ. ನಾನ್ಯಾರಾತನಾರಾ ರತಿಯದಾವುದು ಅರಿಯ
ದೊಂದನು ಮರವಿನೊಳು ಕರಗಿದ್ದೆನು.

'ಕಾಂತೇ ತಲ್ಪಮುಪಾಗತೇ. . . .'

೧೦೨. ನಾಯಕೋಕ್ತಿ

ಮಹಡಿ ಮನೆಯೊಳಗವಳು 'ದಿಕ್ಕುದಿಕ್ಕಿನೊಳವಳು'
ಹಿಂದವಳು ಮುಂದವಳು ಸುತ್ತ ಅವಳು
ಹಾಸುಮಂಚದೊಳವಳು ಹಾದಿಹಾದಿಯೊಳವಳು
ಎಲ್ಲೆಡೆಯೊಳೂ ಅವಳೆ ತೋರುತಿಹಳು.
ಅಕಟಕಟ! ನನ್ನೀ ಮನೋವೃತ್ತಿ ಪೆರತಲ್ಲ.
ಬೇರೊಬ್ಬಳೂ ಅವಳೆ. ಅವಳನುಳಿದಿಲ್ಲ.
ಅವಳ ನಗಲಿರುವೆನಗೆ ಸರ್ವಜಗವೂ ಅವಳೆ.
ಅದ್ವೈತವಾದವಿದು ಏನೆಂಥದು!

'ಪ್ರಾಸಾದೇ ಸಾ ದಿಶಿದಿಶಿ ಚ ಸಾ. . . .'

೧೦೩. ನಾಯಿಕಾ ವಾಕ್ಯ

ಮುಗಿಲ ಲಕುಮಿಯ ನೋಡಿ ಬಾನೊಳು ನೀರು ತುಂಬಿದ ಕಣ್ಣೊಳು
ಇನಿಯ ತೆರಳಿದೆಯಾದರೆಂದರೆವಾತನೆಂತೋ ನುಡಿದಳು
ನನ್ನ ವಲ್ಲಿಯ ಹಿಡಿದು ನೆಲದೊಳದೇನನೋ ತಾ ಬರೆದಳು
ಬಳಿಕ ಮಾತನು ನಿಲಿಸಿದವಳಾ ಮುಂಚಿನೆಸಕವಗೈದಳು.

ನಭಸಿ ಜಲದ ಲಕ್ಷ್ಮೀಂ . . . .

೧೦೮. ಕವಿವಾಕ್ಯ

ಕಾಮರಾಗದ ಹೊಳೆಯ ಹೊನಲೊಳು ಕೊಚ್ಚಿ ತೇಲುವ ಕಾಮಿಜನರಿವರು
ಬಳಿಯ ಹಿರಿಯರ ಕಟ್ಟೆಯೊಳು ತಡೆಗೊಂಡು ಅರೆಕೊರೆಯಾದ ಬಯಕೆಯೊಳು
ಬರೆದ ಚಿತ್ತಾರದೊಲು ನಿಂತಂದೊಬ್ಬರೆದುರಿನೊಳೊಬ್ಬರಾ ಪ್ರಿಯರು
ನಯನ ನಳಿನೀನಾಳದಿಂದೆಳೆದೀಂಟುತಿದ್ದರು ರಸವನಂದವರು.

ಸ್ಮರರಸನದೀ ಪೂರೇಣೋಢಾಃ . . . .

೧೦೯. ಕವಿವಾಕ್ಯ

ಪುಷ್ಪವತಿಯಾದಂದು ಕೇಳೀ ಶಯನವನು ತೊರೆದುಳಿದ ತೆಳ್ಳನೆಯವಳನು
ತುಟಿಯ ನಡುಗಿಸಿ ಹುಬ್ಬುಹಾರಿಸಿ ಸನ್ನೆಗೈಯುತಲಿನಿಯನೆರೆಯಲು ಮುತ್ತನು
ಮುಗುಳು ನಗೆಯೊಳು ಹೊಳೆವ ಕೆನ್ನೆಯ ತನ್ನ ಮೊಗವನು ಸೆರಗಿನಂಚೊಳು ಮುಚ್ಚುತೆ
ತಲೆಯನಲ್ಲಾಡಿಸಿದಳೊಯ್ಯನೆ ತೊನೆಯುವೋಲೆಯ ತುಂಬು ಜೊಂಪೆಯ ತೂಗುತೆ.

ಪುಷ್ಪೋದ್ಭೇದಮವಾಪ್ಯ . . . .

ಎಸ್. ವಿ. ಪರಮೇಶ್ವರ ಭಟ್ಟ

'ಕುವೆಂಪು' ಅವರ ಐತಿಹಾಸಿಕ ನಾಟಕಗಳು

ಐತಿಹಾಸಿಕ ನಾಟಕಗಳ ಸಾಲಿನಲ್ಲಿ ಶ್ರೀಮಾನ್ ಕುವೆಂಪು ಅವರ 'ರಕ್ತಾಕ್ಷಿ'ಗೆ ಒಂದು ಹಿರಿಯ ಸ್ಥಾನ ತೆರವಾಗಿರಬೇಕು. ಬಿದನೂರು ನಾಯಕನ ಮರಣಾನಂತರ ಆತನ ರಾಣಿ ದುರ್ನಡತೆಗೆ ಬೀಳಲು, ಹೈದರನು ಆ ರಾಜ್ಯವನ್ನು ನುಂಗಿ ನೀರು ಕುಡಿದ ಇತಿಹಾಸದ ಆಧಾರದ ಮೇಲೆ ಈ ನಾಟಕ ನಿರ್ಮಾಣವಾಗಿದೆ. ಈ ಇತಿಹಾಸದ ಘಟನೆಯನ್ನು ಬಳಸಿಕೊಳ್ಳುವಾಗ ನಾಟಕಕಾರರು ಆ ಘಟನೆಯನ್ನು ಸ್ವಲ್ಪಮಟ್ಟಿಗೆ ಹೋಲುವ ಷೇಕ್ಸ್‌ಪಿಯರ್ ಮಹಾಕವಿ ವಿರಚಿತ ಹ್ಯಾಮ್ಲೆಟ್ ನಾಟಕದಿಂದ ಸ್ವಲ್ಪಮಟ್ಟಿಗೆ ಪ್ರೇರಣೆಯನ್ನು ಪಡೆದಿದ್ದಾರೆ. ಆದರೆ ಐತಿಹಾಸಿಕ ಘಟನೆಯನ್ನೂ, ಹ್ಯಾಮ್ಲೆಟ್ ನಾಟಕವನ್ನೂ ಓದಿದ ಮೇಲೆ ಬರಬಹುದಾದ ಒಂದು ಅವ್ಯಕ್ತ ಮನಃಪರಿಣತಿಯನ್ನು ಮೆಟ್ಟಿ ಮೇಲೆದ್ದು ನಿಂತಿದೆ, ಕುವೆಂಪುರವರ ಸೃಷ್ಟಿಶಕ್ತಿ. ಮೂಲಗಳೆನಿಸಿಕೊಳ್ಳಬಹುದಾದ ಮೇಲಿನ ಸಾಮಗ್ರಿಗಳೆರಡೂ ಕವಿ ಪ್ರತಿಭೆಯ ಕಾವಿನಲ್ಲಿ ಕರಗಿ, ಕಲ್ಪನೆಯ ಅಚ್ಚಿನಲ್ಲಿ ಚಿರನೂತನವಾದ ರೂಪವನ್ನು ತಳೆದಿವೆ.

'ರಕ್ತಾಕ್ಷಿ' ನಾಟಕಕ್ಕೆ ವಸ್ತುವನ್ನು ಒದಗಿಸುವುದರಲ್ಲಿ ಇತಿಹಾಸ ವಹಿಸಿರುವ ಪಾತ್ರ ಅತ್ಯಲ್ಪ. ರಾಜನ ಮರಣ, ಆತನ ಹೆಂಡತಿಯ ದುರ್ನಡತೆ, ಹೈದರನ ರಾಜ್ಯಾಪಹರಣ—ಇವು ಸ್ಥೂಲವಾದ ಚರಿತ್ರಾಂಶಗಳು. ರಾಣಿ ಒಬ್ಬ ದತ್ತುಮಗನನ್ನು ಸ್ವೀಕರಿಸಿ, ಅವನು ತನ್ನ ನಡತೆಯನ್ನು ಆಕ್ಷೇಪಿಸಿದುದಕ್ಕಾಗಿ ಅವನನ್ನು ಕೊಲ್ಲಿಸಿ, ಬೇರೊಬ್ಬನನ್ನು ದತ್ತು ತೆಗೆದುಕೊಂಡಂತೆ ಚರಿತ್ರೆಯಿಂದ ತಿಳಿದುಬರುತ್ತದೆ. ಆದರೆ ನಾಟಕದಲ್ಲಿ ಬಸವಯ್ಯನು ಆಕೆಯ ದತ್ತುಪುತ್ರನಲ್ಲ; ಗತಿಸಿದ ರಾಜನ ಹಿರಿಯ ಹೆಂಡತಿಯ ಮಗ. ಅವನು ತನ್ನ ಮಲತಾಯಿಯಾದ ಚೆಲುವಾಂಬೆ ಸೇನಾಪತಿಯಾದ ನಿಂಬಯ್ಯನಲ್ಲಿಟ್ಟಿರುವ ಸಲುಗೆಯನ್ನು ಕಂಡು ಒಳಗೊಳಗೇ ಸಂದೇಹಪಡುತ್ತಿದ್ದಾನೆ. ಈ ಸಂದೇಹ ಅವನ ಮನಸ್ಸಿನಲ್ಲಿ ಮೂಡಿದುದನ್ನು ಕಂಡಾಗ ರಾಣಿ ನಿಂಬಯ್ಯನ ಬುದ್ಧಿವಾದದಂತೆ ಅವನನ್ನು ಕೊಲ್ಲಿಸಿ, ನಿಂಬಯ್ಯನ ಮಗನಾದ ಶಿವಯ್ಯನನ್ನು ದತ್ತುತೆಗೆದುಕೊಳ್ಳುವ ಆಲೋಚನೆ ಮಾಡುತ್ತಾಳೆ. ಅವಳ ಆಲೋಚನೆ ಕಾರ್ಯರಂಗಕ್ಕೆ ಇಳಿಯುವ ಮೊದಲೇ ಸರ್ವನಾಶವಾಗಿ ಹೋಗುತ್ತದೆ. ಹ್ಯಾಮ್ಲೆಟ್ ನಾಟಕದಲ್ಲಿ ಬರುವ ಕಥೆ ಬೇರೆ. ಅಣ್ಣನ ಹೆಂಡತಿಯಲ್ಲಿ ಮೋಹಗೊಂಡ ಪರಮನೀಚನು ಮೋಸದಿಂದ ಆತನನ್ನು ಕೊಂದು

ಗದ್ದುಗೆಯನ್ನೇರುತ್ತಾನೆ. ಅವನ ಆ ಕೃತ್ಯವನ್ನರಿಯದ ಆ ಅತ್ತಿಗೆ ಆ ಕೊಲೆ ಪಾತಕನ ಕೈಹಿಡಿದು ಮಹಾರಾಣಿ ಪದವಿಯಲ್ಲಿ ಮುಂದುವರಿಯುತ್ತಾಳೆ. ಆಕೆಯ ಮಗ ಹ್ಯಾಮ್ಲೆಟ್. ತಾಯಿಯ ಕಾರ್ಯವನ್ನು ಆತನು ಮನಸಾ ಮೆಚ್ಚದಿದ್ದರೂ ಬಹಿರಂಗವಾಗಿ ಪ್ರತಿಭಟಿಸುವಂತಿಲ್ಲ. ಆ ನಾಡಿನ ಕಟ್ಟುಕಟ್ಟಲೆಗಳು, ಸಂಪ್ರದಾಯ ಆ ಕಾರ್ಯಕ್ಕೆ ವಿರೋಧವಾಗಿಯೇನೂ ಇಲ್ಲ. ಆದರೆ ಅವನ ಮನಸ್ಸಿನಲ್ಲಿ ತಂದೆಯ ಮರಣ ಸ್ವಾಭಾವಿಕವಲ್ಲವೆಂಬ ಸಂದೇಹ ಮೂಡಿದೆ. ಈ ಸಂದೇಹವನ್ನು ಸತ್ತ ತಂದೆಯ ಪ್ರೇತ ನಿವಾರಿಸುತ್ತದೆ. ಈ ಸ್ವಾರಸ್ಯವಾದ ಸಂವಿಧಾನ ಕೌಶಲವನ್ನು ಕುವೆಂಪುರವರು ತಮ್ಮ ರಕ್ತಾಕ್ಷಿಯಲ್ಲಿ ಸ್ವೀಕರಿಸಿದ್ದಾರೆ. ಬಸವಯ್ಯ ಮಂತ್ರಿಯ ಮಗಳಾದ ರುದ್ರಾಂಬೆಯೊಡನೆ ತನ್ನ ಪಿತೃಪ್ರೇತ ತನಗೆ ವಿಧಿಸಿದ "ವಂಶವನು ಕೆಡಿಸಿದಾ ಕುಲಗೇಡಿಯನು ಅವಳ ನಿಂಬಯ್ಯನೊಡಗೂಡಿ ಜೀವದಿಂ ಸುಡಿಸಲಾರೆಯಾ ಬೆಂಕಿಯಲಿ ಅದ್ದಿ" ಎಂಬ ಅಪ್ಪಣೆಯನ್ನು ವಿವರಿಸುತ್ತಾನೆ. ಈ ಪ್ರೇತದ ಪ್ರವೇಶ, ಅದರ ವ್ಯವಹಾರ 'ರಕ್ತಾಕ್ಷಿ'ಯಲ್ಲಿ ಕಾಣಿಸಿಕೊಳ್ಳುವುದು ಹ್ಯಾಮ್ಲೆಟ್ ನಾಟಕದ ಪ್ರಭಾವದಿಂದಲೇ ನಿಜ. ಆದರೆ ಈ ಭಾಗ ನಾಟಕದಲ್ಲಿ ಕ್ವಚಿತ್ತಾದುದು. ಮಂತ್ರಿಯ ಮಗಳಾದ ರುದ್ರಾಂಬೆ ಬಸವಯ್ಯನನ್ನು ಮೋಹಿಸುವುದು, ಆಶಾಭಂಗದಿಂದ ಅವಳಿಗೆ ಹುಚ್ಚುಹಿಡಿಯುವುದು ಹ್ಯಾಮ್ಲೆಟ್ ನಾಟಕದ ಒಫಿಲಿಯಳನ್ನು ಸ್ವಲ್ಪ ಮಟ್ಟಿಗೆ ಹೋಲುವುದಾದರೂ ವಿವರಣೆಗಳಲ್ಲಿ ಹ್ಯಾಮ್ಲೆಟ್‌ಗೂ ಇದಕ್ಕೂ ಅಜ ಗಜಾಂತರ ವ್ಯತ್ಯಾಸವಿದೆ. ಹ್ಯಾಮ್ಲೆಟ್‌ನಿಗೆ ಒಫಿಲಿಯಳಲ್ಲಿರುವ ಪ್ರೇಮ ತಂದೆಯ ಪ್ರೇತವನ್ನು ಕಂಡಮೇಲೆ ಕರಗಿಹೋಗುತ್ತದೆ. ಅಲ್ಲದೆ ಅವಳ ತಂದೆಯೂ ಅಣ್ಣನೂ ಆ ಪ್ರೇಮವ್ಯಾಪಾರಕ್ಕೆ ಪ್ರಬಲ ವಿರೋಧಿಗಳಾಗಿದ್ದಾರೆ. ಅವಳಿಗೆ ಹುಚ್ಚುಹಿಡಿಯು ವುದು ತಂದೆಯ ಮರಣಕ್ಕಾಗಿ. 'ರಕ್ತಾಕ್ಷಿ'ಯಲ್ಲಾದರೋ ರುದ್ರಾಂಬೆಗೂ ಬಸವಯ್ಯನಿಗೂ ಇರುವ ಪ್ರೇಮ ಅನಂತವಾದುದು. ಬಸವಯ್ಯನಿಗಾಗಿಯೇ ರುದ್ರಾಂಬೆ ಹುಚ್ಚಳಾಗುತ್ತಾಳೆ. ಅವಳ ತಂದೆ ಮಗಳ ದುರಂತವನ್ನು ಕಣ್ಣಾರೆ ಕಾಣುವ ಹೃದಯ ವಿದ್ರಾವಕ ದೃಶ್ಯದೊಡನೆ ನಾಟಕ ಕೊನೆಯಾಗುತ್ತದೆ. ಒಫಿಲಿಯ ಕೇವಲ ಮೃದುಸ್ವಭಾವದವಳು ; ಅವಳಿಗೆ ವ್ಯಕ್ತಿತ್ವವೇ ಇಲ್ಲವೇನೋ ಎನಿಸುತ್ತದೆ. ಕೊಲೆಪಾತಕನೊಡನೆ ಸೇರಿದ ತಂದೆಯ ಮಾತನ್ನು ನಂಬಿ ಹ್ಯಾಮ್ಲೆಟ್‌ನ ಪ್ರೇಮ ವನ್ನು ಪರಿತ್ಯಜಿಸುವುದಕ್ಕೂ ಅವಳು ಸಿದ್ಧಳು. ಹೂವೆಂದು ಭ್ರಮಿಸಿ ಕೊಳದ ನೀರಿನಲ್ಲಿ ಮುಳುಗಿಹೋಗುತ್ತಾಳೆ. ರುದ್ರಾಂಬೆಯಾದರೋ ಭಯಂಕರಳಾದ ಪ್ರತೀಕಾರ ಶಕ್ತಿಯಂತಿರುವವಳು. ಬಸವಯ್ಯನ ಕೊಲೆಪಾತಕನನ್ನು ಕೊಂದಾಗಲೇ ಅವಳ ಆತ್ಮಕ್ಕೆ ತಣಿವು. ರಕ್ತದಾಹದಿಂದ ವಿಜೃಂಭಿಸುವ ಮಹಾಕಾಳಿಯಂತೆ ಅವಳು

ವ್ಯವಹರಿಸುತ್ತಾಳೆ. ಒಲಿಯದ ನಾರಿ ಎಂತಹ ಹೆಮ್ಮಾರಿಯಾಗಬಲ್ಲಳೆಂಬುದಕ್ಕೆ ಈಕೆ ಒಂದು ಉದಾಹರಣೆ.

' ರಕ್ತಾಕ್ಷಿ ' ನಾಟಕದ ಬಹುಭಾಗ ಕವಿಯ ಸ್ವಂತಸೃಷ್ಟಿ. ಶಿವಯ್ಯ ರುದ್ರಾಂಬೆಯನ್ನು ಮೋಹಿಸುವುದು, ಅದರಿಂದ ಪ್ರೇರಿತನಾಗಿ ಬಸವಯ್ಯನನ್ನು ಕೊಲೆಮಾಡುವುದು, ಬಸವಯ್ಯ-ಹೊನ್ನಯ್ಯರ ಸ್ನೇಹ, ತೃಣಾನಂದ ಮಹಾತ್ಮರ ವೇಷದಿಂದ ಗುಪ್ತಚಾರನ ಕೆಲಸಮಾಡುತ್ತಿರುವ ರಾಮರಾಯ, ಆತನ ರಾಜಕೀಯತಂತ್ರ, ಎಲ್ಲಕ್ಕೂ ಹೆಚ್ಚಾಗಿ ಹೆಸರಿಗೆ ತಕ್ಕಂತಹ ರುದ್ರಭಯಂಕರಳಾದ ಮನೋಹರಮೂರ್ತಿ ರುದ್ರಾಂಬೆಯ ಪಾತ್ರ, ಇವೆಲ್ಲವೂ ಕವಿಯ ಬಗೆಗಣ್ಣಿಗೇ ಗೋಚರವಾದ ಸುಂದರ ದೃಶ್ಯಗಳು.

' ರಕ್ತಾಕ್ಷಿ ' ನಾಟಕದಲ್ಲಿ ಕಾಣಬರುವ ಸಂವಿಧಾನ ಕೌಶಲವು ಅದ್ಭುತವಾದುದು. ಹೆಜ್ಜೆಹೆಜ್ಜೆಗೂ ಎದುರುಗೊಳ್ಳುವ ಭೀಕರ ಸನ್ನಿವೇಶಗಳಿಂದ ಎದೆ ತುಟಿದುಕೊಳ್ಳುವುದಾದರೂ ರಾಮರಾಯನ ಸನ್ಯಾಸಿವೇಷದ ಸಂದರ್ಭ, ಅಲ್ಲಿ ಬರುವ ಒಂದೆರಡು ಮುಗ್ಧಮನೋಹರ ಪಾತ್ರಗಳು ಈ ಕಠೋರ ಭೀಕರತೆಯನ್ನು ಸ್ವಲ್ಪ ಮಟ್ಟಿಗೆ ಪಾರುಮಾಡುತ್ತವೆ. ಆದರೂ ಕೊನೆಯ ದುರಂತಕ್ಕೆ ಒಂದೊಂದು ಸನ್ನಿವೇಶವೂ ಪರಿಪೋಷಕವಾಗಿಯೇ ಇದೆ. ಒಂದೊಂದು ದೃಶ್ಯವೂ ಓದುಗರನ್ನು ಅನಿವಾರ್ಯವಾದ ಆ ಭಯಂಕರ ಘಟನೆಯ ಬಳಿಗೆ ಒಯ್ಯುವ ಒಂದು ರಾಜಮಾರ್ಗವನ್ನು ಕಲ್ಪಿಸುತ್ತದೆಯೆಂದು ಹೇಳಬಹುದು. ಪಾತ್ರರಚನೆಯಲ್ಲಿಯೂ ಕುವೆಂಪುರವರ ವಿಹಂಗಮ ಚೇತನ ಕೆಳಕ್ಕಿಳಿದಿಲ್ಲ. ಬಸವಯ್ಯ ಹೊನ್ನಯ್ಯರಂತಹ ಶ್ರೇಷ್ಠ ಪಾತ್ರಗಳು ಹಾಗಿರಲಿ ; ಶಿವಯ್ಯನಂತಹ ನೀಚಪಾತ್ರದಲ್ಲಿಯೂ ಕಾರ್ಮೋಡದಲ್ಲಿನ ಮರಿಮಿಂಚಿನಂತೆ ಒಮ್ಮೆ ವಿವೇಕ ಸುಳಿದು ಮರೆಯಾಗುತ್ತದೆ. ಸೆರೆಮನೆಯಲ್ಲಿದ್ದ ಬಸವಯ್ಯನನ್ನು ಬಂಧಮುಕ್ತನನ್ನಾಗಿ ಮಾಡುವ ಮುನ್ನ ಅವನ ಆಂತರಿಕ ಹೋರಾಟ ಮನೋಹರವಾಗಿದೆ. ಹಾಗೆಯೇ ನಿಂಬಯ್ಯನ ಪಾತ್ರವೂ ; ಅವನ ಪಾತ್ರ ಅಸಹ್ಯಕರವಾಗಿಲ್ಲ. ಸಾವು ಸಮನಿಸಿದಾಗ ಅವನು ತನ್ನ ಸ್ವಭಾವ ಧೀರತೆಯನ್ನೇ ಮೆರೆಯುತ್ತಾನೆ. " ಓ ಪ್ರಿಯೆ, ನಿನ್ನೊಡನೆ ನನಗೆ ಸಹಗಮನ. ಎಳೆಯತನದಲಿ ನಿನ್ನ ನಾನೊಲಿದು ಬಯಸಿದ್ದೆ, ನೀನೆನ್ನನೊಲಿದಿದ್ದೆ. ಆದರರಸನ ಕರುಬು ನಮ್ಮನಗಲಿಸಿತು " ಎಂಬ ಮಾತುಗಳನ್ನು ಕೇಳುತ್ತಲೇ ಅವನ ಮೇಲೆ ನಮಗಿದ್ದ ಕ್ರೋಧ ಅರ್ಧ ಇಳಿದುಹೋಗುತ್ತದೆ. ಒಲಿದಿದ್ದ ಆ ಪ್ರಣಯಿಗಳನ್ನು ಅಗಲಿಸಿದುದು ಆ ವಿಧಿಯ ಕುಹಕವೇ ಸರಿ. ಅವನು ತನ್ನ ಮಾತನ್ನು ಮುಂದುವರಿಸುತ್ತಾ " ಶತ್ರುಗಳೊಡನೆ ಹೊಡೆದಾಡಿ ಮಡಿವೆನು ಎಂದು ಹಾರೈಸಿಕೊಂಡಿದ್ದೆ ! ಆ ಬಯಕೆ ಬಯಲಾಯ್ತು "

ಎಂಬ ಅವನ ವೀರವಾಣಿ ನಮಗೆ ಅವನಲ್ಲಿ ಮೆಚ್ಚಿಗೆಯನ್ನು ಸಂಪಾದಿಸಿಕೊಡುತ್ತದೆ. ಅವನು ವೀರನಂತೆ ಬಾಳಿದ; ವೀರನಂತೆ ಮಡಿದ. ಚಲುವಾಂಬೆಯ ಪಾತ್ರ ಪರಮ ನೀಚವಾದುದಾದರೂ ಅವಳ ದುರಂತವನ್ನು ಕಂಡು ಅಯ್ಯೋ ಎನಿಸುತ್ತದೆ. ಭೋಗ ಜೀವನವನ್ನು ಮುಂದುವರಿಸಿಕೊಂಡು ಬಾಳಿ ಬದುಕಬೇಕೆಂಬುದಷ್ಟೇ ಅವಳ ಆಶಯ ವಾದರೂ ತುಂಬುಜೀವ ಬೆಂಕಿಯಲ್ಲಿ ಸುಟ್ಟುಹೋಗುವ ಮುನ್ನ ಹೇಳಿಕೊಳ್ಳುವ ಪಶ್ಚಾತ್ತಾಪದ ನುಡಿಗಳು ಅವಳಲ್ಲಿಯೂ ನಮ್ಮ ಅನುಕಂಪವನ್ನು ಕೆರಳಿಸುತ್ತವೆ. ಒಟ್ಟಿನಲ್ಲಿ ಪಾತ್ರಗಳೆಲ್ಲವೂ ಜೀವಪೂರ್ಣವಾಗಿವೆ. ಕೆಂಚಣ್ಣ, ಮಹಮದಾಲಿ, ಸಿಂಗಣ್ಣ ಇತ್ಯಾದಿ ಸಣ್ಣಪುಟ್ಟ ಪಾತ್ರಗಳು ಕೂಡಾ ತಮ್ಮ ಪಾತ್ರಕ್ಕೆ ತಕ್ಕಂತೆ ವರ್ತಿಸಿ ನಮ್ಮ ಮೆಚ್ಚುಗೆಯನ್ನು ಪಡೆಯುತ್ತವೆ.

ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳಿರುವಂತೆ "ರಕ್ತಾಕ್ಷಿಯಂತಹ ಶ್ಲಾಘ್ಯ ಸ್ವತಂತ್ರ ಐತಿಹಾಸಿಕ ನಾಟಕವು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹುಟ್ಟಿದಾಗ ಅದರ ಮಟ್ಟವು ಬಹು ಎತ್ತರಕ್ಕೆ ಏರಿರುವುದೆನ್ನುವುದರಲ್ಲಿ ಸಂದೇಹವಿಲ್ಲ."

ಛಾಯಾ ನಾಟಕ

ಶ್ರೀಮಾನ್ ಕುವೆಂಪುರವರ 'ಬಲಿದಾನ' ಒಂದು ಛಾಯಾನಾಟಕ. ಈ ನಾಟಕದ ಪ್ರಥಮ ದೃಶ್ಯ ಈಗಾಗಲೇ ಅನೇಕ ಬಾರಿ ಪ್ರದರ್ಶಿತವಾಗಿದೆ. ಈಚೆಗೆ ಆ ದೃಶ್ಯ ದೊಡನೆ ಮತ್ತೆರಡು ದೃಶ್ಯಗಳು ಸೇರಿಕೊಂಡು ಆ ಮೂಲಕ ಆ ನಾಟಕದ ಬೃಹತ್ತಿ ನೊಡನೆ ಮಹತ್ತೂ ಹೆಚ್ಚಿದೆ. ಅಸ್ವತಂತ್ರೆಯಾದ ಭಾರತಮಾತೆ ಸುಸ್ವತಂತ್ರ ಳಾದುದು ಇದರ ಕಥಾವಸ್ತು. ಮೊದಲ ದೃಶ್ಯದಲ್ಲಿ ಸಂಕೋಲೆಗಳಿಂದ ಬಂಧಿತಳಾದ ಭಾರತಾಂಬೆಯನ್ನು ಕಂಡು ಭರತಸುತನು ಸಂಕಟದಿಂದ ಆಕೆಯನ್ನು ಯಾರೆಂದು ವಿಚಾರಿಸುತ್ತಾನೆ. ದಾಸ್ಯದಿಂದ ಕಂಗೆಟ್ಟ ಮನುಷ್ಯನಿಗೆ ತಾಯಿಯನ್ನು ಗುರುತು ಹಿಡಿಯುವ ಯೋಗ್ಯತೆಯೂ ಮಾಸಿಹೋಗಿದೆ. ಆಕೆ ಅವನಿಂದ ಬಲಿದಾನವನ್ನು ನೀಡುವುದಾಗಿ ಪ್ರತಿಜ್ಞೆಮಾಡಿಸಿ ತನ್ನ ಸ್ವರೂಪವನ್ನು ವಿವರಿಸುತ್ತಾಳೆ. ತನ್ನ ಬಂಧನವನ್ನು ಬಿಡಿಸುವುದಾಗಿ ಪ್ರತಿಜ್ಞೆಮಾಡಿ ಹೋಗುವ ಮಗನನ್ನು ಭಾರತಾಂಬೆ ಆಶೀರ್ವದಿಸುತ್ತಾಳೆ. ಇದಿಷ್ಟರಲ್ಲಿಯೇ ಒಂದು ಐಕ್ಯತೆಯಿದೆ. ಸ್ವಾತಂತ್ರ್ಯೋದಯದ ವರೆಗಿನ ಭಾರತ ಇತಿಹಾಸ ಸೂಕ್ಷ್ಮವಾಗಿ ಇದರಲ್ಲಿ ಅಡಕವಾಗಿದೆ. ಭಾರತಾಂಬೆಗೆ ಮನೆಯಿಲ್ಲದೆ ಇಲ್ಲ; ಆದರೆ ಪರಕೀಯರು ಅಲ್ಲಿ ಬಾಳುತ್ತಿದ್ದಾರೆ. ಆಕೆ ಈಗ ಧನಕನಕಗಳಿಲ್ಲದ ಬಡವೆಯಾದರೂ ಧನಕನಕಗಳು ಬೇಡ ಆಕೆಗೆ. ಒಮ್ಮೆ ಧನಿಕ ಳಾಗಿದ್ದವಳು ಆಕೆ; ಧನದ ಪೊಳ್ಳನ್ನು ಬಲ್ಲಳು; "ಧನವೆನ್ನ ಕಾಪಾಡಲಿಲ್ಲ". ಅಷ್ಟೇ

ಅಲ್ಲ, "ಧನದಿಂದ ಕೆಟ್ಟಿನಯ್," ಏಕೆಂದರೆ ಸಂಪತ್ಸಮೃದ್ಧಿಗಳಿಂದ ತುಂಬಿದ್ದ ನಾಡಾದು ದರಿಂದಲೇ ಪರಕೀಯರು ಕೊಳ್ಳೆಹೊಡೆಯಲು ಇಲ್ಲಿಗೆ ನುಗ್ಗಿಬಂದುದು. ಎಷ್ಟು ಜನ ಪರಕೀಯರು ನುಗ್ಗಿಬಂದು ನಾಡನ್ನು ವಶಪಡಿಸಿಕೊಂಡರೂ ಭಾರತ ಸಂಸ್ಕೃತಿಗೆ ಧಕ್ಕೆ ತರಲಾರದು. ಭಾರತದ ಹಿರಿಮೆಯಿರುವುದು ' ಒಳಗಿರುವ ಬೆಳಕಿಂದ '—ಜ್ಞಾನ ಜ್ಯೋತಿಯಿಂದ. ಭಾರತೀಯರು ಹಿಂದೊಮ್ಮೆ ರಣಕಲಿಗಳಾಗಿದ್ದರು. ಆದರೆ (ಭಕ್ತಿ ಪಂಥ ತಲೆದೋರಿದ ಮೇಲೆಯೋ ಏನೋ !) ಬರಬರುತ್ತಾ ಅವರ ದೃಷ್ಟಿ ಸೌಮ್ಯ ವಾಗಿ ಶಕ್ತಿ ಸೋರಿಹೋಯಿತು. ಭಾರತಾಂಬೆ ದಾಸ್ಯಶೃಂಖಲೆಗಳಲ್ಲಿ ಬಂಧಿತ ಳಾದಳು. ಇದಕ್ಕೆ ಕಾರಣರು ಪರಕೀಯರು ಮಾತ್ರವೇ ಅಲ್ಲ; 'ಮೂಲೇ ಕುಠಾರಃ ' ಎಂಬಂತೆ ಸ್ವದೇಶಿಯರೂ ಕಾರಣರೆ. ' ಬೀಗ ಹಾಕಿದ ದುರುಳನಾರಮ್ಮ?' ಎಂದು ಕೇಳಿದ ಭರತಸುತನಿಗೆ ಭಾರತಾಂಬೆ ' ನಾನರಿಯೆ ಯಾರು ಹಾಕಿದರೆಂದು. ಪರಕೀಯ ರೆಂದೊಮ್ಮೆ ಯೋಚಿಸುವೆ. ತನ್ನವರೆ ಎಂದೊಮ್ಮೆ ಗೋಳಿಡುವೆ ' ಎಂದು ನೀಳ್ದನಿ ಯಿಂದ ಹೇಳಿಕೊಳ್ಳುವುದರಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ.

ಭರತಖಂಡ ಇತ್ತೀಚೆಗೆ ಸ್ವತಂತ್ರವಾಯಿತು. ಇದರ ಫಲವಾಗಿ ಬಲಿದಾನದ ಎರಡು ಮೂರನೆಯ ದೃಶ್ಯಗಳು ಉದ್ಭವಿಸಿವೆ. ಎರಡನೆಯ ದೃಶ್ಯದಲ್ಲಿ ಸತ್ಯಾಗ್ರಹ ಸಮರವೂ, ಅದರ ಫಲವಾಗಿ ದೊರೆತ ಸ್ವಾತಂತ್ರ್ಯವೂ ವರ್ಣಿತವಾಗಿದ್ದರೆ, ಮೂರನೆಯ ದೃಶ್ಯದಲ್ಲಿ ಸ್ವಾತಂತ್ರ್ಯದ ಅರುಣೋದಯದಲ್ಲಿಯೇ ನಡೆದ ಹಿಂದೂ ಮಹಮ್ಮದೀಯರ ವಿದ್ವೇಷ ಮತ್ತು ರಕ್ತಪಾತಗಳ ವರ್ಣನೆಯಿದೆ. ಸಹಸ್ರಾರು ದೇಶಭಕ್ತರ ಬಲಿದಾನದಿಂದ ಸ್ವಾತಂತ್ರ್ಯ ಉದಯಿಸಿತು. ಆದರೇನು ? " ಬಲಿದಾನ ಕುಂಟೆ ಕೊನೆ ? ಬಲಿ ಪರಂಪರೆಯಲ್ತೆ ಸ್ವಾತಂತ್ರ್ಯಜೀವನಂ? " ನಾಡು ಸ್ವಾತಂತ್ರ್ಯ ವನ್ನು ಉಳಿಸಿಕೊಂಡಿರುವಷ್ಟು ಕಾಲವೂ ಈ ಬಗೆಯಾದ ಬಲಿದಾನ ಅಗತ್ಯವಷ್ಟೇ ಅಲ್ಲ, ಅನಿವಾರ್ಯ—ಎಂಬುದು ಕವಿಯ ಭಾವನೆ. ಪರಕೀಯರ ಆಳ್ವಿಕೆ ತಪ್ಪಿದುದು ಕೇವಲ ಬಾಹ್ಯಬಂಧನ ಕಳಚಿಬಿದ್ದಂತೆ. ಆದರೆ " ಆಂತರದ ಶೃಂಖಲೆಗಳೊಳವು ವಜ್ರೋಪಮಂ." ಆ ಶೃಂಖಲೆಗಳನ್ನು ಕಡಿಯುವುದಕ್ಕಾಗಿಯೇ " ಸ್ವಾತಂತ್ರ್ಯ ಶಿಲ್ಪಿ "ಯಾದ ಮಹಾತ್ಮಾಗಾಂಧಿ ನವಾಖಲಿ ಪ್ರವಾಸಮಾಡಿದುದು. ದೊರೆತ ಸ್ವಾತಂತ್ರ್ಯ ಸ್ಥಿರವಾಗಬೇಕಾದರೆ ' ಶಾಂತಿ ಸಿದ್ಧಿ 'ಯಾಗಬೇಕು. " ಅದಕ್ಕೆ ವೇಳ್ಕುಂ ಪರಮ ಬಲಿದಾನಂ." ಆ ಬಲಿದಾನವನ್ನು ತೆತ್ತುದಾಯಿತು ಮಹಾತ್ಮನ ಮರಣದಿಂದ. ಈ ಭಾಗವನ್ನು ಕವಿ ಪ್ರತಿಮಾವಿಧಾನದಿಂದ ಮನೋಹರವಾಗಿ ಬಣ್ಣಿಸಿದ್ದಾರೆ. ಭಾರ ತಾಂಬೆಯ ಆದೇಶದಂತೆ ಕಣ್ಮುಚ್ಚಿದ ಭರತಸುತನಿಗೆ ಧವಳಗಿರಿ ತುಂಡಾಗಿ ಮಹಾಸಾಗ ರಕ್ಕೆ ಉರುಳಿದಂತೆ ಕಣಸಾಗುತ್ತದೆ. ಈ ದೃಶ್ಯಗಳಲ್ಲಿ ಕುವೆಂಪುಕೃತವಾದವುಗಳಲ್ಲದೆ

ಬೇರೆ ಕೆಲವು ಗೀತಗಳೂ ಉಚಿತ ರೀತಿಯಲ್ಲಿ ಅಳವಟ್ಟು ನಾಟಕದ ಬೆಳವಣಿಗೆಗೆ ಸಹಾಯಮಾಡಿವೆ.

ಇಡೀ ನಾಟಕವು ಛಾಯಾ ನಾಟಕಕ್ಕೆ ಅತ್ಯಂತ ಮನೋಹರವಾಗಿ ಅಳವಡುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನೆಳಲು ಬೆಳಕುಗಳ ಜೋಡಣೆಯಿಂದ ನಾಟಕವನ್ನು ಭವ್ಯತಮವಾಗಿ ಪ್ರದರ್ಶಿಸಬಹುದು. ನಭೋಗಾಮಿಯಾದ ಬಾವುಟ, ಅಪ್ರಾಕೃತ ರೂಪದ ಭಾರತಾಂಬೆ, ಜನಸಂದಣಿ, ಧವಳಗಿರಿ ಶಿಖರ, ಅದು ಉರುಳಿ ಸಮುದ್ರಕ್ಕೆ ಬೀಳುವುದು—ಇತ್ಯಾದಿ ಅಸಾಧಾರಣ ದೃಶ್ಯಗಳನ್ನೆಲ್ಲಾ ನಾಟಕದಲ್ಲಿ ತರುವುದು ಅಸಾಧ್ಯವಾದರೂ ಛಾಯಾಚಿತ್ರದಲ್ಲಿ ಪ್ರದರ್ಶಿಸುವುದು ಸುಲಭ. ಅಲ್ಲದೆ ಅಲ್ಲಿನ 'ವಾಣಿ' ನೇಪಥ್ಯಗಾನವಾಗಿ ಅದ್ಭುತವಾದ ಪರಿಣಾಮವನ್ನು ನೀಡಬಲ್ಲದು.

ಕುವೆಂಪುರವರ ಅದ್ಭುತ ಕವಿತಾಶಕ್ತಿಯಿಂದ ಉದ್ಭವವಾಗಿರುವ ಈ ನಾಟಕ ಅವರ ಇತರ ನಾಟಕಗಳಂತೆಯೇ ಕಾವ್ಯಮಯವಾಗಿದೆ. ರಂಗಸ್ಥಳದಲ್ಲಿ ಪ್ರದರ್ಶನಕ್ಕೆ ಮಾತ್ರವಲ್ಲದೆ ಏಕಾಂತದಲ್ಲಿ ಕುಳಿತು ಪಠಿಸುವುದಕ್ಕೂ ಇದು ಯೋಗ್ಯವಾಗಿದೆ.

ತ. ಸು. ಶಾ.

ಬಸಪ್ಪನ ಜಮೀನು

ಅಷ್ಟು ಹೊತ್ತೂ ಶಾನಭೋಗರಿಂದ ಕತೆ ಕೇಳಿ ತಲೆ ತೂಗುತ್ತಿದ್ದ ಶಂಕರಯ್ಯನವರು ಒಂದು ಚಿಟಕೆ ನಶ್ಯ ಏರಿಸಿ ಮೂಗೊರಸಿಕೊಳ್ಳುತ್ತಾ ತಾವೂ ಶುರುಮಾಡಿದರು ಒಂದು ಕತೆಯನ್ನು :

"ಏನು ಶಾನುಭೋಗರೇ, ನೀವೀಕತೆ ಹೇಳಿದಿರಲ್ಲ, ನಮ್ಮ ತಾತ ನನಗೆ ಹೇಳಿದ್ದ ಒಂದು ನಡೆದ ಕತೆ ಹೇಳ್ತೀನಿ ಕೇಳಿ. ನಮ್ಮ ಹಳ್ಳಿಗೆ ಪಡುವಲಲ್ಲಿ ಒಂದು ಗುಡ್ಡದ ಮೇಲೆ ಯಾವುದೋ ಒಂದು ದೊಡ್ಡ ಮನೆ ಮುರಿದುಬಿದ್ದಿದೆ ನೋಡಿ..."

"ಅದೇ ಮಸೀತಿಯೋ ಚರ್ಚೋ ಇತ್ತಲ್ಲ."

"ಹ್ಞೂ, ಅದರ ಮುಂದೆ ನೂರೈವತ್ತೆಕರೆಯೋ ನೂರರವತ್ತೆಕರೆಯೋ ಒಂದು ಖುಷ್ಕಿ ಜಮೀನು ಪಾಳುಬಿದ್ದಿತ್ತಂತೆ. ಈಗೇನೊ ಕಾವೇರಿಯಿಂದ ನಾಲೆ ತಂದ ಮೇಲೆ ಅದಷ್ಟು ಜಮೀನು ತರಿ ಆಗಿದೇನ್ನಿ. ಅದೇನು ಕಾರಣದಿಂದಲೋ ಏನೊ ಆ ಜಮೀನನ್ನು ಆಗ ಯಾರೂ ಸಾಗುವಳಿ ಮಾಡಿರಲಿಲ್ಲ. ಅಲ್ಲದೆ ಅದು ಯಾರಿಗೆ ಸೇರಿದೆ ಅಂತಲೂ ಸರಿಯಾಗಿ ಯಾರಿಗೂ ತಿಳಿದೇ ಇರಲಿಲ್ಲ. ಒಂದು ಸಾರಿ ಯುದ್ಧ ಕಳೆದ ಮೇಲೆ ದೇಶದಲ್ಲಿ ಎಲ್ಲೆಲ್ಲೂ ಮಳೆ ಬೆಳೆ ಇಲ್ಲದೆ ಕ್ಷಾಮ ಬಂದು, ಹೊಟ್ಟೆಗೆ ಹಿಟ್ಟಿಲ್ಲದೆ ಜನ ಸಾಯ್ತಾ ಇದ್ದರಲ್ಲ, ಆಗ ಕಂಗಾಲಾಗಿ ಸಾಯ್ತಿದ್ದ ಜನಗಳಿಗೆ ಸಮಾಧಾನ ತರೋದಕ್ಕೋಸ್ಕರ ಸರ್ಕಾರದವರು 'ಹೆಚ್ಚು ಆಹಾರ ಬೆಳೆಯಿರಿ' ಅನ್ನೋ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಎಲ್ಲೆಲ್ಲೂ ಬಾವಿಗಳನ್ನ ತೋಡಿಸೋದು, ಸಾಧ್ಯವಾದ ಕಡೆಯಲ್ಲೆಲ್ಲಾ ನದಿಗಳಿಂದ ಕಾಲುವೆ ಹರಿಸಿ ಬಂಜರುಪ್ರದೇಶಗಳನ್ನೆಲ್ಲ ಸಾಗುವಳಿ ಮಾಡಿಸೋದು, ಬೇಸಾಯಗಾರರಿಗೆ ಹೆಚ್ಚು ಆಹಾರ ಬೆಳೆಯಲಿ ಅಂತ ಒಳ್ಳೇ ಗೊಬ್ಬರ, ಬಿತ್ತನೆ, ಹೊಸತರದ ಉಪಕರಣಗಳು ಮೊದಲಾದುವನ್ನು ಕೊಡೋದು, ಅಲ್ಲದೆ ಹೆಚ್ಚು ಆಹಾರ ಬೆಳೆದವರಿಗೆ ಬಹುಮಾನ ಕೊಡೋದು ಹೀಗೆಲ್ಲ ಮಾಡಿದರು ನೋಡಿ! ಅದರಿಂದ ದೇಶದಲ್ಲಿ ಪಾಳುಬಿದ್ದಿದ್ದ ಜಮೀನೆಲ್ಲ ಮತ್ತೆ ಸಾಗುವಳಿಗೆ ಬಂತು, ಜನಗಳಿಗೂ ಒಂದೆರಡು ವರ್ಷದಲ್ಲೇ ತುಂಬ ಅನುಕೂಲವಾಯಿತು ಅನ್ನಿ! ಹಾಗೇ ಒಂದು ಸಾರಿ 'ಹೆಚ್ಚು ಆಹಾರ ಬೆಳೆಯಿರಿ' ಸಂಸ್ಥೆಯ ಅಧಿಕಾರಿಗಳು ರೈತರ ಕಷ್ಟ ಸುಖಗಳನ್ನೆಲ್ಲ ವಿಚಾರಿಸಿಕೊಳ್ಳುತ್ತಾ ನಮ್ಮ ಹಳ್ಳಿಗೂ ಬಂದಿದ್ದರು. ಆಗ ಆ ಗುಡ್ಡದ ಕೆಳಗೆ ಪಾಳುಬಿದ್ದಿದ್ದ ಖುಷ್ಕಿ ಜಮೀನು ಅವರ

ಕಣ್ಣಿಗೆ ಬಿತ್ತು. ಅಂತಹ ಕಷ್ಟಕಾಲದಲ್ಲಿ ಅಷ್ಟು ವಿಶಾಲವಾದ ಜಮೀನನ್ನು ಪಾಳು ಬಿಟ್ಟಿದ್ದರೆ ಯಾರು ತಾನೇ ಸಹಿಸ್ತಾರೆ? ಅವರು ತಮ್ಮ ಪಕ್ಕದಲ್ಲೇ ಇದ್ದ ರೆವಿನ್ಯೂ ಆಫೀಸರನ್ನು ಕರೆದು 'ಯಾರದ್ರಿ ಈ ಜಮೀನು?' ಎಂದು ಕೇಳಿದರು. ರೆವಿನ್ಯೂ ಆಫೀಸರು ಹಿಂತಿರುಗಿ ಪಟೇಲನ ಮುಖವನ್ನು ನೋಡಿದರು. ಪಟೇಲ ಕೈಯೆತ್ತಿ ಮುಖ ಮಾಡಿಕೊಂಡು, 'ಶಾನುಬೋಗರ್ನ ಕರತತ್ತೀನಿ ಮಾಸ್ವಾಮಿ' ಎಂದು, 'ಈ ಹಾಳ್ ಶಾನುಬೋಗ್ರು ಒಳ್ಳೇ ಸಮಯ್ದಲ್ಲಿ ಕೈಕೊಡ್ತಾರಲ್ಲ? ಎಲ್ಲೋ ಊಟಾಂತ ಹೊರಟುಬಿಟ್ಟವ್ರೆ' ಅಂತ ಗೊಣಗಿಕೊಂಡು ಓಡಿದ. ಎರಡು ನಿಮಿಷದಲ್ಲೇ ಚಿತ್ತೈಸಿತು ಶಾನುಭೋಗರ ಸವಾರಿ! ಪಾಪ, ಸಾಹುಕಾರ್ ಸುಬ್ಬಣ್ಣನವರ ಮನೆ ಮದುವೆ ಊಟಕ್ಕೆ ಹೋಗಿದ್ದರು. ಅರೆಹೊಟ್ಟೆಯಾದರೂ ಊಟ ಮಾಡಿದ್ದರೋ ಇಲ್ಲವೋ ಕಾಣೆ. ಪಟೇಲ ಕರೆದಕೂಡಲೆ ಕೈಗೆ ನೀರು ಹಾಕಿದ್ದೇ ತಡ ಮೈಗೆ ಬನೀನು ತಗಲಿಸಿಕೊಂಡು, ಅದರ ಮೇಲೆ ಗುಂಡಿಯಿಲ್ಲದೆ ಕಾಗದಪತ್ರಗಳ ಭಾರದಿಂದ ಕೆಳಕ್ಕೆ ಜಗಿಯುತ್ತಿದ್ದ ಕೋಟೊಂದನ್ನು ಹಾಕಿಕೊಂಡು, ಕಂಕುಳಲ್ಲಿ ಕೆಲವು ಪುಸ್ತಕಗಳನ್ನು ಇರಿಸಿಕೊಂಡು, ಮೂಗಿನ ತುದಿಗೆ ದಾರಕಟ್ಟಿದ ಕನ್ನಡಕವನ್ನು ತೂಗಿಸಿಕೊಂಡು, ಬೊಜ್ಜುದೇಹವನ್ನು ಹೊರಲಾರದೆ ಹೊತ್ತು ಸ್ವಲ್ಪ ಪ್ರಯಾಸದಿಂದಲೇ ಬಂದರು. ಅವರನ್ನು ನೋಡಿದ ಕೂಡಲೇ ರೆವಿನ್ಯೂ ಆಫೀಸರು ಸ್ವಲ್ಪವೂ ಕನಿಕರವಿಲ್ಲದೆ ಅವರ ಮೇಲೆ ಎಗರಿಬಿದ್ದರು—

'ಎಲ್ರಿ ಹೋಗಿದ್ರಿ ಇಷ್ಟುಹೊತ್ತೂ? ಯಾರದ್ರಿ ಈ ಜಮೀನು?'

'ಇದು ಬಸಪ್ಪಂದು ಮಹಾಸ್ವಾಮಿ' ಅಂದರು ಶಾನುಭೋಗರು.

'ಯಾವ ಬಸಪ್ಪಂದ್ರೀ? ಕರೀರಿ ಅವನ್ನ.'

ಶಾನುಭೋಗರು ಕಕ್ಕಾಬಿಕ್ಕಿಯಾಗಿ ಹಿಂತಿರುಗಿ ನೋಡಿದರು. ಪಟೇಲ ಅಲ್ಲಿ ಸೇರಿದ್ದ ಎಲ್ಲ ಹಳ್ಳಿಗರನ್ನೂ ವಿಚಾರಿಸಿ ನೋಡಿದ. ಯಾರನ್ನು ಕೇಳಿದರೂ 'ಬಸಪ್ಪ ಅನ್ನೋವ್ನು ನಮ್ಮಳ್ಳಿಲೇ ಇಲ್ವಲ್ಲ' ಅಂದುಬಿಟ್ಟರು. ದೂರದಲ್ಲಿ ಕೋಲೂರಿ ನಿಂತಿದ್ದ ಒಬ್ಬ ಮುದಕ ಮಾತ್ರ, 'ಆ ಮೂಲೇ ಅಟ್ಟೀಲಿ ಬಸಣ್ಣ ಅಂತ ಒಬ್ಬ ಇದ್ದ, ಅವನ್ ತೀರೋಗಾಗ್ಲೇ ಅದಿನೈದಿಪ್ಪತ್ವೊರ್ಷಕ್ ಬಂತು. ಆದ್ರೆ . . . ಅವ್ನು ಜಮೀನ್‌ಗಿಮೀನ್ ಮಾಡ್ಕೊಂಡಿದ್ದಂಗ್ ಕಾಣೆ. ಅತ್ವಾ ಇರಬವ್ದೋ ಏನೊ ನಂಗ್ ನೆಪ್ಪಿಲ್ಲ' ಅಂದ. ರೆವಿನ್ಯೂ ಆಫೀಸರು ರೇಗಿ, 'ಏನ್ರಿ ಶಾನುಭೋಗರೆ, ಇದೇ ಏನ್ರಿ ನೀವು ಮಾಡ್ತಿರೋ ಕೆಲಸ? ನೆಟ್ಟಗೆ ಜಮೀನು ಯಾವುದು, ಅದರ ವಾರಸದಾರರು ಯಾರು ಅನ್ನೋದನ್ನೇ ತಿಳಿಕೊಳ್ಳುವ ಯೋಗ್ಯತೆಯಿಲ್ಲ ಏನ್ರಿ ನೀವು ಶಾನುಭೋಗ್ಕೆ ಮಾಡೋದು? ಶುದ್ಧ ನಾಲಾಯಕ್ಕು. ಬಿಚ್ಚಿ ನೋಡ್ರಿ ನಿಮ್ಮ

ಕಂತೇನ' ಅಂದರು. ಶಾನುಭೋಗರು ಗಡಗಡ ನಡಗ್ತಾ ತಾವು ತಂದಿದ್ದ ಕಡತವನ್ನೆಲ್ಲಾ ಬಿಚ್ಚಿ ಒದರಿ ಮೊದಲು ಆ ಜಮೀನಿನ ಸರ್ವೇ ನಂಬರನ್ನು ಕಂಡುಹಿಡಿದರು. ಆಮೇಲೆ ಹಳೆ ದಾಖಲೆಗಳನ್ನೆಲ್ಲ ಹುಡುಕಿ ಅದು ಬಸಪ್ಪ ಎಂಬವನಿಗೇ ಸೇರಿದ್ದೆಂತಲೂ, ಆದರೆ ಅದೇನು ಕಾರಣದಿಂದಲೋ ಆ ಜಮೀನಿಗೆ ಬಹಳ ದಿನಗಳಿಂದ ಕಂದಾಯವೇ ಪಾವತಿಯಾಗುತ್ತಿಲ್ಲವೆಂತಲೂ ಕಂಡುಹಿಡಿದರು. ಆದರೆ ಆ ಬಸಪ್ಪ ಯಾರೋ ಯಾರಿಗೂ ತಿಳಿಯದು. ರೆವಿನ್ಯೂ ಆಫೀಸರು ಸ್ವಲ್ಪಹೊತ್ತು ಚರ್ಚೆಮಾಡಿ ಪುಸ್ತಕವನ್ನೆಲ್ಲ ಇನ್ನೊಂದು ಸಾರಿ ತಿರುವಿಹಾಕಿ, ಆಮೇಲೆ ಆ ಜಮೀನಿನ ವಾರಸದಾರರು ಪತ್ತೆಯಿಲ್ಲದಿರುವುದರಿಂದಲೂ, ವರ್ಷಗಟ್ಟಲೆ ಕಂದಾಯ ಕಟ್ಟದೆ ಇರುವುದರಿಂದಲೂ ಅದನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದು ತೀರ್ಮಾನಿಸಿದರು. ಆದರೆ 'ಹೆಚ್ಚು ಆಹಾರ ಬೆಳೆಯಿರಿ' ಸಂಸ್ಥೆಯ ಅಧಿಕಾರಿಗಳು ರೆವಿನ್ಯೂ ಆಫೀಸರಿಗೆ, 'ನೋಡಿ, ಈ ಜಮೀನನ್ನ ಸರ್ಕಾರದವರು ವಶಪಡಿಸಿಕೊಂಡರೆ ಉಪಯೋಗವೇನು? ಅದನ್ನು ಉತ್ತು ಬಿತ್ತಿ ಸಾಗುವಳಿ ಮಾಡುವವರು ಯಾರು? ಸಿಕ್ಕಿದವರಿಗೆ ಅದನ್ನು ಆಮೇಲೆ ಕಡಮೆ ಬೆಲೆಗೆ ಒಪ್ಪಿಸಿಕೊಡುವುದರ ಬದಲು ಹರಾಜುಹಾಕಿಸಿಬಿಡಿ. ಯಾರಿಗೆ ಅಭಿಲಾಷೆಯಿದೆಯೋ ಅವರು ಇದನ್ನು ತೆಗೆದುಕೊಳ್ಳಲಿ. ಅದರಿಂದ ಸರ್ಕಾರಕ್ಕೂ ಲಾಭವಾಗುತ್ತೆ. ಅಲ್ಲದೆ ಸಾಗುವಳಿ ಮಾಡುವವರೂ ಪ್ರೀತಿಯಿಂದ ಮಾಡುತ್ತಾರೆ. ನಾವೂ ಬೇಕಾದರೆ ಎಲ್ಲಾ ರೀತಿಯ ಸಹಾಯಮಾಡಿ ಹೊಸ ರೀತಿ ಯಂತ್ರಗಳಿಂದ ಈ ಬಂಜರು ಭೂಮಿಯನ್ನ ಹಸಸುಮಾಡಿಸಿ ಒಳ್ಳೇ ಬೆಳೆ ತರಿಸಬಹುದು' ಅಂತ ಸಲಹೆ ಕೊಟ್ಟರು. ರೆವಿನ್ಯೂ ಆಫೀಸರಿಗೂ ಅದು ಒಪ್ಪಿಗೆಯಾಯಿತು. ಆ ಗಳಿಗೆಯಲ್ಲೇ ಅದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡುವಂತೆ ಶಾನುಭೋಗರಿಗೆ ಅಪ್ಪಣೆ ಕೊಡಿಸಿದರು.

"ಸರಿ ಆಮೇಲೆ ಶಾನುಭೋಗರು ಹರಾಜಿಗೆ ಒಂದು ಸರಿಯಾದ ದಿನ ಗೊತ್ತುಮಾಡಿ ರೆವಿನ್ಯೂ ಆಫೀಸರಿಗೆ ತಿಳಿಸಿದರು. ರೆವಿನ್ಯೂ ಆಫೀಸರು ಒಪ್ಪಿ ತಾಲ್ಲೋಕು ಧಣಿಗಳಿಗೆ ತಿಳಿಸಿದರು. ಎಲ್ಲ ಸಿದ್ಧತೆಗಳೂ ಆಗತೊಡಗಿದವು. ಒಂದೆರಡು ದಿನ ಮುಂಚಿನಿಂದಲೇ ಸುತ್ತಮುತ್ತ ಇದ್ದ ಎಲ್ಲಾ ಹಳ್ಳಿಗಳಲ್ಲೂ ಡಂಗುರ ಹೊಡೆಸಿ ಹರಾಜಿನ ವಿಷಯವನ್ನೂ ಪ್ರಚಾರಮಾಡಿದರು. ಅಷ್ಟೇ ಅಲ್ಲದೆ ಪಟ್ಟಣವಾಸದವರಿಗೂ ತಿಳಿಯಲೆಂಬ ಉದ್ದೇಶದಿಂದ ಪತ್ರಿಕೆಗಳಲ್ಲೆಲ್ಲ ಅಚ್ಚು ಹಾಕಿಸಿದರು. ಹರಾಜಿನ ದಿನವೂ ಬಂತು. ಏನು, ಅಲ್ಲಿ ಒಂದು ದೊಡ್ಡ ಜಾತ್ರೆಯೇ ನಡೆಯಿತು. ಆಗ ತಾನೆ ಆ ಹಳ್ಳಿಯ ಮೂಲಕ ಕಾವೇರಿ ನಾಲೆ ಬಂದು ಸುತ್ತಮುತ್ತ ಇದ್ದ ಹೊಲಗಳೆಲ್ಲ ಬತ್ತದ ಗದ್ದೆಗಳಾಗಿದ್ದುದರಿಂದ ಎಲ್ಲರಿಗೂ ಆ ಜಮೀನಿನ ಮೇಲೆ ಕಣ್ಣು ಬಿತ್ತು.

ಒಂದೇ ತಾಕಿನಲ್ಲಿ ನೂರೈವತ್ತೆಕರೆ ಜಮೀನು! ಯಾರು ತಾನೇ ಬಿಟ್ಟಾರು? ಎಲ್ಲ ಮೂಲೆಗಳಿಂದಲೂ ಹಣವಿದ್ದ ಹಳ್ಳಿಯ ಜನ ತಾವೂ ಒಂದು ಕೈ ನೋಡೋಣವೆಂದು ಅಲ್ಲಿಗೆ ಬಂದು ಸೇರಿದರು. ಪಟ್ಟಣದಿಂದ ಸಾಹುಕಾರರನೇಕಮಂದಿ ಮೂರೂವರಡಿ ರಸ್ತೆಯಲ್ಲೇ ಹೇಗೋ ತಮ್ಮ ಕಾರನ್ನ ನುಸುಳಿಸಿಕೊಂಡು ಬಂದು ನೆರೆದರು. ಕೇವಲ ಕುತೂಹಲದಿಂದ ನೋಡಬೇಕೆಂದು ಬಂದಿದ್ದವರಂತೂ ಸಾವಿರಾರು ಜನ. ಎಲ್ಲ ಆ ಜಮೀನಿನ ತುಂಬ ದಿಕ್ಕಾಪಾಲಾಗಿ ತುಂಬಿಕೊಂಡಿದಾರೆ. ಮಧ್ಯೆ ಒಂದು ವೇದಿಕೆಯ ಮೇಲೆ ಅಮಲ್ದಾರರು, ರೆವಿನ್ಯೂ ಆಫೀಸರು, ಸಂಸ್ಥೆಯ ಅಧಿಕಾರಿಗಳು ಕುರ್ಚಿಗಳಲ್ಲಿ ಕೂತಿದಾರೆ. ಪೋಲಿಸಿನವರು ಕೈಲಿ ಲಾಠಿ ಹಿಡಿದು ಜನ ಗಲಭೆಯೆಬ್ಬಿಸದಂತೆ ನೋಡಿಕೋತಿದಾರೆ. ಆಗ ಬರಬಹುದಾದ ಜನವೆಲ್ಲ ಬಂದಿರಬಹುದೆಂದು ತಿಳಿದಮೇಲೆ ಅಮಲ್ದಾರರು ಗಡಿಯಾರ ನೋಡಿಕೊಂಡು ಪಟೇಲನಿಗೆ ಅಪ್ಪಣೆ ಕೊಟ್ಟರು. ಪಟೇಲ ವೇದಿಕೆಯ ತುದಿಯಲ್ಲಿ ನಿಂತು ಜನಗಳ ಗಮನ ಸೆಳೆದು ಗಟ್ಟಿಯಾಗಿ, 'ಈ ನೂರೈವತ್ತೆಕರೆ ಜಮೀನಿಗೆ ಸರ್ಕಾರೀ ಸವಾಲ್ ಐನೂರು ರೂಪಾಯಿ' ಎಂದು ಹರಾಜು ಕೂಗುವುದಕ್ಕೆ ಷುರು ಮಾಡಿದ. ಜನಗಳ ಮಧ್ಯದಿಂದ ಒಬ್ಬ ಆರುನೂರಕ್ಕೆ ಕೇಳಿದ. ಇನ್ನೊಬ್ಬ ಏಳುನೂರು, ಇನ್ನೊಬ್ಬ ಎಂಟುನೂರು. ಮತ್ತೊಬ್ಬ ಸಾವಿರ. ಹೀಗೇ ಒಬ್ಬರೊಬ್ಬರಿಗೆ ಪೈಪೋಟಿ ಹತ್ತಿ ಮೊದಲು ಹದಿನೈದು ಸಾವಿರಕ್ಕೇರಿತು. ಆಮೇಲೆ ಅನೇಕರಿಗೆ ಸುಸ್ತಾಗಿ ಸುಮ್ಮನೆ ಬೇರೆಯವರ ಧಾರಣೆಯನ್ನೇ ಕೇಳ್ತಾ ನಿಂತರು. ಇಬ್ಬರಿಗೆ ಮಾತ್ರ ಒಳ್ಳೇ ಜೊತೆ ಬಿತ್ತು. ಇಬ್ಬರೂ ಲಕ್ಷಾಧೀಶ್ವರರೇ. ಒಬ್ಬ ಬಟ್ಟೇ ಕಾರ್ಖಾನೆ ಮಾಲಿಕ, ಇನ್ನೊಬ್ಬ ದಳ್ಳಾಳಿ ವ್ಯಾಪಾರದವನು. ಅವರಿಬ್ಬರೂ ಸಾವಿರಸಾವಿರವಾಗಿ ಧಾರಣೆ ಏರಿಸುತ್ತಿದ್ದುದನ್ನು ನೋಡಿದರೆ ಎಷ್ಟೇ ಹಣ ಖರ್ಚಾದರೂ ಒಬ್ಬರು ಇನ್ನೊಬ್ಬರಿಗೆ ಆ ಜಮೀನನ್ನು ಬಿಟ್ಟುಕೊಡುವಂತೆ ತೋರಲಿಲ್ಲ. ಹಾಗೂ ಹೀಗೂ ಧಾರಣೆ ಇಪ್ಪತ್ತೈದು ಸಾವಿರಕ್ಕೇರಿತು. ಅಲ್ಲಿಂದಾಚೆಗೆ ದಳ್ಳಾಳಿ ವ್ಯಾಪಾರದವನು ಯಾಕೋ ಸಾವಿರದ ಮಾತು ಬಿಟ್ಟು ನೂರಕ್ಕಿಳಿದ. ಕಾರ್ಖಾನೆ ಮಾಲಿಕ ಸ್ವಲ್ಪವೂ ಜಗ್ಗಲಿಲ್ಲ. ಇನ್ನೊಂದು ಸಾವಿರವನ್ನು ಸೇರಿಸಿಯೇ ಬಿಟ್ಟ! ದಳ್ಳಾಳಿ ಮತ್ತೇ ಉಸಿರೆತ್ತಲಿಲ್ಲ. ನೆರೆದಿದ್ದ ಜನವೆಲ್ಲ 'ಹೊ' ಎಂದು ಕೂಗಿ ಚಪ್ಪಾಳೆ ಹೊಡೆದರು. ವೇದಿಕೆಯ ಮೇಲಿದ್ದವರೆಲ್ಲ ಉಲ್ಲಾಸದಿಂದ ಹಿಗ್ಗಿಹೋದರು. ಪಟೇಲನೂ ಉತ್ಸಾಹದಿಂದ, 'ಇಪ್ಪತ್ತಾರು ಸಾವಿರ ಒಂದು ಸಾರಿ . . . ಇಪ್ಪತ್ತಾರು ಸಾವಿರ ಎರಡು ಸಾರಿ . . .' ಅಂದ. ಇನ್ನೂ 'ಮೂರು ಸಾರಿ' ಅಂದಿರಲಿಲ್ಲ. ಅಷ್ಟರಲ್ಲೇ ಎಲ್ಲಿಂದಲೋ ಬಂತು ನೋಡಿ ಒಂದು ಕಾರು. ವೇಗವಾಗಿ ಆರ್ಭಟ ಮಾಡಿಕೊಂಡು, ಎಲ್ಲರೂ ಕುತೂಹಲದಿಂದ ಆ ಕಡೆ ತಿರುಗಿದರು. ಕತ್ತಿಸಿಂದ ಹಿಡಿದು

ಕಾಲತುದಿಯವರೆಗೆ ಬಿಳೀ ನಿಲುವಂಗಿ ಹಾಕಿದ್ದ ಒಬ್ಬ ಎತ್ತರವಾದ ವ್ಯಕ್ತಿ ಆ ಕಾರಿನಿಂದ ಹೊರಕ್ಕೆ ದುಮುಕಿ, ಶಿವಪೂಜೆಯಲ್ಲಿ ಕರಡಿ ಬಿಟ್ಟಹಾಗೆ ಆ ಗುಂಪಿನೊಳಕ್ಕೆ ಬಂದ. ಅವನನ್ನ ನೋಡಿದರೆ ಕ್ರೈಸ್ತ ಪಾದ್ರಿ ಇದ್ದ ಹಾಗೆ ಕಂಡಿತು. ಆತರಾತರವಾಗಿ ಅವನು ಬಂದದ್ದು ನೋಡಿ ಜಮೀನಿಗೆ ಇನ್ನೂ ಬೆಲೆ ಏರಬಹುದೆಂದು ನಿರೀಕ್ಷಿಸಿ ಜನರು ಅವನನ್ನೇ ನೋಡುತ್ತಿದ್ದರು. ಅಮಲ್ದಾರರಿಗೂ ಅದು ಸ್ವಲ್ಪ ತಮಾಷೆಯಾಗಿ ಕಂಡಿತು. ಪಟೇಲನಿಗೆ ನಿಧಾನಿಸುವಂತೆ ಸಂಜ್ಞೆ ಮಾಡಿದರು. ಅಷ್ಟು ಹೊತ್ತಿಗೆ ಆ ವ್ಯಕ್ತಿ ಜನಗಳನ್ನು ಆಚೆ ಈಚೆ ತಳ್ಳಿ ದಾರಿಮಾಡಿಕೊಂಡು ವೇದಿಕೆ ಹತ್ತಿ ಅಮಲ್ದಾರರ ಹತ್ತಿರ ಗಾಬರಿ ಗಾಬರಿಯಾಗಿ 'ದಯವಿಟ್ಟು ಹರಾಜು ನಿಲ್ಲಿಸಬೇಕು' ಸ್ವಾಮಿ ಅಂದ. ಅಮಲ್ದಾರರೂ ಗಾಬರಿಯಾಗಿ 'ಯಾಕೆ?' ಅಂದರು.

ಅದಕ್ಕೆ ಪಾದ್ರಿ, 'ಈ ಜಮೀನು ನಮ್ಮದು ಸ್ವಾಮಿ, ತಾವು ಹರಾಜಿನ ವಿಷಯ ನಮ್ಮ ಗಮನಕ್ಕೆ ತರದೆ ಹೀಗೆ ಮಾಡುತ್ತಿದ್ದೀರಿ' ಅಂದ.

ಅಮಲ್ದಾರರು ಆಶ್ಚರ್ಯದಿಂದ, 'ಏನ್ರಿ ಹಾಗಂದ್ರೆ? ಯಾರ್ರಿ ನೀವು? ಏನ್ರಿ ನಿಮ್ಮ ಹೆಸರು?' ಅಂದರು.

'ನನ್ನ ಹೆಸರು ಫಾದರ್ ರಿಚರ್ಡ್' ಅಂದ.

'ಮತ್ತೆ ನಿಮಗೆ ಹೇಗ್ರಿ ಸೇರುತ್ತೆ ಈ ಜಮೀನು?' ಎಂದು ಅಮಲ್ದಾರರು ಹತ್ತಿರವೇ ನಿಂತಿದ್ದ ಶಾನುಭೋಗರನ್ನು ನೋಡಿ, 'ಏನ್ರಿ ಶಾನುಭೋಗರೆ, ಸರಿಯಾಗಿ ನೋಡಿದ್ದೀರೇನ್ರಿ ಈ ಜಮೀನು ಬಸಪ್ಪಂದು ಅಂತ?' ಅಂತ ಕೇಳಿದರು.

ಶಾನುಭೋಗರು, 'ಹೌದು ಮಹಾಸ್ವಾಮಿ, ಅದಕ್ಕೆ ಬೇಕಾದಷ್ಟು ದಾಖಲೆ ಇದೆ' ಅಂದರು.

ಅದಕ್ಕೆ ಪಾದ್ರಿ 'ಇಲ್ಲ ಸ್ವಾಮಿ ಈ ಜಮೀನು ನಮ್ಮ ಯೇಸುಸ್ವಾಮಿಗೆ ಸೇರಿದ್ದು' ಅಂದ.

'ಅದಕ್ಕೆ ದಾಖಲೆ ಎಲ್ರಿ?' ಎಂತ ಅಮಲ್ದಾರರು ಕೇಳಿದರು.

ಪಾದ್ರಿ ಹಿಂದೆ ಮುಂದೆ ನೋಡಿ, ಅಲ್ಲೇ ಗುಡ್ಡದ ಮೇಲೆ ಮುರಿದುಬಿದ್ದಿದ್ದ ಮನೆಯನ್ನು ತೋರಿಸುತ್ತಾ ನೋಡಿ ಸ್ವಾಮಿ, ಅಲ್ಲಿದ್ದ ನಮ್ಮ ಯೇಸುವಿನ ಮಂದಿರಕ್ಕೆ ಬೆಂಕಿಬಿದ್ದಾಗಲೇ ಈ ಜಮೀನಿಗೆ ಸಂಬಂಧಿಸಿದ ಕಾಗದಪತ್ರಗಳೆಲ್ಲ ಸುಟ್ಟು ಬೂದಿಯಾಯಿತು. ಆಮೇಲೆ ಉಳಿದ ಚರಸ್ಥಿರ ಆಸ್ತಿಯನ್ನೆಲ್ಲ ಬೆಂಗಳೂರಿನ ಚರ್ಚಿಗೆ ಸೇರಿಸಿಕೊಂಡು ನಾವೇ ನೋಡಿಕೊಳ್ಳುತ್ತಿದ್ದೇವೆ. ನಮ್ಮಲ್ಲಿ ಬೇರೆ ಯಾವ ದಾಖಲೆಯೂ ಇಲ್ಲ. ಸರ್ಕಾರದಲ್ಲೇ ಇರುವ ಹಳೇ ರಿಕಾರ್ಡುಗಳನ್ನು ತೆಗೆಸಿ

ನೋಡಬಹುದು. ಹರಾಜಿನ ಸುದ್ದಿಯನ್ನು ಪೇಪರಿನಲ್ಲಿ ನೋಡಿದ ಕೂಡಲೆ ನಮ್ಮ ಗುರುಗಳು ನನ್ನನ್ನು ಕಳಿಸಿಕೊಟ್ಟಿದಾರೆ' ಅಂದ.

ಅಷ್ಟುಹೊತ್ತಿಗೆ ಶಾನುಭೋಗರು. ತಾವು ತಂದಿದ್ದ ಕಾಗದಪತ್ರಗಳನ್ನೆಲ್ಲ ತಲೆಕೆಳಕುಮಾಡಿ ಆ ಜಮೀನು ಬಸಪ್ಪನದೇ ಅಂತ ಸಾಧಿಸಲು ಇದ್ದ ಆಧಾರಗಳನ್ನೆಲ್ಲಾ ಅಮಲ್ದಾರರ ಮುಂದಿಟ್ಟರು. ಅಮಲ್ದಾರರು ಓದಿನೋಡಿದರು. ಬಗೆಹರಿಯಲಿಲ್ಲ. ಪಾದ್ರಿಯನ್ನು ಶುದ್ಧ ಮೋಸಗಾರನಿರಬೇಕೆಂದು ಬೈದರು. ಆದರೆ ಪಾದ್ರಿ ಮಾತ್ರ ನಮ್ರನಾಗಿ 'ನಾವು ಯೆಸುವಿನ ಭಕ್ತರು. ಸುಳ್ಳು ಹೇಳುವವರಲ್ಲ. ತಾವು ಸರಿಯಾಗಿ ಪರಿಶೀಲಿಸಿ ನೋಡಬೇಕು. ಇಲ್ಲದಿದ್ದರೆ ನಮ್ಮ ದೇವರಿಗೆ ಅನ್ಯಾಯ ಮಾಡಿದಂತಾಗುತ್ತೆ' ಅಂದ. ಅವನ ಮಾತನ್ನು ಸುಲಭವಾಗಿ ತೆಗೆದುಹಾಕುವಂತಿರಲಿಲ್ಲ. ಅಮಲ್ದಾರರಿಗೆ ಮಾತ್ರ ಏನು ಮಾಡುವುದಕ್ಕೂ ತೋಚಲಿಲ್ಲ. ಸ್ವಲ್ಪ ಹೊತ್ತು ಆಲೋಚನೆ ಮಾಡಿದರು. ಆ ಮೇಲೆ ಶಾನುಭೋಗರ ಕಡೆ ತಿರುಗಿ, 'ನೀವು ಈಗ ತೋರಿಸಿದ ದಾಖಲೆ ಎಷ್ಟು ವರ್ಷದ್ರಿ?' ಅಂತ ಕೇಳಿದರು.

ಶಾನುಭೋಗರು 'ಹೋದ ವರ್ಷದ್ದು ಮತ್ತು ಈ ವರ್ಷದ್ದು ಮಹಾಸ್ವಾಮಿ' ಅಂದರು.

'ಬಾಕೀದು?' ಎಂದು ಕೇಳಿದರು.

'ಬಾಕೀದೆಲ್ಲ ತಮ್ಮ ಆಫೀಸಿನಲ್ಲೇ ಇದೆಯಲ್ಲ ಮಹಾಸ್ವಾಮಿ' ಅಂದರು.

'ಸರಿ' ಅನ್ನುತ್ತಾ ಅಮಲ್ದಾರರು ಮೇಲೆದ್ದು, ತಮಾಷೆ ನೋಡುತ್ತಾ ಏನಿತ್ಯರ್ಥ ಮಾಡುವರೋ ಎಂದು ಎದುರುನೋಡುತ್ತಿದ್ದ ಜನಗಳನ್ನು ನೋಡಿ, 'ಈ ದಿನ ಹರಾಜನ್ನು ಇಲ್ಲಿಗೇ ನಿಲ್ಲಿಸಿದೆ. ಜಮೀನಿನ ಮಾಲೀಕರು ಯಾರೆಂದು ಖಚಿತವಾಗಿ ತಿಳಿದಮೇಲೆ, ಬೇರೆ ಯಾವ ಅಡಚಣೆಯೂ ಇಲ್ಲದಿದ್ದಲ್ಲಿ ಈ ದಿನ ಎಲ್ಲರಿಗಿಂತ ಹೆಚ್ಚು ಬೆಲೆಗೆ ಕೇಳಿದವರಿಗೆ ಈ ಜಮೀನನ್ನು ಕೊಡಲಾಗುತ್ತೆ. ಅವರು ಹಣದ ಸಮೇತ ನಾಳೆ ಮಧ್ಯಾಹ್ನ ಆಫೀಸಿನಲ್ಲಿ ಬಂದು ನನ್ನನ್ನು ಕಾಣಬಹುದು' ಅಂದರು. ಆ ಮೇಲೆ ಫಾದರ್ ರಿಚರ್ಡನಿಗೆ 'ನಾಳೆ ಬೆಳಗ್ಗೆ ಆಫೀಸ್ ಬಳಿ ಬನ್ನಿ' ಅಂದರು. ಜನರ ಗುಂಪೆಲ್ಲ ಕೋಲಾಹಲಮಾಡಿಕೊಂಡು ಹೊರಟುಹೋಯಿತು. ಎಲ್ಲಾ ಸಂತೋಷದಿಂದ ಹೋದರೂ ಮಿಲ್ ಮಾಲೀಕನೊಬ್ಬ ಸ್ವಲ್ಪ ಅಸಮಾಧಾನದಿಂದಲೇ ಹೋದ.

ಅದುವರೆಗೆ ಕಂಬ ಒರಗಿಕೊಂಡು, ಕಣ್ಣು ಮಿಟುಕಿಸದೆ ಶಂಕರಯ್ಯನವರ ಮುಖವನ್ನೇ ನೋಡುತ್ತಾ, ಬಾಯಿಬಿಟ್ಟುಕೊಂಡು ಕತೆ ಕೇಳುತ್ತಿದ್ದ ಶಾನುಭೋಗರು ಬೆನ್ನಮೂಳೆ ನೆಟ್ಟಗೆ ಮಾಡಿಕೊಂಡು ಏನೋ ಸಂದೇಹನಿವಾರಣೆ ಮಾಡಿ

ಕೊಳ್ಳುವವರಂತೆ, "ಅದ್ಸರಿ, ಆ ಫಾದರ್ ರಿಚರ್ಡ್‌ಗ ಚರ್ಚು ಸುಟ್ಟುಹೋಯಿತು ಅಂದ್ನಲ್ಲ, ಅದೇನು ಕಾರಣವೊ ?" ಅಂತ ಕೇಳಿದರು.

ಶಂಕರಯ್ಯನವರು ಮುಂದುವರಿಸಿದರು—"ಅದೇ ! ಅದೊಂದು ದೊಡ್ಡ ಕತೆ. ಇಂಗ್ಲಿಷರು ನಮ್ಮ ದೇಶಕ್ಕೆ ಬಂದಾಗ ಅವರ ಜೊತೆಯಲ್ಲೆ ಅವರ ಮತ ಹರಡೋದಕ್ಕೆ ಕೆಲವು ಜನ ಪಾದ್ರಿಗಳು ಬಂದಿದ್ರಲ್ಲಾ, ಅವರು ಎಲ್ಲೆಲ್ಲೂ ಚರ್ಚುಗಳನ್ನು ಸ್ಥಾಪಿಸಿ ಸಿಕ್ಕಿಸಿಕ್ಕಿದವರನ್ನೆಲ್ಲ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಿದ್ದ ವಿಷಯ ನಿಮಗೆ ಗೊತ್ತಿದೆಯಲ್ಲ ! ಅವರು ನಮ್ಮ ಹಳ್ಳಿಗೂ ಬಂದು ಆ ಗುಡ್ಡದ ಮೇಲೆ ಒಂದು ಚರ್ಚು ಕಟ್ಟಿಸಿದರು. ಆಗೇನು, ಇಂಗ್ಲಿಷರದೇ ರಾಜ್ಯ, ಅವರಾಡಿದ್ದೇ ಆಟ. ಅವರನ್ನು ತಡೆಯೋದಕ್ಕೆ ಯಾರಿದ್ರು ? ಅಂತು ಚರ್ಚು ಕಟ್ಟಿಸಿದ ಮೇಲೆ ಅಲ್ಲಿ ಮೂರು ಜನ ಪಾದ್ರಿಗಳು, ಅವರಿಗೊಬ್ಬ ಯಜಮಾನ ನಾಕು ಜನವೂ ವಾಸಮಾಡಿಕೊಂಡಿದ್ದರು. ತಿನ್ನೋದಕ್ಕೂ ಕುಡಿಯೋದಕ್ಕೂ ಅವರಿಗೆ ಯಥೇಚ್ಛವಾಗಿತ್ತು. ಅವರು ಪ್ರತಿನಿತ್ಯ ಸಾಯಂಕಾಲದ ಹೊತ್ತು ಸಂತೆಮೋಳದಲ್ಲಿ ನಿಂತು ಯೇಸು ಕ್ರಿಸ್ತನ ಮೇಲೆ ಕಟ್ಟಿದ ಹಾಡುಗಳನ್ನೆಲ್ಲ ಹಾಡುತ್ತಿದ್ದರು. ಕೇಳುವುದಕ್ಕೆ ಸುತ್ತ ಜನ ಬಂದು ಸೇರಿದರೆಂದರೆ ಭಾಷಣಕ್ಕಾರಂಭಿಸುತ್ತಿದ್ದರು. ಮೊದಮೊದಲು ಜನಗಳಿಗೆ ಬಲು ತಮಾಷೆಯಾಗಿ ಕಂಡಿತು. ಎಲ್ಲರೂ ಹೋಗಿ ಮುತ್ತಿಕೊಳ್ಳುತ್ತಿದ್ದರು. ಒಂದು ದಿನ ಆ ಪಾದ್ರಿಗಳು ತಮ್ಮ ಯೇಸು ಕ್ರಿಸ್ತನ ಮಹಿಮೆಯನ್ನು ಹೊಗಳುತ್ತಾ ಬೈಬಲ್ಲಿನಲ್ಲಿ ಬರುವ ಸ್ವಾರಸ್ಯವಾದ ಕತೆಗಳನ್ನು ಹೇಳುತ್ತಾ ತಮ್ಮ ಧರ್ಮವೇ ಶ್ರೇಷ್ಠವಾದುದು ಎಂದೆಲ್ಲ ವಿವರಿಸಿ, ಆ ಮೇಲೆ ಜನಗಳಿಗೆ, 'ನೋಡಿ, ನೀವು ಮೋಸಹೋಗುತ್ತಿದೀರಿ. ಕಲ್ಲು ಮಣ್ಣುಗಳನ್ನು ದೇವರೆಂದು ಪೂಜಿಸುತ್ತೀರಿ, ಗಿಡಗಳನ್ನು ಪ್ರಾಣಿಗಳನ್ನು ದೇವರೆಂದು ಪೂಜಿಸುತ್ತೀರಿ. ನಿಮಗೆ ತಿಳಿವಳಿಕೆಯಿಲ್ಲ. ಪಾಪ, ತಿಳಿಯದೆ ನೀವು ತಪ್ಪುದಾರಿಯಲ್ಲಿ ಹೋಗುತ್ತಿದೀರಿ. ಭಗವಂತನ ಪುತ್ರನಾದ ನಮ್ಮ ಯೇಸುವನ್ನು ನೋಡಿ ! ಅವನು ಏತಕ್ಕೆ ಹುಟ್ಟಿದ ? ನಿಮ್ಮಂಥವರ ಉದ್ಧಾರಕ್ಕಾಗಿಯೇ ! ಅಷ್ಟೆಲ್ಲ ಏತಕ್ಕೆ ಕಷ್ಟಪಟ್ಟ ? ನಿಮ್ಮಂತವರ ಉದ್ಧಾರಕ್ಕಾಗಿಯೇ ! ತನ್ನನ್ನು ಶಿಲುಬೆಗೇರಿಸಿದರೂ ಯಾರಿಗಾಗಿ ಆ ಹಿಂಸೆಯನ್ನೆಲ್ಲ ಸಹಿಸಿಕೊಂಡ ? ನಿಮ್ಮಂಥವರಿಗಾಗಿಯೇ ! ಆದ್ದರಿಂದ ಅವನು ತೋರಿಸಿದ ಮಾರ್ಗದಲ್ಲಿ ನಡೆಯಿರಿ, ನಿಮಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ನೀವು ನಾಶವಾಗುತ್ತೀರಿ. ನರಕದಲ್ಲಿ ಬೀಳುತ್ತೀರಿ' ಅಂದರು. ಓ ಎಂದರೆ ಠೋ ಗೊತ್ತಿಲ್ಲದ ನಮ್ಮ ಜನಗಳು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ಸುಮ್ಮನಿದ್ದರು.

"ಮಾರನೇ ದಿನ ಬೆಳಗ್ಗೆ ಮಾರೀಗುಡಿ ಚಾವಡಿಮುಂದೆ ಹಳ್ಳೀ ಜನಗಳು

ಕೆಲವರು ಸೇರಿ ಬಿಸಿಲುಕಾಯ್ತಾ, ಹಿಂದಿನ ದಿನದ ಮಾತುಗಳನ್ನೇ ಆಡ್ತಾ ನಿಂತಿದ್ದರು. ಅಷ್ಟುಹೊತ್ತಿಗೆ ಮಠದ ಅಯ್ಗಳು ಆ ಕಡೆ ಬಂದರು. ಅವರಿಗೆ ತಾವು ಕೇಳಿದ ಭಾಷಣವನ್ನು ಚಾಚೂ ತಪ್ಪದೆ ವರದಿ ಒಪ್ಪಿಸಿದರು. ಪಾದ್ರಿಗಳಾಡಿದ ಮಾತೆಲ್ಲ ಕೇಳಿ ಅಯ್ಗಳಿಗೆ ಮೈ ಉರಿದುಹೋಯಿತು! 'ಆ್ಞ, ಈ ಮ್ಲೇಚ್ಛರು ಇಷ್ಟೆಲ್ಲ ಆಡಿದರೋ? ನಮ್ಮ ದೇವರುಗಳನ್ನ ಬೈಯುವುದಕ್ಕೆ ಬಂದರೋ ಚಂಡಾಲರು? ನೋಡಿ, ಲೋಕಕಲ್ಯಾಣಕ್ಕಾಗಿ ಬಂಡೆಯಿಂದ ತಾನಾಗಿ ಉದ್ಭವಿಸುವ ಈ ನಮ್ಮ ಗ್ರಾಮದೇವತೆಯನ್ನೇ ಅವರು ಕಲ್ಲು ಎಂದು ಕರೀತಿರೋದು. ಸಾಕ್ಷಾತ್ ಸುಬ್ರಹ್ಮಣ್ಯೇಶ್ವರನ ವಾಸಸ್ಥಾನವಾದ ಹುತ್ತವನ್ನು ಪೂಜೆಮಾಡಿದರೆ ಮಣ್ಣನ್ನು ಪೂಜಿಸ್ತೀರಿ ಅಂತಿದಾರೆ. ನಮಗೆ ಅಮೃತ ಕೊಡೋ ಗೋಮಾತೆಯನ್ನ ಪೂಜಿಸಿದರೆ ಪ್ರಾಣಿಗಳನ್ನು ಪೂಜಿಸ್ತೀರಿ ಅಂತಾರೆ. ಮೂಲತೋ ಬ್ರಹ್ಮರೂಪಾಯ! ಮಧ್ಯತೋ ವಿಷ್ಣುರೂಪಿಣೇ! ಅಗ್ರತಃ ಶಿವರೂಪಾಯ! ಅಂತ ಬ್ರಹ್ಮ ವಿಷ್ಣು ಮಹೇಶ್ವರರೂ ದೇವತೆಗಳೂ ನೆಲಸಿರುವ ವೃಕ್ಷರಾಜನಾದ ಅರಳೀಮರವನ್ನು ಪೂಜೆಮಾಡಿದರೆ ಗಿಡಗಳನ್ನೂ ಪೂಜೆ ಮಾಡ್ತೀರಿ ಅಂತಾರೆ, ಪಾಷಂಡಿಗಳು ಶುದ್ಧ ಅವಿವೇಕಿಗಳು! ಅವರ ಮಾತುಗಳನ್ನು ಕೇಳಿಗೀಳೀರಿ. ಅವರ ಮುಖವನ್ನು ಕೂಡ ನೋಡಬಾರದು ನಾವು. ಜಾತಿಯಲ್ಲಿ ನಮ್ಮ ಹೊಲೆಯರಿಗಿಂತ ಕಡೆ. ಅವರನ್ನು ನೋಡಿದರೇ ಸ್ನಾನಮಾಡಬೇಕು. ಇನ್ನು ಅವರ ಮಾತುಗಳನ್ನೇನಾದರೂ ಕೇಳಿದರೆ ನೀವು ಅನ್ಯಾಯವಾಗಿ ಹಾಳಾಗ್ತೀರಿ. ಎಚ್ಚರಿಕೆ ಕೊಟ್ಟಿದೇನೆ' ಅಂದರು. ನಮ್ಮ ಹಳ್ಳೀ ಜನಗಳ ವಿಷಯ ನಿಮಗೆ ತಿಳಿದೇ ಇದೆಯಲ್ಲ. ಎತ್ತು ಈಯ್ತು ಅಂದರೆ ಕೊಟ್ಟಿಗೇಲಿ ಕಟ್ಟು ಅನ್ನುವ ಜನ! ಅಯ್ಗಳು ಅಷ್ಟು ಹೇಳಿದ್ದೇ ಸಾಕು. ತುರುಕ ಮೆಣಸಿನಕಾಯಿ ಕಡಿದ ಹಾಗಾಯಿತು ಅವರಿಗೆ! 'ಈ ಬಡ್ಡೀಮಕ್ಕಳ್ನ ಸುಮ್ಕೆಬಿಡ್ಬಾರ್ದು' ಅಂದುಕೊಂಡರು.

"ಅದಾದ ಒಂದೆರಡು ದಿನಕ್ಕೇ ಪಾದ್ರಿಗಳು ಹಳ್ಳಿಯ ಕೆಲವು ಮಾದಿಗರನ್ನೂ ಹೊಲೆಯರನ್ನೂ ಅನ್ನ ಬಟ್ಟೆಯ ಆಸೆ ತೋರಿಸಿ, ಚರ್ಚಿಗೆಳೆಕೊಂಡು ಹೋಗಿ ಯೇಸುವಿನ ಶಿಲುಬೆಯಡಿ ನಿಲ್ಲಿಸಿ, ಅವರ ಕೈಲಿ ಬೈಬಲ್ ಕೊಟ್ಟು, ತಮ್ಮ ಒಡೆಯನಿಂದ ಆಶೀರ್ವಾದ ಮಾಡಿಸಿ ಅವರಿಗೆ ಸ್ವರ್ಗಕ್ಕೆ ನೇರವಾಗಿ ಟಿಕೆಟ್ ಕೊಟ್ಟರು! ಈ ವಿಷಯ ತಿಳಿದ ಮೇಲಂತೂ ಹಳ್ಳಿಯ ಜನಗಳಿಗೆ ರೋಷ ಮಿತಿಮೀರಿತು. ಎಲ್ಲರೂ ಒಂದೊಂದು ದೊಣ್ಣೆ ತೆಗೆದುಕೊಂಡು ಚರ್ಚಿನ ಕಡೆ ಹೊರಟುಬಿಟ್ಟರು. ಆದರೆ ಅಯ್ಗಳು ದಾರಿಯಲ್ಲಿ ಸಿಕ್ಕಿ, 'ಆ ಪಾದ್ರಿಗಳ ತಂಟೆಗೆ ಹೋಗಬೇಡಿ. ಅವರೆಲ್ಲ ಇಂಗ್ಲಿಷರ ಕಡೆಯವರು. ಅವರನ್ನೇನಾದರೂ ಮುಟ್ಟಿದರೆ ನಮ್ಮನ್ನು ಸುಮ್ಮನೆ ಬಿಟ್ಟಾರೆ? ಬೇಡ ಬನ್ನಿ'

ಎಂದು ಸಮಾಧಾನಮಾಡಿ ಹಿಂದಕ್ಕೆ ಕರೆತಂದರು. ಆದರೂ ಸಮಯ ಕಾದಿದ್ದು ಅವರಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಹಳ್ಳಿಯವರೆಲ್ಲ ನಿರ್ಧಾರ ಮಾಡಿಕೊಂಡರು.

"ಸ್ವಲ್ಪ ದಿನಗಳಲ್ಲೇ ಆ ವರ್ಷದ ಮಾರಮ್ಮನ ಜಾತ್ರೆ ಬಂತು. ಸುತ್ತಮುತ್ತ ಇದ್ದ ಹಳ್ಳಿಗಳಿಂದ ಸಾವಿರಾರು ಜನ ಬಂದು ಸೇರಿದ್ದರು. ಆಗ ಪಾದ್ರಿಗಳು ಮತ್ತಷ್ಟು ಜನ ತಮ್ಮ ಬಲೆಗೆ ಬೀಳ್ತಾರೇನೋಂತ ಬೈಬಲ್ಲು ಕಂಕಳಲ್ಲಿಟ್ಟುಕೊಂಡು ಮಾರಿಗುಡಿಮುಂದೆ ಬಂದು ನಿಂತರು. ತಮ್ಮ ದೇವರ ಪೂಜೆ ಆಗುವಾಗ ಆ ಮ್ಲೇಚ್ಛರು ಎದುರಿಗೆ ಬಂದು ನಿಂತದ್ದು ಹಳ್ಳಿಯ ಜನಗಳಿಗೆ ಸರಿಯಾಗಿ ಕಾಣಲಿಲ್ಲ. ಆದರೂ ತಮ್ಮ ಗ್ರಾಮದೇವತೆಯ ಮಹಿಮೆಯನ್ನು ನೋಡಿ ಅವರು ನಾಚಿಕೊಳ್ಳಲಿ ಎಂದು ಸುಮ್ಮನಾದರು. ಆದರೆ ಯಾವಾಗ ಅವರು ತಮ್ಮ ಪುಸ್ತಕ ಬಿಚ್ಚಿ, 'ಯೇಸು ಕ್ರಿಸ್ತನ ಭಜಿಸೋ. . . .' ಅಂತ ರಾಗ ತೆಗೆದು 'ಕುರಿ ಕೋಣಗಳನ್ನು ಬಲಿ ತೆಗೆದು ಕೊಳ್ಳುವ ನಿಮ್ಮ ದೇವರು ದೇವರಲ್ಲ. ಅದು ಸೈತಾನ, ಪಿಶಾಚಿ. ಅದನ್ನು ನಂಬಿ ನೀವು ಕೆಟ್ಟುಹೋಗುತ್ತೀರಿ . . .' ಎಂದು ಬಾಯಿಬಿಟ್ಟರೋ ಇಲ್ವೋ ಜನಗಳ ರಕ್ತ ಕುದಿಯತೊಡಗಿತು. ಅವರು ತಾನೇ ಎಷ್ಟೊಂತ ಸಹಿಸ್ತಾರೆ ಅವರ ಅನಾಚಾರಾನ? ನಾಕು ಜನ ತುಂಡಾಂಡಿಗಳು ಹಿಂದಿನಿಂದ ದೊಣ್ಣೆ ಹಿಡಿಕೊಂಡು ಬಂದು ಬಿಟ್ಟರು ಚೆನ್ನಾಗಿ ಪಾದ್ರಿಗಳಿಗೆ! ಒಬ್ಬನಿಗೆ ತಲೇಗೆ ಪೆಟ್ಟುಬಿದ್ದು ಅಲ್ಲೇ ಉರುಳಿಕೊಂಡ. ಇನ್ನಿಬ್ಬರು ಅರಚಿಕೊಂಡು ಓಡಿಹೋಗುವುದಕ್ಕೆ ನೋಡಿದರು, ಅಷ್ಟು ಜನಗಳಿರುವಾಗ ಎಲ್ಲಿಗೆ ಅವರು ತಪ್ಪಿಸಿಕೊಂಡು ಹೋಗೋದು? ಹೊಡೀರೊ ಬಡೀರೊ ಅಂತ ಎಲ್ಲ ಮುತ್ತಿಕೊಂಡು ಆಳಿಗೊಂದು ಗುದ್ದು ಹಾಕಿದರು. ಮೂರು ಜನವೂ ಮಾರಮ್ಮನಿಗೆ ಬಲಿಯಾಗಿಬಿಟ್ಟರು! ಅಂತು ಗ್ರಾಮದೇವತೆಯನ್ನು ಬೈದುದಕ್ಕೆ ಅವರಿಗೆ ತಕ್ಕ ಶಿಕ್ಷೆಯಾಯಿತೆಂದು ಎಲ್ಲರಿಗೂ ಸಂತೋಷವಾಯಿತು. ಕೆಲವರಿಗೆ ಅಷ್ಟರಿಂದಲೇ ಸಮಾಧಾನವಾಗಲಿಲ್ಲ. ಆ ಮೂವರ ಹೆಣವನ್ನು ಮಾರಮ್ಮನ ಮುಂದಕ್ಕೆ ದರದರ ಎಳೆತಂದರು. ಗುಡಿಯ ಮುಂದೆ ಕೊಂಡ ಹಾಯುವುದಕ್ಕೆ ಸಿದ್ಧಮಾಡಿಟ್ಟಿದ್ದ ಬೆಂಕಿ ಧಗಧಗಾಂತ ಉರೀತಿತ್ತು. ಮಾರಮ್ಮನ ಪ್ರೀತ್ಯರ್ಥವಾಗಿ ಆ ಹೆಣಗಳನ್ನು ಒಂದೊಂದಾಗಿ ಬೆಂಕಿಗರ್ಪಿಸಿದರು. ಅಷ್ಟು ಹೊತ್ತಿಗೆ ಅದೇನೊ ಹೇಳ್ತಾರಲ್ಲ ಮೊದಲೇ ಕಪಿಗೆ ಹೆಂಡ ಕುಡಿಸಿ ಚೇಳು ಕಡಿಸಿದ ಹಾಗೆ ಅಂತ! ಹಾಗೆ ಇನ್ನು ಕೆಲವರು ಕೊಳ್ಳಿ ಹಿಡಿಕೊಂಡು ಹೋಗಿ ಚರ್ಚಿಗೆ ಬೆಂಕಿಯಿಟ್ಟುಬಿಟ್ಟರು! ಆ ಚರ್ಚು ಉರಿಯುವುದಕ್ಕೆ ಮೊದಲಾಯಿತು ನೋಡಿ, ಜ್ವಾಲೆ ಅಂತರಿಕ್ಷವನ್ನು ಮುಟ್ಟುತಿತ್ತು. ಜನ ಸಂತೋಷವಾಗಿ ಕುಣಿದಾಡ್ತಾ ಇದ್ದರು. ಚರ್ಚಿನಲ್ಲಿ ಪಾದ್ರಿಗಳ ಯಜಮಾನ ಒಬ್ಬನೇ ಇದ್ದ. ಹೊರಗಿನಿಂದ ಬಾಗಿಲು ಬೇರೆ ಹಾಕಿಕೊಂಡುಬಿಟ್ಟಿದ್ದರು. ಚರ್ಚೆಲ್ಲ

ಸುಟ್ಟು ಬೂದಿಯಾಗುವಾಗ ಪಾಪ, ಯೇಸು ಕ್ರಿಸ್ತನ ಜೊತೆಯಲ್ಲಿ ಅವನೂ ಬೆಂದು ಹೋದ. ಗ್ರಾಮದೇವತೆಯನ್ನು ನಿಂದಿಸಿ ಜನ ಬದುಕುವುದಕ್ಕುಂಟೆ? ನೋಡಿ, ಹೇಗೆ ಸೇಡು ತೀರಿಸಿಕೊಂಡಳು ತನ್ನನ್ನು ಹಳಿದದ್ದಕ್ಕೆ!

"ಆ ಮೇಲೆ ಪೋಲಿಸಿನವರು ಅವರು ಇವರು ಎಲ್ಲಾ ಬಂದರು ನೋಡಿದರು. ಅವರೇನು ಮಾಡ್ತಾರೆ? ಯಾರನ್ನಾಂತ ಹಿಡೀತಾರೆ? ಹಾಗೂ ಸಿಕ್ಕಿದವರು ಒಬ್ಬಿಬ್ಬರನ್ನ ಹಿಡಿಕೊಂಡು ಹೋಗಿ ಲಾಕಪ್ಪಿಗೆ ಹಾಕಿದರು. ಮೊನ್ನೆ ಮೊನ್ನೆ ವರೆಗೂ ಕೋರ್ಟಿನಲ್ಲಿ ಅದರ ವ್ಯವಹಾರ ನಡೀತಲೇ ಇತ್ತು. ಆ ಮೇಲೆ ಅವರನ್ನೂ ಬಿಟ್ಟುಬಿಟ್ಟರು ಅನ್ನಿ! . . . ನೋಡಿದ್ರಾ. ಇದೇ ಚರ್ಚು ಸುಟ್ಟುಹೋದ ಕತೆ. ಆ ಸಂದರ್ಭದಲ್ಲೇ ಇರಬೇಕು ಚರ್ಚಿನಲ್ಲಿದ್ದ ಕಾಗದಪತ್ರಗಳೆಲ್ಲ ಸುಟ್ಟುಹೋದದ್ದು."

ಕತೆ ನಿಲ್ಲಿಸಿ, ಶಂಕರಯ್ಯನವರು ಸೊಂಟದಿಂದ ಡಬ್ಬಿ ತೆಗೆದು, ಅದರ ತಲೆಯ ಮೇಲೆ ಬೆರಳಿನಿಂದ ಒಂದೇಟು ಹಾಕಿ, ಮುಚ್ಚಳ ತೆಗೆದು, ಶಾನುಭೋಗರಿಗೆ ಒಂದು ಚಿಟಿಕೆ ಕೊಟ್ಟು, ತಾವೂ ಒಂದು ಚಿಟಿಕೆ ನಶ್ಯ ಮೂಗಿಗೇರಿಸಿ, ಆ ಮೇಲೆ ಒಂದಾನೊಂದು ಕಾಲದಲ್ಲಿ ಬಿಳಿದೆನಿಸಿದ್ದು ನಶ್ಯದ ಸಂಪರ್ಕದಿಂದಲೇ ಒಂದು ಗ್ಯಾರಂಟಿ ಬಣ್ಣ ಬಂದಿದ್ದ ಕರವಸ್ತ್ರದಿಂದ ಮೂಗೊರಸಿಕೊಳ್ಳುತ್ತಾ, ಒಂದು ಸಾರಿ ಕೆಮ್ಮಿ ಗಂಟಲು ಸರಿಮಾಡಿಕೊಂಡು, ಮತ್ತೆ ಕತೆಯನ್ನು ಹರಿಯಬಿಟ್ಟರು—

"ಏನೋ ಹೇಳೋಕ್ಕೆ ಹೋಗಿ ಏನೋ ಆಯ್ತು! ಅವತ್ತು ಹರಾಜು ನಿಂತು ಹೋಯ್ತು ಅಂದ್ನೆಲ್ಲ ಅದರ ಮಾರನೇ ದಿನ ಫಾದರ್ ರಿಚರ್ಡ್ ಹೊತ್ತಿಗೆ ಸರಿಯಾಗಿ ತಾಲ್ಲೋಕ್ ಆಫೀಸಿಗೆ ಬಂದ. ಅಮಲ್ದಾರರು ಒಂದು ಕಡೆ ಕೂತಿದಾರೆ, ಫಾದರ್ ರಿಚರ್ಡ್ ಒಂದು ಕಡೆ ಕೂತಿದಾನೆ. ಅಮಲ್ದಾರನ ಎರಡು ಪಕ್ಕಗಳಲ್ಲೂ ರೆವಿನ್ಯೂ ಆಫೀಸರು 'ಹೆಚ್ಚು ಆಹಾರ ಬೆಳೆಯಿರಿ' ಸಂಸ್ಥೆಯ ಅಧಿಕಾರಿಗಳು ಕೂತಿದಾರೆ. ಪೋಲಿಸ್ ಇನ್ಸ್‌ಪೆಕ್ಟರು, ಆಫೀಸಿನ ಗುಮಾಸ್ತರುಗಳು ಅಮಲ್ದಾರರ ಕುರ್ಚಿ ಹಿಂದೆಯೇ ನಿಂತಿದಾರೆ. ಹೊರಗಡೆ ಬಾಗಿಲಲ್ಲಿ ಮಿಲ್‌ಮಾಲಿಕ, ಹಳ್ಳೀಜನಗಳು, ಶಾನುಭೋಗ, ಪಟೇಲ ಎಲ್ಲರೂ ಏನಾಗುತ್ತೋ ನೋಡಬೇಕೆಂದು ಕುತೂಹಲದಿಂದ ಕಾದಿದಾರೆ. ರಿಕಾರ್ಡ್ ಕೀಪರ್ ವೆಂಕಟಸುಬ್ಬಯ್ಯ—ಅವನೇ, ನನ್ನ ಸೋದರಳಿಯ. ಅಲ್ಲಿಗೆ ಬಂದು ನಾಕು ವರ್ಷವಾಗಿತ್ತು. ಈಗ ಹೊಸ ಮಂಗಲದಲ್ಲಿದಾನೆ.—ಅವನು ಹಳೇ ರಿಕಾರ್ಡುಗಳನ್ನೆಲ್ಲ ಒಂದೊಂದು ವರ್ಷದ ಹಾಗೆ ತೆಗೆದು ತೆಗೆದು ಅಮಲ್ದಾರರ ಮುಂದೆ ಇಡುತ್ತಿದ್ದ. ಅಮಲ್ದಾರರು ಅವುಗಳನ್ನೆಲ್ಲ ಒಂದೊಂದಾಗಿ ತಿರುವಿಹಾಕುತಿದಾರೆ. ಒಂದು ವರ್ಷದ್ದು ನೋಡಿದರು. ಎರಡು ವರ್ಷದ್ದು ನೋಡಿದರು. ಜಮೀನು ಬಸಪ್ಪನದೇ ಎಂದಿದೆ! ನಮ್ಮ ವೆಂಕಟಸುಬ್ಬಯ್ನ ಅಕ್ಷರಗಳು ಗುಂಡಗೆ ಸ್ಫುಟವಾಗಿ

ಮುತ್ತು ಪೋಣಿಸಿದ ಹಾಗಿತ್ತು. ಅದರಲ್ಲೇನೂ ತಪ್ಪು ಹುಡುಕುವಂತಿರಲಿಲ್ಲ. ಕಂದಾಯದ ರಸೀತಿ ಪುಸ್ತಕವನ್ನು ತರಿಸಿಕೊಂಡು ನೋಡಿದರು. ಅದರ ಅಕ್ಕಪಕ್ಕದ ಜಮೀನಿನವರೆಲ್ಲ ಸರಿಯಾಗಿ ಕಂದಾಯ ಪಾವತಿ ಮಾಡಿದ್ದಾರೆ. ಆ ಜಮೀನದು ಮಾತ್ರ ಬಂದಿಲ್ಲ! ಬೇರೊಂದು ಪುಸ್ತಕ ಎಳೆದುಕೊಂಡು ನೋಡಿದರು. ಒಂದು ಮೂಲೆಯಲ್ಲಿ ಕೆಂಪುಶಾಯಲ್ಲಿ ಯಾವುದೋ ಆರ್ಡರಿನ ನಂಬರನ್ನೂ ತಾರೀಕನ್ನೂ ಗುರುತು ಹಾಕಿತ್ತು. ಫೈಲು ತೆಗೆದು ಆ ಆರ್ಡರನ್ನು ನೋಡಿದರು. ಆ ಜಮೀನಿಗೆ ಕಂದಾಯದ ರಿಯಾಯ್ತಿ ಕೊಟ್ಟಿದೆ ಎಂದು ಬರೆದಿತ್ತು. ಅಂತು ಒಂದೇನೋ ನಿರ್ಧರವಾಯಿತು, ಜಮೀನು ಬಸಪ್ಪನದೇ ಮತ್ತು ಅವನು ಕಂದಾಯ ಕೊಡಬೇಕಾಗಿರಲಿಲ್ಲ. ಆ ಮೇಲೆ ಇನ್ನೂ ಒಂದು ವರ್ಷ ಹಿಂದಿನ ರಿಕಾರ್ಡನ್ನು ನೋಡಿದರು, ಅದರಲ್ಲೂ ಅದೇ! ಮತ್ತೊಂದು ವರ್ಷದ್ದು ನೋಡಿದರು, ಅದರಲ್ಲೂ ಅದೇ! ಅಮಲ್ದಾರರಿಗೆ ಬಲು ಆಶ್ಚರ್ಯವಾಯಿತು. 'ಇದಕ್ಕೇನು ಹೇಳ್ತೀರ್ರಿ?' ಅಂತ ಪಾದ್ರಿಯನ್ನೊಂದು ಸಾರಿ ನೋಡಿ ನಕ್ಕರು. ಪಾದ್ರಿ ಮುಖ ಗಂಟುಹಾಕಿಕೊಂಡು ಸುಮ್ಮನೆ ಉಸಿರೆತ್ತದೆ ಕುಳಿತಿದ್ದ. ಅಮಲ್ದಾರರು ತಮ್ಮ ಮುಂದಿದ್ದ ರಿಕಾರ್ಡುಗಳ ಕಂತೆಯನ್ನೆಲ್ಲ ಪಕ್ಕಕ್ಕೆ ತಳ್ಳಿ ಅದಕ್ಕೂ ಹಿಂದಿನ ವರ್ಷದ ರಿಕಾರ್ಡನ್ನು ಎಳೆದುಕೊಂಡು ನೋಡಿದರು. ಬೇರೆ ಬೇರೆ ತರದ ಅಕ್ಷರಗಳು. ಆದರೂ ಬಿಡಿಬಿಡಿಯಾಗೇನೋ ಇತ್ತು. ಆ ಜಮೀನಿನ ದಾಖಲೆಯನ್ನೆಲ್ಲ ಮೊದಲಿಂದ ಕಡೆಯವರೆಗೆ ಓದಿ ನೋಡಿದರು. ಎಲ್ಲವೂ ಮೊದಲ ಹಾಗೇ ಇತ್ತು. ಆದರೆ ಒಂದೇ ಒಂದು ವ್ಯತ್ಯಾಸ. 'ಬಸಪ್ಪ' ಎನ್ನುವುದರ ಬದಲು 'ಬಶಪ್ಪ' ಎಂದಿತ್ತು. ಅದನ್ನು ಓದಿದ ಕೂಡಲೆ ಅಮಲ್ದಾರರಿಗೆ ನಗು ತಡೆಯುವುದಕ್ಕಾಗಲಿಲ್ಲ. 'ಯಾರ್ರಿ ಇದನ್ನು ಬರೆದದ್ದು?' ಅಂತ ಹಿಂದೆ ನಿಂತಿದ್ದ ಹೆಡ್ ಗುಮಾಸ್ತೆಯನ್ನು ಕೇಳಿದರು. ಆತ ಒಳಕ್ಕೆ ಓಡಿಹೋಗಿ ವರ್ಗಾವರ್ಗಿ ಸಮಾಚಾರವಿದ್ದ ಫೈಲೊಂದನ್ನ ತಂದು ಬಿಚ್ಚಿನೋಡಿ 'ಶಿವಸ್ವಾಮಿ ಅನ್ನೋವ್ನು ಮಹಾಸ್ವಾಮಿ' ಅಂದನು. ಅಮಲ್ದಾರರು ಮೊದಲೇ ಹಾಸ್ಯಪ್ರಿಯರು. ಅವನ ಹೆಸರು ಕೇಳಿದ್ದೇ ತಡ ಗೊಳ್ಳೆಂದು ನಗುತ್ತಾ 'ಓಹೋ, ಶಿವಶಾಮೀನೋ! ಅದಕ್ಕೆ ಬಶಪ್ನವರ ಮನೇಲಿ ಬಿಶಿಬಿಶಿ ಗಶಗಶೆ ಪಾಯಿಶಾಂತ ಬರೆದಿದಾನೆ!' ಅಂದರು. ಶಿವಸ್ವಾಮಿ ನಮ್ಮ ವೆಂಕಟಸುಬ್ಬಯ್ಯನಿಗಿಂತ ಮುಂಚೆ ಇದ್ದವನು. ಕೆಲಸದಲ್ಲಿ ಗಟ್ಟಿಗ. ಆದರೆ ಏನೋ ಅವನ ಪ್ರಾರಬ್ಧಕರ್ಮ, ಮಾತಾಡುವಾಗ ಅವನಿಗೆ ಶ ಷ ಸ ಗಳಿಗೆ ವ್ಯತ್ಯಾಸವೇ ತಿಳೀತಿರಲಿಲ್ಲ. ಅವನೂ ಆ ಆಫೀಸಿನಲ್ಲಿ ಮೂರು ವರ್ಷ ಇದ್ದ. ಸರಿ, ಅವನ ಕೈಬರಹದ ರಿಕಾರ್ಡೆಲ್ಲ ಒಂದೇ ರೀತಿ ಇತ್ತು.

"ಅಷ್ಟುಹೊತ್ತಿಗಾಗಲೇ ಎಂಟು ಹತ್ತು ವರ್ಷದ ರಿಕಾರ್ಡುಗಳನ್ನು ನೋಡಿ

ದಂತಾಯಿತು. ಅಮಲ್ದಾರರಿಗೂ ಸಾಕಾಗಿತ್ತು. ಇನ್ನೆಷ್ಟು ಬೇಕು ರುಜುವಾತಿಗೆ? ಅನ್ನ ಆಗಿದೆಯೋ ಇಲ್ಲವೋ ನೋಡೋದಕ್ಕೆ ಎಲ್ಲಾ ಅಗುಳನ್ನೂ ಹಿಚಿಕಿ ನೋಡ ಬೇಕೆ? ಫಾದರ್ ರಿಚರ್ಡನಿಗೆ ತುಂಬಾ ಬೇಸರವಾಯಿತು. ಅವನಿಗೆ ತನ್ನದೇ ತಪ್ಪಿರ ಬಹುದು ಅನ್ನಿಸಿತು. ಜೊತೆಗೆ ಗಾಬರಿಯೂ ಆಯಿತು. ಅಷ್ಟು ಜನಗಳ ಎದುರಿಗೆ ತನಗೆ ಅವಮಾನವಾಗುತ್ತದಲ್ಲಾ ಎಂದು ವ್ಯಥೆಯೂ ಆಯಿತು. ಯೇಸುವನ್ನ ಒಂದೇ ಮನಸಿನಿಂದ ಧ್ಯಾನಿಸುತ್ತಿದ್ದ. ಅಮಲ್ದಾರರು ಕಡೆಯದಾಗಿ ಇನ್ನು ಒಂದೇ ಒಂದು ವರ್ಷದ ರಿಕಾರ್ಡನ್ನು ನೋಡುವುದಾಗಿ ನಿರ್ಧರಿಸಿ, ಮಧ್ಯೆ ಮೂರು ವರ್ಷಗಳನ್ನು ಬಿಟ್ಟು ಹಿಂದಿನದನ್ನು ತರಿಸಿದರು. ಹಳೇ ಕಾಲದ ಬರವಣಿಗೆ. ರಾಗಿಶಾಯಲ್ಲಿ ಬರೆದ ಮೋಡಿ ಅಕ್ಷರಗಳು. ಎಲ್ಲ ಒಂದಕ್ಕೊಂದು ಹೆಣೆದುಕೊಂಡು ಕಲಸುಮೇಲೋಗರ ವಾಗಿತ್ತು. ಅಲ್ಲಲ್ಲಿ ಶಾಯಿ ಬಿದ್ದು ಚಿತ್ತೂ ಆಗಿತ್ತು. ಅಮಲ್ದಾರರು ಸ್ವಲ್ಪ ಪ್ರಯಾಸದಿಂದಲೇ ಓದಿದರು. ಒಕ್ಕಣೆಯೆಲ್ಲಾ ಹಾಗೇ ಇತ್ತು. ಆದರೆ ಹೆಸರು ಮಾತ್ರ ಸ್ಪಷ್ಟವಾಗಿರಲಿಲ್ಲ. ನೋಡಿದರೆ 'ಬಶಪ್ಪ' ಎಂದು ಬರೆದಿದ್ದಂತೆ ತೋರಿತು. ಅದನ್ನು ಹೆಡ್ ಗುಮಾಸ್ತರ ಕೈಗೆ ಕೊಟ್ಟು, 'ಇದನ್ನು ಸರಿಯಾಗಿ ಓದಿ ನೋಡ್ರಿ' ಅಂದರು. ಅವರು ಕಣ್ಣಿಗೆ ಕನ್ನಡಕ ಸಿಕ್ಕಿಸಿಕೊಂಡು, ಬಾಗಿಲ ಹತ್ತಿರ ಹೋಗಿ, ಹಾಳೆಯನ್ನ ಕೆಳಗೆ ಮೇಲೆ ಮಾಡಿ ಚೆನ್ನಾಗಿ ಪರಿಶೀಲಿಸಿ, 'ಇದು ಬಿಷಪ್ಪ ಎಂದಾ ಗುತ್ತೆ ಮಹಾಸ್ವಾಮಿ' ಅಂದರು. ಫಾದರ್ ರಿಚರ್ಡ್ ಇದ್ದಕ್ಕಿದ್ದಂತೆ ಒಂದು ಹಾರು ಹಾರಿ, 'ಸ್ವಾಮಿ, ನೋಡಿದಿರಾ ಬಿಷಪ್, ಬಿಷಪ್!' ಅಂದ... ಬಿಷಪ್ (Bishop) ಅಂದ್ರೆ ಗೊತ್ತಿಲ್ವೇ, ಕ್ರೈಸ್ತಗುರು ಅಂತ! ಆಗ ಹೊಳೆಯಿತು ಎಲ್ಲರಿಗೂ, ಬಿಷಪ್ಪನ ಹೆಸರಿನಲ್ಲೇ ಜಮೀನಿದ್ದದ್ದು ಅಂತ. ಆ ಜಮೀನು ಚರ್ಚಿಗೆ ಸೇರಿದ್ದುದರಿಂದಲೇ ಬ್ರಿಟಿಷ್ ಸರ್ಕಾರದವರು ಅದಕ್ಕೆ ಕಂದಾಯದ ರಿಯಾಯ್ತಿ ಕೊಟ್ಟದ್ದು!

"ಸರಿ, ಅಮಲ್ದಾರರು ಫಾದರ್ ರಿಚರ್ಡನ ಕ್ಷಮಾಪಣೆ ಕೇಳಿಕೊಂಡು, ಆ ಜಮೀನು ಚರ್ಚಿಗೇ ಸೇರಿದ್ದೆಂದು ನಿರ್ಧರಿಸಿದರು. ಆ ಮೇಲೆ ತಮ್ಮ ಗುಮಾಸ್ತರುಗಳ ಕಡೆ ತಿರುಗಿ ನಗುನಗುತ್ತಾ 'ನೋಡಿದಿರೇನ್ರಿ! ಒಂದು ದೊಡ್ಡ ಯಂತ್ರದಲ್ಲಿ ಒಂದು ಸಣ್ಣ ತಿರುಪು ಕಳಚಿಕೊಂಡರೂ ಹೇಗೆ ಯಂತ್ರವೇ ಕೆಟ್ಟುಹೋಗುತ್ತೋ ಹಾಗೆ ಒಬ್ಬ ಗುಮಾಸ್ತೆ ಒಂದು ಅಕ್ಷರ ತಪ್ಪುಮಾಡಿದ್ದಕ್ಕೆ ಎಷ್ಟು ಅನಾಹುತ ಆಯ್ತು! ಇನ್ಮೇಲಾದರೂ ಎಚ್ಚರಿಕೆಯಿಂದಿರಿ' ಅಂದರು. ಎಲ್ಲರೂ ಹಿಹಿಹಿ ಅಂತ ನಗುತ್ತಿದ್ದರು. ಆ ಮಿಲ್ ಮಾಲಿಕನೊಬ್ಬ ಪೆಚ್ಚುಮುಖ ಹಾಕಿಕೊಂಡು ಮನೆಗೆ ಹೋದ!"

ಕತೆ ಮುಗಿಯಿತು. ಶಾನುಭೋಗರು ಮೇಲೆದ್ದು "ಬಂದೆ ಬಂದೆ, ಕೈ ಕಾಲು ತೊಳಕೊಂಡು ಬರ್ತೀನಿ" ಎನ್ನುತ್ತಾ ಮನೆಯೊಳಕ್ಕೆ ಹೊರಟರು.

ನ. ಸುಬ್ರಹ್ಮಣ್ಯಂ

ತಂಬಾಕು

ವಿಧಿಯ ಆಟದ ಗೊಂಬೆಯಾಗಿ ಸಂಸಾರಸಾಗರದಲ್ಲಿ ಮುಳುಗಿ ಸರ್ವದಾ ದುಃಖಪೀಡಿತನಾಗಿ ರೋದಿಸುವ ಮಾನವನಿಗೆ ಜೀವನ ಸಹ್ಯವಾಗಿರುವುದು ಸಹಸ್ರ ಸಂಖ್ಯೆ ಸಂತೋಷಗಳ ದೆಸೆಯಿಂದ. ಇವು ಇಷ್ಟೇ ಬಗೆಯುವು. ಇವುಗಳ ಗುಣಾವ ಗುಣಗಳು ಹೀಗೇ ಎಂದು ಸಿದ್ಧಾಂತಮಾಡುವ ಪ್ರಯತ್ನ ತಿಳಿಗೇಡಿಯ ಹಾಸ್ಯಾಸ್ಪದವಾದ ಸಾಹಸವಾಗುವುದು. ಆದರೂ ಇವನ್ನು ಬಹು ಸ್ಥೂಲವಾಗಿ ಎರಡು ಬಗೆಯಲ್ಲಿ ವಿಂಗಡಿಸಿದರೆ ಒಪ್ಪದಿರುವವರು ಯಾರೂ ಇರಲಾರರು. ನನ್ನ ಸಂತೋಷ ಇನ್ನೊಬ್ಬನಿಗೇ ಆಗಲಿ ನನಗೇ ಆಗಲಿ ಅಪಾಯವನ್ನುಂಟುಮಾಡಬಾರದು. ಇವು ಶುದ್ಧವಾದ ಸಂತೋಷಗಳು. ಇನ್ನೊಂದು ಬಗೆಯವು ಇವಕ್ಕೆ ಶುದ್ಧವಿರುದ್ಧ. ನಮಗೂ ಇತರರಿಗೂ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ, ಸದ್ಯದಲ್ಲಾಗಲಿ ಸ್ವಲ್ಪಕಾಲದ ಮೇಲಾಗಲಿ ನೋವು ಸಂಕಟಗಳನ್ನುಂಟುಮಾಡತಕ್ಕವು ಒಂದು ಮಾತನ್ನು ಮಾತ್ರ ಯಾವಾಗಲೂ ಜ್ಞಾಪಕದಲ್ಲಿಡುವುದು ಒಳ್ಳೆಯದು; ಶುದ್ಧ ಸಂತೋಷವಾದರೂ ಸರಿಯೆ ಮಿತವಾಗಿರಬೇಕು. ಮಾನವನ ಕಾರ್ಯಕೋಟಿಯನ್ನು ವಿಮರ್ಶಿಸುತ್ತಾ ಜ್ಹಾನ್ ಗ್ಯಾಲ್‌ವರ್ದಿಯವರು ಹೀಗೆ ಹೇಳುವರು: "ಮಾನವನ ಕಾರ್ಯಕಲಾಪಗಳಲ್ಲಿ ಶುದ್ಧವಾಗಿ ಒಳ್ಳೆದೆನಿಸಿಕೊಳ್ಳುವ ಅಲ್ಪಸಂಖ್ಯೆಯಲ್ಲಿರುವುವು ಇವೆ:—ಊಟ, ಪಾನ, ನಿದ್ದೆ, ಪ್ರೇಮ—ಮಿತವಾಗಿ; ಶುದ್ಧವಾದ ಗಾಳಿಯ ಸೇವನೆ, ಅನೇಕ ವಿಧವಾದ ವ್ಯಾಯಾಮ, ಸ್ವಾರಸ್ಯವಾದ ಕಲಾಸೃಷ್ಟಿ—ಮಿತವಾಗಿ; ಕಲೆಗಳನ್ನು, ಪ್ರಕೃತಿಯನ್ನು ತಿಳಿಯುವುದು, ಧ್ಯಾನಿಸುವುದು—ಮಿತವಾಗಿ; ನಿಮ್ಮನ್ನು ಬಿಟ್ಟು, ಇತರರ ವಿಚಾರವಾಗಿ ಯೋಚಿಸುವುದು—ಮಿತವಾಗಿ; ದಯಾಮಯವಾದ ಕಾರ್ಯಗಳನ್ನೆಸಗುವುದು, ದಯಾಮಯವಾದ ಯೋಚನೆಯನ್ನು ಯೋಚಿಸುವುದು." ಈ ಮಿತದ ವಿವೇಕ ಸಹಸ್ರಾರು ವರ್ಷಗಳ ಹಿಂದಿನ ಜನರಿಗೂ ತಿಳಿದಿದ್ದಿತು. ಆದುದರಿಂದಲೇ ಇರಬಹುದು ಎನ್ನಿಸುತ್ತೆ ಪ್ರಾಚೀನ ಜನಾಂಗಗಳು ಸಂತೋಷ ಜನಕವಸ್ತುಗಳನ್ನು ದೇವತೆಗಳೆಂದು ಭಾವಿಸತೊಡಗಿದುದು. ನಮ್ಮಲ್ಲಿ 'ಸೋಮ' ಒಂದು ದೇವತೆ; ಮದಿರೆ, ಒಂದು ದೇವತೆ; ಗ್ರೀಕರಲ್ಲಿ ಬ್ಯಾಕಸ್ ಇದೇ ಜಾತಿಯ ದೇವತೆ. ಇವರನ್ನು ಮಿತವಾಗಿ ಆರಾಧಿಸಿದವರು ಯಾರು ಅಪಾಯಕ್ಕೆ ಗುರಿಯಾಗಿಲ್ಲ. ಆದರೂ 'ಮಿತಿ' ಯನ್ನರಿಯದ ಜನಕ್ಕೆ ಈ ದೇವತೆಗಳನ್ನೂ ಇವರಿಗೆ ಪ್ರಿಯವಾದ ವಸ್ತುಗಳನ್ನೂ ಕಂಡರೆ ಒಂದು ಭಯವುಂಟು. ತಂಬಾಕಿಗೆ

ದೇವತೆ ಇಲ್ಲ. ತಂಬಾಕಿನ ಸಂತೋಷವನ್ನರಿಯುವ ವೇಳೆಗೆ ದೇವತೆಗಳನ್ನು ಸೃಷ್ಟಿಸುವ ಧೈರ್ಯವನ್ನೂ ಭಾವನಾ ಶಕ್ತಿಯನ್ನೂ ಮಾನವ ಜನಾಂಗ ಕಳೆದುಕೊಂಡಿತ್ತೋ ಏನೋ ಅನ್ನಿಸುತ್ತೆ. ತಂಬಾಕಿಗೊಂದು ದೇವತೆ ಇಲ್ಲದಿದ್ದರೂ ಸರಿಯೆ ಅದರ ಸಮಕ್ಕೆ ತೂಗುವ ಸಂತೋಷ ಜನಕವಾದ ವಸ್ತುಪ್ರಪಂಚದಲ್ಲಿ ಯಾವುದೂ ಇಲ್ಲವೆಂದೇ ನನ್ನ ಸಿದ್ಧಾಂತ. ಕಾಫಿ, ಟೀ ಮುಂತಾದ ಅನೇಕ ಬಗೆಯ ಉಷ್ಣ ಅಥವಾ ಶೀತಳಪಾನೀಯಗಳ ಪ್ರಿಯರೂ ಕಾವ್ಯಕಾದಂಬರೀ ಪ್ರಪಂಚಗಳಲ್ಲಿ ಮಗ್ನರಾಗುವವರೂ ನನ್ನ ಸಿದ್ಧಾಂತವನ್ನು ವಿರೋಧಿಸುವ ಯತ್ನ ನಿಷ್ಫಲವೆಂದು ನಾನು ಮೊದಲಲ್ಲಿಯೇ ಎಚ್ಚರಿಕೆ ಕೊಡುತ್ತೇನೆ. ಮರಳುಕಾಡಿನ ಮಧ್ಯೆ ಪ್ರಯಾಣಮಾಡುವಾಗ ಓಯಸಿಸ್ಸೊಂದು ಕಂಡಕೂಡಲೆ ಮರದ ನೆರಳಲ್ಲಿ ಕುಳಿತಾಗ ಪಣ್ಯಾರ ಪಾನೀಯಗಳನ್ನೊದಗಿಸುವವರು ಯಾರು? ಅಷ್ಟು ದೂರ ಏಕೆ ಹೋಗಬೇಕು! ಬೆಳಿಗ್ಗೆ ಎಂಟು ಗಂಟೆಯ ಸಮಯದಲ್ಲಿ ಅಥವಾ ಸಾಯಂಕಾಲ ಆರು ಗಂಟೆಯಲ್ಲಿ ಲಾಲ್‌ಬಾಗಿನ ರಸ್ತೆಗಳನ್ನು ಸುತ್ತಿ ಅದರ ಪೂರ್ವಕ್ಕಿರುವ ಬಂಡೆಯ ಮೇಲೆ ಹತ್ತಿ ಕೂತಿರುವಾಗ, ನಡಗೆಯಿಂದ ಮೈಬೆಚ್ಚಗಾಗಿ, ಕಣ್ಣಿನ ನೋಟಗಳಿಂದ ಸುಖ ವಾತಾವರಣದಿಂದ ಮನಸ್ಸಿನಲ್ಲಿ ಮೂಡಿದ ಸಂತೋಷ ತನುಮನಗಳನ್ನು ತುಂಬುತ್ತಿರುವಾಗ ಸಮಾಧಿಸ್ಥರಾಗಲು ಒಂದು ಉಪಕರಣ ಬೇಕಾಗಿರುವಾಗ ಪಾನೀಯವೆಲ್ಲಿಂದ ಬರಬೇಕು? ಆ ಕ್ಷಣ ಮಿಂಚಿಹೋದರೆ ಸಮಾಧಿಗೆ ಸಮಯವೂ ಮಿಂಚಿ ಹೋಗುವುದು. ಥರ್ಮೋಫ್ಲಾಸ್ಕಿನಲ್ಲಿ ಕಾಫಿ, ಟೀ ತೆಗೆದುಕೊಂಡು ಹೋಗುವುದು ಕೆಲಸಮಾಡಲು ಶಕ್ತಿಬೇಡುವವರ ಉಪಾಯ, ಸಂತೋಷ ಸವಿಯುವವರಿಗೆ ಅದು ಒಪ್ಪುವುದಿಲ್ಲ. ನಾಲ್ಕಾರು ಗಂಟೆಗಳ ಮುನ್ನ ಕೂಡಿ, ಬೆಳಕುಗಾಳಿಗಳಿಲ್ಲದೆ ಬಂಧಿತವಾಗಿರುವ ಕಾಫಿಯಾಗಲಿ ಟೀಯಾಗಲಿ ಸಂತೋಷವನ್ನು ಹೇಗೆ ಕೊಟ್ಟೀತು! ಹೊಸ ಕಾಫಿಯನ್ನು ಬಟ್ಟಲಲ್ಲಿ ನೀಡುವಾಗ ದೂರದಿಂದಲೇ ಬರುವ ಸುವಾಸನೆ, ಬಟ್ಟಲಿಗೆ ಕಿರೀಟದಂತೆ ಬೆಳಗುವ ನೊರೆ, ನಾಲಿಗೆ ಲೊಟ್ಟೆ ಹಾಕುವಂತೆ ಮಾಡುವ ಆ ಫ್ಲೇವರ್ ಬಂಧನದಲ್ಲಿ ಸೊರಗಿ ಬೆಮರಿರುವ ಕಾಫಿಗೆ ಎಲ್ಲಿಂದ ಬರಬಲ್ಲುದು! ಮೂರು ನಾಲ್ಕೇ ನಿಮಿಷ ಹಳೆಯದಾದ ಟೀಯನ್ನು ನಾ ಮುಟ್ಟಲಾರೆ. ಜನ ಅಂಥ ಟೀಯನ್ನು ಕುಡಿಯುವರೆಂದೂ ನಂಬಲಾರೆ. ಟೀ ದೇವತೆಯ ಪರವಾಗಿ ನಿಮ್ಮನ್ನು ಬೇಡುತ್ತೇನೆ. ಟೀಯನ್ನು ಹಲವು ನಿಮಿಷಗಳ ಕಾಲವಿಡುವ ಅಭ್ಯಾಸವಿರುವವರು, ಬಹು ಕೋಮಲಳಾದ, ಬಹು ಕ್ಷಣಿಕವಾದ ಮೋಹಕಶಕ್ತಿಯುಳ್ಳ, ಜನ್ಮವೆತ್ತಿದ ಕೆಲವು ಕ್ಷಣಗಳಲ್ಲಿಯೇ ಉತ್ತಮ ಗುಣಗಳನ್ನು ಕಳೆದುಕೊಳ್ಳುವ ಕ್ರೂರವಿಧಿಗೆ ವಶಳಾದ ಸೂಕ್ಷ್ಮಸ್ವಭಾವದ ದೇವತೆಯನ್ನು, ಕೆಲಕಾಲವಿಟ್ಟು ಹಿಂಸಿಸುವುದು

ತರವಲ್ಲ. ನೀವು ಟೀ ಪ್ರಿಯರಾದರೆ, ಟೀ ಸುಖವನ್ನು ಸಂಪೂರ್ಣವಾಗಿ ಶುದ್ಧ ವಾಗಿ ಅನುಭವಿಸಬೇಕಾದರೆ ಟೀ ಸ್ವಭಾವವನ್ನರಿತು ಕೆಲಸಮಾಡುವುದು ಲೇಸು. "ನಹಿ ಜ್ಞಾನೇನ ಸದೃಶಂ". ಕಾವ್ಯ ಕಾದಂಬರಿ ವಾಚನದಿಂದ ಹರಿಯುವ ಸಂತೋಷಲಹರಿಯಲ್ಲಿ ಮಿಂದು ಈಜುವ ವಾಚಕರನ್ನೇ ಕೇಳುತ್ತೇನೆ. ರಾತ್ರಿ ಹನ್ನೆರಡೂವರೆ ಗಂಟೆಯಾಗಿದೆ. ನೀವು ಕಾವ್ಯ ಕಾದಂಬರೀ ನಿರ್ಮಿತಲೋಕದಲ್ಲಿ ಅಲೆಯುತ್ತಿರುವಿರಿ. ನಿದ್ದೆ ಮಾಯವಾಗಿದೆ, ಅನತಿದೂರದಲ್ಲಿಯೇ ದೀಪದ ನೆರಳಿನಲ್ಲಿ ಶಾಂತ ಮುಖಮುದ್ರೆಯಿಂದ ನಿದ್ರಿಸುತ್ತಿರುವ ಪ್ರಿಯತಮೆಯ ಅರಿವೂ ಅಳಿದು ಹೋಗಿದೆ. ಭಾವನಾಪ್ರಪಂಚದಿಂದ ಇಳಿದುಬರುವ ಯೋಚನೆಯೇ ಇಲ್ಲ. ಆ ಲೋಕದಲ್ಲಿಯೇ ಮುನ್ನುಗ್ಗುವ ಹುಮ್ಮಸ್ಸಿದೆ. ಅದನ್ನು ಸ್ಥಿರಮಾಡುವುದಕ್ಕೆ ಒಂದು ಉಪಕರಣಬೇಕು. ಆಕ್ಷಣವೇ ಬೇಕು. ಅರೆನಿಮಿಷ ಕಾಯ್ದರೆ ಅನಾಹುತವಾಗುವುದು ಖಂಡಿತ. ಆಗ ನಿಮ್ಮ ಸಹಾಯಕ್ಕೆ ಬರಬಲ್ಲ ವಸ್ತು ಒಂದೇ—ತಂಬಾಕು.

ಶುದ್ಧವಾಗಿ, ಕೇವಲವಾಗಿ, ಪೂರ್ಣವಾಗಿ ಸಂತೋಷವನ್ನು ಮಾತ್ರವೇ ಕೊಡುವ ವಸ್ತು, ತಂಬಾಕು. ಅದರಿಂದ ಈ ಪ್ರಯೋಜನ ಆ ಉಪಯೋಗ ಉಂಟೆಂದು ಹೇಳಿದರೆ ಅದು ನಂಬಿಕೆಗೆ ಅರ್ಹವಾದ ಮಾತಲ್ಲ. ಸಂತೋಷಕೊಡುವ ಇತರ ಪಾನೀಯಪಣ್ಯಾರಗಳಂತೆ ತಂಬಾಕು ಸೇವನೆಯಿಂದ ಹೊಟ್ಟೆತುಂಬುವುದಿಲ್ಲ. ಹಸಿವಾರುವುದಿಲ್ಲ. ತಂಬಾಕಿನ ಒಂದು ರೂಪನ್ನು ಕೆಲವರು 'ಜ್ಞಾನಚೂರ್ಣ' ವೆಂದು ಕರೆಯುವುದುಂಟು. ಇದು ವ್ಯಂಗ್ಯವಾಗಿ ವಿಡಂಬನಕ್ಕಾಗಿ ಹೇಳುವ ಮಾತು. ಆದರೂ ಈ ಮಾತನ್ನು ವಾಸ್ತವವೆಂದು ತಿಳಿದು ಭ್ರಾಂತರಾಗಿ ಒಂದು ಜೀವಮಾನವೆಲ್ಲ ಚೂರ್ಣಸೇವನೆ ಮಾಡಿದ ಮೇಲೂ ಅಜ್ಞಾನಿಗಳಾಗಿಯೇ ಪರ ಲೋಕವನ್ನೈದಿದ ಹಲವರನ್ನು ನಾಬಲ್ಲೆ. ವಸ್ತುಗಳ ನಿಜರೂಪವನ್ನು ಸ್ವಭಾವ ವನ್ನು ಗುಣಶೀಲಗಳನ್ನರಿಯದೆ ಬಹುವಿಧ ಭ್ರಾಂತಿಗಳಿಗೊಳಗಾಗಿ ಮೋಸಹೋಗುವ ಜನ ಅಲ್ಪಸಂಖ್ಯಾತರಲ್ಲ. ನಮ್ಮ ಸ್ನೇಹಿತರ ವಿಚಾರವಾಗಿಯೂ ನಾವು ಮಾಡು ವುದು ಇದೇ ತಪ್ಪನ್ನು. ಅವರಲ್ಲಿಲ್ಲದ ಗುಣಗಳನ್ನು ದುರ್ಗುಣಗಳನ್ನು ಕಂಡು ಅಥವಾ ಆರೋಪಮಾಡಿ ಆಧಾರವಿಲ್ಲದ ನಿರೀಕ್ಷಣೆಗಳಿಗೆ ಸ್ಥಳಕೊಟ್ಟು ಕಾಲಕ್ರಮೇಣ ಸತ್ಯಾಂಶ ಹೊರಬಿದ್ದಾಗ ದುಃಖಪೀಡಿತರಾಗುತ್ತೇವೆ. ನಗಡಿಯಾದಾಗ ನಶ್ಯದ ಸೇವನೆ ಮಾಡಿದರೆ ಒಳ್ಳೆಯದೆಂದು ಯಾರೂ ನಂಬಬಾರದು. ನಶ್ಯ ಹೊಟ್ಟೆಯೊಳಕ್ಕೆ ಹೋಗಿ ಅಜೀರ್ಣವನ್ನು ಹೋಗಲಾಡಿಸುವುದಿಲ್ಲ; ಜಠರಾಗ್ನಿಯನ್ನು ಉದ್ದೀಪ್ತ ವಾಗಿ ಮಾಡುವುದಿಲ್ಲ. ನಶ್ಯ ಮೂಗಿನ ತುದಿಯಲ್ಲಿಯೇ ನಿಂತು ಕೆಲಸಮಾಡುತ್ತೆ. ಇದು ಬಹು ಸೂಕ್ಷ್ಮ ಸ್ವಭಾವದ ವಸ್ತು. ಇದರ ಕಾರ್ಯವೂ ಬಹು ಸೂಕ್ಷ್ಮ

ವಾದ್ದು. ಪತ್ತೆದಾರರಲ್ಲಿ ಪರಮಶ್ರೇಷ್ಠನಾದ ಷೆರ್‌ಲಾಕ್ ಹೋಮ್ಸ್ ತಂಬಾಕನ್ನು ಒಂದು ಬಗೆಯಲ್ಲಿ ಉಪಯೋಗಿಸುತ್ತಿದ್ದನೆಂದು ಅವನ ಮಿತ್ರ ಡಾಕ್ಟರ್ ವಾಟ್ಸನ್ ಹೇಳುವನು. ಬಹು ಕಷ್ಟವಾದ ಸಮಸ್ಯೆ ಒದಗಿದಾಗ ಬುದ್ಧಿಯನ್ನು ಚುರುಕುಮಾಡಿ ಸಮಸ್ಯೆಯನ್ನು ಬಿಡಿಸಲು ಈ ಕ್ರಮವನ್ನು ಅನುಸರಿಸುತ್ತಿದ್ದನಂತೆ. ಒಂದು ಸಣ್ಣ ಕೋಣೆಯ ಎಲ್ಲ ಬಾಗಿಲುಗಳನ್ನೂ ಕಿಟಕಿ ಗವಾಕ್ಷಗಳನ್ನೂ ಮುಚ್ಚಿ ತಂಬಾಕನ್ನು ಯಥೇಚ್ಛವಾಗಿ ಬೆಂಕಿಯಲ್ಲಿ ಹಾಕಿ ಕೋಣೆಯತುಂಬ ಹೊಗೆ ತುಂಬಿದಾಗ ಅಲ್ಲಿ ಸ್ವಲ್ಪಕಾಲವಿದ್ದು ಒಗಟೆಯನ್ನೊಡೆದು ಹೊರಕ್ಕೆ ಬರುತ್ತಿದ್ದನಂತೆ. ಕತೆಯಲ್ಲಿ ನಂಬುವ ಮಾತೇ ಹೊರತು ವಾಸ್ತವವೆಂದು ನಂಬುವ ಮಾತಲ್ಲ. ಇದೇ ರೀತಿಯಲ್ಲಿ ತಂಬಾಕಿನ ಸೇವನೆಯಿಂದ ಅಪಾಯ ಸಂಭವಿಸುತ್ತೆ ಎನ್ನುವವರ ಮಾತನ್ನೂ ದೂರ ತಳ್ಳಬೇಕು. ನೀವು ಸೇದುವ ನೆಶ್ಯದ ಸ್ವಲ್ಪಭಾಗ ತಲೆಯೊಳಕ್ಕೆ ಹೋಗಿ ಸೇರುತ್ತೆ. ಎಪ್ಪತ್ತನೆಯ ವಯಸ್ಸಿನಲ್ಲಿ ನೀವು ಸತ್ತಾಗ ನಿಮ್ಮ ತಲೆಯೊಳಗೆ ದೊಡ್ಡ ನಿಂಬೇ ಕಾಯಿಗಾತ್ರದ ನೆಶ್ಯದ ಉಂಡೆ ಇರುತ್ತೆ ಎಂದು ಹೇಳಿದರೆ ಆ ಮಾತನ್ನು ನೀವು ನಂಬುವಿರೇನು? ಅಥವಾ ಸಿಗರೆಟ್ಟಿನ ಸೇವನೆಯಿಂದ ಕೋಮಲವೂ ಬಹು ಸೂಕ್ಷ್ಮವೂ ಆದ ರಕ್ತನಾಳಗಳಿಂದ ನೇಯಲ್ಪಟ್ಟ ಶ್ವಾಸಕೋಶ ಒಣಗಿಹೋಗುವುದು, ತಂಬಾಕಿನ ಹೊಗೆ ರಕ್ತದಲ್ಲಿ ಕರಗಿ ರಕ್ತವನ್ನು ಕೆಡಿಸಿ ನಿಮ್ಮನ್ನು ಕ್ರಮೇಣ ಕೊಲ್ಲುವುದು ಎಂದರೆ ನಂಬುವಿರೇನು? ಸಂತೋಷವನ್ನು ಕೊಡುವುದಕ್ಕೆ ಮಾತ್ರವೇ ಸೃಷ್ಟಿಸಲ್ಪಟ್ಟಿರುವ ವಸ್ತು ಕೆಡಕನ್ನು ಹೇಗೆ ಮಾಡೀತು!

ತಂಬಾಕನ್ನು ದೇವತೆಯ ಮಟ್ಟಕ್ಕೇರಿಸಿ ಆರಾಧಿಸುವ ಭಕ್ತರನ್ನು ಕಾಣದಿದ್ದರೂ ತಂಬಾಕನ್ನು ಪ್ರೇಯಸಿಯಂತೆ ಪ್ರೀತಿಸಿ ಆ ಸಂತೋಷಸಾಮ್ರಾಜ್ಯವನ್ನು ಚಿತ್ರಿಸಿರುವ ಲೇಡಿನಿಕೊಟೀನ್ ಎನ್ನುವ ಪುಸ್ತಕವನ್ನೋದಿದ್ದೇನೆ. ಆ ಸಂತೋಷ ಸಾಮ್ರಾಜ್ಯವನ್ನು ಪ್ರವೇಶಿಸಿ ಅಲ್ಲಿಯ ಸಹಸ್ರಾರು ಸಂತೋಷಗಳನ್ನು ಸವಿಯುವ ರಹಸ್ಯವನ್ನರಿತಿದ್ದೇನೆ. ಯಾವ ಸಂತೋಷಾನುಭವಕ್ಕೂ ಒಂದು ಮೂಲಮಂತ್ರ ಅವಶ್ಯಕ. ಮನಸ್ಸು ತೆರೆದಿರಬೇಕು; ಹೃದಯ ವಿಶಾಲವಾಗಿರಬೇಕು; ಯಾವ ಬಗೆಯ ಸಂಕುಚಿತ ಮನೋಭಾವವೂ ಇರಬಾರದು. ಯಾವ ವಸ್ತುವಿನಿಂದ ಸಂತೋಷವನ್ನು ನಿರೀಕ್ಷಿಸುತ್ತೇವೆಯೋ ಆ ವಸ್ತುವಿನ ಗುಣಗಳಲ್ಲಿ ಯಾವೊಂದು ಸಂಶಯವೂ ಇರಬಾರದು. ಪ್ರಿಯನು ಪ್ರೇಯಸಿಯನ್ನು ಆಲಂಗಿಸುವಂತೆ ವಸ್ತುವನ್ನು ಪ್ರೇಮದಿಂದ ನಗೆಯಿಂದ ಸ್ವೀಕರಿಸಬೇಕು. ಇದು ಏಕಾಂತದಲ್ಲಿ ಸವಿಯುವ ಸಂತೋಷ. ನೀವು ತಂಬಾಕು ಇಬ್ಬರ ಹೊರತು ಇನ್ನಾರೂ ಇರಕೂಡದು. ಪೈಪ್, ಸಿಗಾರ್, ಸಿಗರೇಟ್ ಇವು ಮೂರೂ ಒಂದು ಗುಂಪಿಗೆ ಸೇರಿದುವು.

ಮೊದಲನೆಯದೇ ಉತ್ತಮ, ಎರಡನೆಯದು ಮಧ್ಯಮ, ಮೂರನೆಯದು ಅಧಮ ಎಂದು ಯಾರೂ ಭಾವಿಸಬಾರದು. ಕೂಡಿದವರಿಗೆ ಕೋಡಗವೇ ಮುದ್ದಲ್ಲವೆ! ಆ ವಿಚಾರವಾಗಿ ಟೀಕಿಸುವುದು ಅವಿವೇಕ. ಆದರೆ ನನ್ನ ಒಲವು ದಾನವಾಗಿರುವುದು ಸಿಗರೇಟ್ಟಿಗೆ. ಒಳ್ಳೆ ಏರೀಷ್ ಬ್ರಯರಿನ ಪೈಪನ್ನೂ ಇಟ್ಟಿದ್ದೇನೆ; ಅದಕ್ಕೆ ತಕ್ಕ ಆರ್ಕೇಡಿಯ ಮಿಕ್ಸ್‌ಚರೂ ಇದೆ. ಸಿಗರೆಟ್ಟಿನ ಸೊಗಸು ಪೈಪಿಗಾಗಲಿ, ಅರ್ಧಗಂಟೆ ಉರಿದು ಬಾಯಲ್ಲಿ ನಾರುವ ಸಿಗಾರಿಗಾಗಲಿ ಬರಲಾರದು. ತಂಬಾಕನ್ನು ಸಿಗರೆಟ್ಟಿನ ರೂಪದಲ್ಲಿ ಸೇವಿಸುವುದೆಂದರೆ ವಿವಿಧ ನಾಮಧಾರಿಯಾಗಿ ವಿವಿಧಾಲಂಕೃತಳಾಗಿ ಬರುವ ಪ್ರೇಯಸಿಗೆ ಮಧುರವಾದ ಮಾತೆರಡನ್ನಾಡಿ ಮುತ್ತುಕೊಟ್ಟಂತೆ. ಸಿಗರೆಟ್ಟಿನ ಶುಭ್ರವಾದ ಶ್ವೇತವಸನದ ರಮ್ಯತೆ ಪೈಪುಸಿಗಾರುಗಳಿಗೆಲ್ಲಿಂದ ಬಂದೀತು! ಒಳಗೆ ಹೊಂಬಣ್ಣ. ತಳದಲ್ಲಿ ಕಾರ್ಕಿನ ಮಾಸಲು ಬಾದಾಮಿ ಬಣ್ಣ. ಇಲ್ಲೂ ಅಷ್ಟೆ. ಸಂಕುಚಿತ ಮನೋಭಾವವನ್ನು ಬಿಡಬೇಕು. ಪ್ಯಾಸಿಂಗ್‌ಷೋ ಒಂದನ್ನೆ ನಂಬಿದರೆ ಸಾಕೇ? ಅದನ್ನೊಂದನ್ನೇ ನಂಬಬಹುದೆ? ಗುಲ್‌ಬರ್ಗದ ಡಯಮಂಡೇ ಯಾವಾಗಲೂ ಸಿಕ್ಕುವುದೇ? ಅಥವ ಲಿಬರ್ಟಿಯೇ ಬೇಕು ವಿಕ್ಟರಿಯೇ ಬೇಕು ಎಂದು ಹಟಮಾಡುವುದು ಸರಿಯೇ? ಗಿನೀಗೋಲ್ಡ್ ಬೇಡವೆಂದರೆ ಹೇಗೆ? ವೈಲ್ಡ್‌ವುಡ್ ಬೈನಿನ ಸವಿಯ ಸಮಾನವಿಲ್ಲ. ಪ್ಲೇಯರ್ಸ್‌ಜೊತೆಯಲ್ಲಿ ಸ್ನೇಹಬೆಳೆಸದಿದ್ದರೆ ಸ್ಪೋರ್ಟ್ಸ್‌ಮನ್ನಿನ ಯೋಗ್ಯತೆ ತಿಳಿಯಲಾರೆವು. ಲಂಡನ್ ನೇವಿಕಟ್ಟಿನ ನಾಜೋಕೂ, ಹತ್ತನೇ ನಂಬರಿನ ಶಕ್ತಿಯೂ ನಮಗೆ ಬೇಕೇ ಬೇಕು. ಚಾರ್‌ಮಿನಾರನ್ನು ಬೇಡವೆನ್ನುವರಾರು. ಮೈಸೂರಿನ ದಸರದ ಸಮಾನ ತೂಗುವ ವಸ್ತು ಬೇರೊಂದುಂಟೆ? ವಾಚೂ ಕತ್ತರಿಯೂ ಬೇಡವೆಂದು ತಿರಸ್ಕಾರಮಾಡುವುದು ಹೇಗೆ? ಜೇರ್ಸ್ ಸ್ಪೆಷಲ್ಲೂ, ಆನೆಯೂ ಬೇಕು. ಆದರೆ ನನ್ನ ದಮಯಂತಿಯ ಮಟ್ಟಕ್ಕೆ ಯಾರೂ ಬರಲಾರರು. ಮೊಗಲ್ ಚಕ್ರವರ್ತಿಗಳು ತಂಬಾಕನ್ನು ಚಕ್ರವರ್ತಿಗಳಿಗೆ ಯೋಗ್ಯವಾದ ರೀತಿಯಲ್ಲಿ ಸೇವಿಸುತ್ತಿದ್ದರಂತೆ. ಈ ದೇವಿ ಪನ್ನೀರಿನಲಿ ಮಿಂದು ಅದರ ತಣ್ಪುಮಾಧುರ್ಯಗಳಿಂದ ಹೆಚ್ಚು ರಮ್ಯಳಾಗಿ ಬಂದು ಚಕ್ರವರ್ತಿಯನ್ನು ಸಂತೋಷಪಡಿಸುತ್ತಿದ್ದಳಂತೆ. ಚಕ್ರವರ್ತಿಯಾದರೇನು ಚಕ್ರವರ್ತಿಯ ಸೇವಕನಾದರೇನು? ತಂಬಾಕಿನ ಸವಿಯನರಿಯದವ ಮನುಷ್ಯನೆಂದು ಮರ್ಯಾದೆಯಿಂದ ತಲೆ ಎತ್ತಲಾರ.

ತಂಬಾಕನ್ನು ಇನ್ನೊಂದು ರೂಪದಲ್ಲಿ ಸೇವಿಸುವವರನ್ನು ಎರಡು ಪಂಗಡವಾಗಿ ವಿಂಗಡಿಸಬಹುದು: ಉಂಡೆನಶ್ಯದವರು, ಪುಡಿನಶ್ಯದವರು. ಕೆಲವರಿಗೆ ತಾಯೂರು ಉಂಡೇನಶ್ಯವೇ ಬೇಕು. ನನ್ನ ಹಿರಿಯರೊಬ್ಬರಿಗೆ ಉಂಡೆನಶ್ಯವನ್ನು ತರಲು ಒಂದಂಗಡಿಗೆ ಹೋದಾಗ ಅಲ್ಲಿಯ ಮಾಲೀಕ ಹೇಳಿದ: ಪ್ರತಿರಾತ್ರಿಯೂ ಕಳ್ಳರ

ಗುಂಪೊಂದು ಬಂದು ಅವನಲ್ಲಿದ್ದ ನೆಶ್ಯವನ್ನೆಲ್ಲಾ ಹೆಚ್ಚು ಬೆಲೆಕೊಟ್ಟು ತೆಗೆದುಕೊಂಡು ಹೋಗುತ್ತಿದ್ದರೆಂದು. ಅವನ ನೆಶ್ಯದ ಗುಣ ಆಮಟ್ಟದ್ದು ! ಆದರೆ ಉಂಡೆನೆಶ್ಯದ ಸೇವಕರು ಅಲ್ಪಸಂಖ್ಯಾತರು. ಅದನ್ನು ತೀಡುವುದಕ್ಕೆ ತಾಕತ್ತು ಬೇಕು ; ತೀಡುವ ಕಲೆಯನ್ನು ಬಹುಕಾಲ ಅಭ್ಯಾಸಮಾಡಿರಬೇಕು ; ಸುಣ್ಣವನ್ನು ಎಷ್ಟೇ ಪ್ರಮಾಣದಲ್ಲಿ ಹಾಕಬೇಕೆನ್ನುವುದನ್ನು ಅರಿತಿರಬೇಕು ; ಹೊಸ ಸುಣ್ಣವಾದರೆ ಎಷ್ಟು ಹಾಕಬೇಕು ; ಹಳೆಯದಾದರೆ ಎಷ್ಟು ; ತೀಡುವ ಹದ, ಚಿಟಕಿ ಕಟ್ಟುವ ರೀತಿ ಇವೆಲ್ಲ ಒಂದೆರಡು ದಿನಗಳಲ್ಲಿ ಕರತಲವಾಗುವ ವಿದ್ಯಾರಾಶಿಗೆ ಸೇರಿಲ್ಲ. ಮದರಾಸು ಪುಡಿಗಿಂತ ಮಂಗಳೂರು ಪುಡಿಯಲ್ಲಿ ಖಾರ ಹೆಚ್ಚು. ಪರಿಮಳ ಪುಡಿಗಳು ಅನೇಕ ಬಗೆಯವು ಬಂದಿವೆ. ಷಣ್ಮುಖಾದಿಯಾಗಿ ಅನೇಕ ದೇವಾದಿದೇವತೆಗಳ ಹೆಸರಿನಿಂದ ಮೆರೆಯುವ ಪುಡಿಗಳಿವೆ. ಎಲ್ಲವೂ ಚೆನ್ನಾಗಿವೆ. ಆದರೆ ನಾನು ನನ್ನ ಗುರುಹಿರಿಯರಿಂದ ಕಲಿತಿರುವ ಒಂದು ರೀತಿಯನ್ನು ನಿಮಗೆ ರಹಸ್ಯವಾಗಿ ಹೇಳುತ್ತೇನೆ. ರಹಸ್ಯವನ್ನು ಮೂರನೆಯವರ ಕಿವಿಗೆ ಹಾಕುವುದಿಲ್ಲವೆಂಬ ಭರವಸೆಯಿಂದ ನಿಮಗೆ ಮಾತ್ರ ಹೇಳುತ್ತೇನೆ. ತೋಟಕ್ಕೆ ಹೋಗಿ ಸಂಪೂರ್ಣವಾಗಿ ಹೊಂಬಣ್ಣಕ್ಕೆ ತಿರುಗಿರುವ ಚೊಕ್ಕಟವಾದ ಎಲೆಗಳನ್ನು ಆರಿಸಿ ತರಬೇಕು. ಸಂಸ್ಕಾರವಾದನಂತರ ನೆರಳಿನಲ್ಲಿ ಒಣಗಿಸಬೇಕು. ಒಣಗಿದ ಎಲೆಗಳನ್ನು ಚತ್ರಿಯಂತೆ ಮುದುರಿ ಕಟ್ಟುಗಳನ್ನಾಗಿ ಮಾಡಿ ಅಡಕೆಪಟ್ಟಿಯ ಕೊಳವೆಯಲ್ಲಿ ಶೇಖರಿಸಿಡಬೇಕು. ಮಧ್ಯಾಹ್ನ ಊಟಕ್ಕೆ ಹೋಗುವ ಮುಂಚೆ ಒಂದೆಲೆಯನ್ನು ಮಾತ್ರ ತೆಗೆದು ಉಗುರುಬೆಚ್ಚಗಿರುವ ನೀರಿನಲ್ಲಿ ನೆನಸಬೇಕು. ಊಟವಾದ ಮೇಲೆ ದಿಂಬನ್ನೊರಗಿ, ವೀಳ್ಯವನ್ನು ಸೇವಿಸುತ್ತಾ, ಸಂಗೀತವನ್ನು ಕೇಳುತ್ತಾ ಕೂತಿರುವಾಗ ನೆನಸಿರುವ ಎಲೆಯನ್ನು ಚತ್ರಿಯನ್ನು ಬಿಚ್ಚುವಂತೆ ಅಗಲವಾಗಿ ಬಿಚ್ಚಿ ಒಂದೆರಡು ನಿಮಿಷ ಆರಲು ಬಿಡಬೇಕು. ಅಗ್ಗಿಷ್ಟಿಕೆಯಲ್ಲಿ ಸ್ವಲ್ಪವೇ ಕೆಂಡವನ್ನು ತರಿಸಿ, ಅದರ ಮೇಲೆ ಹರಡಿದ ಎಲೆಯನ್ನು ಹಿಡಿದರೆ ಕ್ರಮೇಣ ಅದರಲ್ಲಿದ್ದ ನೀರಾರಿ ಎಲೆಯು ಸುವಾಸನೆಯನ್ನು ಬೀರುವುದು. ಹಳದಿಬಣ್ಣ ಹೋಗಿ, ತೆಳುವಾದ ಒಂದು ಬಣ್ಣ ಬರುವುದು. ಈ ಹದವನ್ನು ಗುರುಮುಖೇನ ಮಾತ್ರವೇ ತಿಳಿಯಲು ಸಾಧ್ಯ. ಅಗ್ಗಿಷ್ಟಿಕೆ ಇನ್ನು ಬೇಕಾಗಿಲ್ಲ. ಅದರ ಸ್ಥಳದಲ್ಲಿ ಈಗಿರುವುದು ಕಲ್ಪತ್ತು. ಇದಕ್ಕಾಗಿಯೇ ಬೇರೆ ಮೀಸಲಾಗಿರುವ ಕಲ್ಪತ್ತೆಂದು ಹೇಳುವುದು ಅನಾವಶ್ಯಕ. ಎಡಗೈಯಲ್ಲಿ ಎಲೆ ಹಿಡಿದು ಬಲಗೈಯ ಹೆಬ್ಬೆರಳು ತರ್ಜನಿಗಳ ಸಹಾಯದಿಂದ ಎಲೆಯನ್ನ ಮಿಕಿದರೆ ಹದವಾಗಿ ಕಾದಿರುವ ಎಲೆ ಮಾತ್ರ ಚೂರುಚೂರಾಗಿ ಕಲ್ಪತ್ತಿನಲ್ಲಿ ಬೀಳುವುದು. ಕಡ್ಡಿಯೆಲ್ಲವೂ ಕೈಯಲ್ಲೇ ನಿಲ್ಲುವುದು. ಇದನ್ನು ತ್ಯಜಿಸತಕ್ಕದ್ದು. ಈ ಎಲೆಯ ಚೂರನ್ನು ಕಲ್ಪತ್ತಿನಲ್ಲಿ ಚೆನ್ನಾಗಿ ಪುಡಿಮಾಡಿ ಪರಿಮಳಸಾಮಗ್ರಿಗಳನ್ನು ಯಥೋಕ್ತ

ವಾಗಿ, ಯಥಾಯೋಗ್ಯವಾಗಿ ಸೇರಿಸಿ ಸುತ್ತಲಿರುವ ಬಂಧುಮಿತ್ರರಿಗೆ ಮೊದಲು ಕೊಟ್ಟು ಆಮೇಲೆ ನಾವು ಸೇವಿಸುವುದು. ಇದು ನಿತ್ಯವೂ ನಡೆಯತಕ್ಕ ವಿಧಿ. ಈ ಬಗೆಯಲ್ಲಿ ತಯಾರಾದ ಹೊಸ ನಶ್ಯದ ಸವಿ ಮಂಗಳೂರು ಮದ್ರಾಸುಗಳಲ್ಲಿ ಮಿಷನ್ನುಗಳಲ್ಲಿ ಮಣಗಟ್ಟಲೆ ತಯಾರಾಗುವ ಪುಡಿಗೆ ಹೇಗೂ ಬರಲಾರದೆನ್ನುವುದು ನಿಮಗೇ ವೇದ್ಯವಾಗಿದೆ. ಹದ ತಿಳಿಯಲಪೇಕ್ಷಿಸುವವರು ನನಗೆ ಹೇಳಿಕಳುಹಿಸಿದರೆ ಅವರ ಸೇವೆಮಾಡಲು ನಾನು ಸದಾ ಸಿದ್ಧನಾಗಿದ್ದೇನೆ.

ಮಂ.

ಬಂಡೆ—ಹೂವು

ಬೆಟ್ಟ ಬಂಡೆಯ ಮೇಲೆ ಕಲ್ಲೆ ಮರವಾದಂತೆ
ದೇವಗಣಗಲೆ ಮರವು ನಿಂತು ಮುಗಿಲಿಗೆ ಹೂವಿ—
ನಾರತಿಯನೆತ್ತುತಿದೆ! ಎಲೆಗಳೊಂದಾದರೂ
ಇಲ್ಲ; ಹಿಡಿಹಿಡಿ ಹಿಡಿದ ಹೂವೆಲ್ಲ ಬಿಳಿದು; ಅಹ
ಹೂವು ಎಂಥ ಮಿದು! ಬಂಡೆಯೊ ಘಟ್ಟಿ; ಬಲುಘಟ್ಟಿ.
ಒಂದು ಮೃದು, ಮತ್ತೊಂದು ಕಠಿಣ; ಈ ಮೃದುತೆ ಆ
ಕಠಿಣತೆಯ ಮತ್ತೊಂದು ರೂಪ! ಕಾಠಿಣ್ಯವೀ—
ಮೃದುತೆಯಿನ್ನೊಂದುರೂಪ; ಈ ಮೃದು ಕಠಿಣವೆಂ—
    ಬೆರಡು ಬೇರೊಂದು ನಿಲವಿನ ರೂಪ! ನೋಡು ಈ
    ಹೂವಸರಳಿಸಿದ ಮರ ಆ ಕಲ್ಲುಬಂಡೆಯೊಳು
    ಬೇರೂರಿ ರಸವ ಹೀರುತಿದೆ; ಕಲ್ ಗುಂಡಿನೆದೆ—
    ಯಲ್ಲು ಕೋಮಲತೆಯುರಳಿಸುವ ಮೂಲ ರಸವಡ—
    ಗಿಹುದು! ಈ ಬಂಡೆಯೇ ಅಲ್ಲಿ ಮರದ ತುದಿಯಲಿ
    ಹೂವಾಗಿ ಅರಳಿಹುದು! ಓ ಮನವೆ ನೋಡಿ ಕಲಿ!

ಜಿ. ಎಸ್. ಶಿವರುದ್ರಪ್ಪ.

ಬಿಸಿಲೊಲೆ*

ಪೈರುಪಚ್ಚೆಗಳ ಬೆಳವಣಿಗೆಗೂ ಜೀವಜಂತುಗಳ ಬದುಕಿಗೂ ಸೂರ್ಯನಿಂದ ಪ್ರತಿನಿತ್ಯವೂ ಭೂಮಿಯ ಕಡೆಗೆ ಧಾವಿಸುವ ಬಿಸಿಲು ಅತ್ಯಾವಶ್ಯಕ. ಬಹು ಹಿಂದಿನ ಕಾಲದಿಂದ ಮಾನವನಿಗೆ ಸೂರ್ಯನ ಪ್ರಾಮುಖ್ಯತೆ ಮಂದಟ್ಟಾಗಿ

"ಸ್ವಾಮಿದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತು ತೇ |
ಕಾವರಿಲ್ಲವು ನಿನ್ನ ಬಿಟ್ಟರೆ ಸೂರ್ಯನೆ ಜಗದೀಶನೆ |
ಜೀವಕೋಟಿಯು ನಿನ್ನ ಈ ಬೆಳಕಿಂದ ಜೀವಿಪುದಲ್ಲವೇ" ||

ಎಂಬ ಪ್ರಾರ್ಥನೆ ಸಲ್ಲುತ್ತಿದೆ. ಆಧುನಿಕ ವಿಜ್ಞಾನವು ಬೆಳೆದಂತೆಲ್ಲಾ ರವಿಶಕ್ತಿಯ ಮಹತ್ವವೂ ಮಾನವವರ್ಗಕ್ಕೆ ಆಗುತ್ತಿರುವ ಅಗಾಧವಾದ ಪ್ರಯೋಜನವೂ ಗೋಚರವಾಗುತ್ತಿದೆ. ಅಲ್ಲದೆ ಪ್ರಕೃತಿಯು ಈ ಶಕ್ತಿಯನ್ನು ಬಹು ಜಾಣತನದಿಂದ ಸ್ವಪ್ರಯೋಜನೆಗೆ ಅಳವಡಿಸಿಕೊಳ್ಳುತ್ತಿರುವುದು ಭಾಸವಾಗುತ್ತಿದೆ. ಇತ್ತೀಚಿಗೆ ಈ ಸೌರಶಕ್ತಿಯನ್ನು ನೇರವಾಗಿ ನಿತ್ಯಜೀವನಕ್ಕೆ ಹಾಯಿಸಿಕೊಳ್ಳಲು ಮಾನವಪ್ರಯತ್ನಗಳೂ ಸಂತತವಾಗಿ ನಡೆಯುತ್ತಿವೆ. ಆದಕಾರಣ ಸೂರ್ಯನಿಂದ ಹೊರಹೊಮ್ಮುವ ಶಕ್ತಿಯ ಸ್ವರೂಪ, ಉತ್ಪತ್ತಿ, ಉಪಯೋಗಗಳನ್ನು ವಿಮರ್ಶಿಸುವುದು ಅಗತ್ಯ.

ಸೂರ್ಯನು ಭೂಮಿಗೆ ಅತ್ಯಲ್ಪ ದೂರದಲ್ಲಿರುವ ಒಂದು ಸಾಮಾನ್ಯವಾದ ನಕ್ಷತ್ರ. ಭೂಮಿಗೂ ಸೂರ್ಯನಿಗೂ ಇರುವ ಅಂತರ ೯ ಕೋಟಿ ೩೦ ಲಕ್ಷ ಮೈಲಿಗಳು. ಆದರೂ ಸೂರ್ಯನಿಂದಾಚೆ ಇರುವ ಅತಿಹತ್ತಿರವಾದ ನಕ್ಷತ್ರ ಸೂರ್ಯನ ದೂರಕ್ಕೆ ಸುಮಾರು ೩ ಲಕ್ಷ ಬಾರಿ ದೂರದಲ್ಲಿದೆ. ಇನ್ನುಳಿದ ನಕ್ಷತ್ರಗಳ ದೂರವಂತೂ ಅಗಣಿತವಾಗಿದೆ. ಸೂರ್ಯನ ಮೇಲ್ಮೈಯಿನ ಶಾಖದ ಮಟ್ಟ ಸುಮಾರು ೬೦೦೦ ಸೆಂಟಿಗ್ರೇಡ್ ಡಿಗ್ರಿಗಳು; ಕೇಂದ್ರದ ಕಡೆಗೆ ಒಳಹೊಕ್ಕಂತೆಲ್ಲಾ ಖರತ್ವವು (Temperature) ಹೆಚ್ಚಿ ಲಕ್ಷಾಂತರ ಡಿಗ್ರಿಗಳಾಗುವುವು. ಈ ಜಾಜ್ವಲ್ಯಮಾನ ಸ್ಥಿತಿಯ ಪರಿಣಾಮವಾಗಿ ಸೂರ್ಯನ ಮೈಯಿಂದ ಹೊರಹೊಮ್ಮುವ ಬೆಳಕು ಶಾಖಗಳ ಪ್ರಮಾಣ ಒಂದು ಚದುರಡಿಗೆ ೮೦೦೦ ಅಶ್ವಶಕ್ತಿಗಳಾಗುತ್ತದೆ. ಸೂರ್ಯಗೋಳದ ವ್ಯಾಸವನ್ನು ೮ ಲಕ್ಷದ ೬೪ ಸಾವಿರ ಮೈಲಿಗಳೆಂದು ಪರಿಗಣಿಸಿದರೆ ಸೂರ್ಯನಿಂದ ಸರ್ವತೋಮುಖವಾಗಿ ಪ್ರವಹಿಸುತ್ತಿರುವ ಶಕ್ತಿ ೪೬೦ ಕೋಟಿ,

---

* ಮೈಸೂರಿನಲ್ಲಿರುವ ಆಲ್ ಇಂಡಿಯಾ ರೇಡಿಯೊ ಕೇಂದ್ರದಿಂದ ೧೯೫೩ ನೆ ಡಿಸೆಂಬರ್ ೧೫ ರಲ್ಲಿ ಪ್ರಸಾರವಾದ ಈ ಭಾಷಣವನ್ನು ಅನುಮತಿ ಪಡೆದು ಪ್ರಕಟಿಸಲಾಗಿದೆ.

ಕೋಟಿ, ಅಶ್ವಶಕ್ತಿಗೆ ಸಮ. ಈ ಅಗಾಧವಾದ ಶಕ್ತಿಯಲ್ಲಿ ಗ್ರಹಗಳ ಪಾಲಿಗೆ ಲಭಿಸುವುದು ೧೦ ಕೋಟಿಯಲ್ಲಿ ಒಂದು ಭಾಗ. ಇದರಲ್ಲಿ ಭೂಮಿಯ ಪಾಲಿಗೆ ಬರುವ ಅತ್ಯಲ್ಪ ಭಾಗವನ್ನು ಗಮನಿಸೋಣ; ಮೈಸೂರು ವಿದ್ಯುದಿಲಾಖೆ ಯವರು ಮನೆಗಳಿಗೆ ಮಾರುವ ದರದಲ್ಲಿ ಈ ಶಕ್ತಿಯನ್ನು ಲೆಕ್ಕಹಾಕಿದರೆ ಒಂದು ನಿಮಿಷಕ್ಕೆ ೭೫ ಸಾವಿರ ಕೋಟಿ ರೂಪಾಯಿ ಬೆಲೆಬಾಳುವ ಶಕ್ತಿ ಸೂರ್ಯನಿಂದ ಭೂಮಿಗೆ ತಲ್ಪುತ್ತಿದೆ. ಇಷ್ಟು ಉದಾರವಾಗಿ ಶಕ್ತಿಯ ಪ್ರವಾಹವನ್ನು ಸಂತತವಾಗಿ ಭೂಮಿಗೆ ನೀಡುತ್ತಿರುವ ಸೂರ್ಯನನ್ನು ನಮ್ಮ ಹಿರಿಯರು "ವಿಶ್ವಶಕ್ತ"ನೆಂದು ಪರಿಗಣಿಸಿ ಪೂಜೆಮಾಡಿದುದೇನೂ ಆಶ್ಚರ್ಯವಲ್ಲ.

ಭೂಮಿಗೆ ಮೂಲಾಧಾರವಾದ ಸೌರಶಕ್ತಿಯು ಹೇಗೆ ಉತ್ಪತ್ತಿಯಾಗುವು ದೆಂಬ ಪ್ರಶ್ನೆ ಉದ್ಭವಿಸುವುದು ಸಹಜವಾಗಿದೆ. ಜರ್ಮನ್ ವಿಜ್ಞಾನಿ ಹೆಲ್ಮ್ ಹೋಲ್ಟ್ಸ್ ಎಂಬಾತನು ಸೂರ್ಯನು ಒಂದೇ ಸಮನಾಗಿ ಗಾತ್ರದಲ್ಲಿ ಕೃಶ ವಾಗುತ್ತಿರುವನೆಂದೂ, ಹಾಗೆ ಸಂಕುಚಿತವಾಗುವುದರ ಪರಿಣಾಮವಾಗಿ ಉತ್ಪತ್ತಿ ಯಾಗುವ ಶಕ್ತಿಯು ಪ್ರಸಾರವಾಗುತ್ತಿರುವುದೆಂದೂ ಸಾರಿದನು. ಈಚೆಗೆ ರೇಡಿಯಂ ಎಂಬ ಮೂಲವಸ್ತುವನ್ನು ಕಂಡುಹಿಡಿದ ನಂತರ, ಸೂರ್ಯನ ಪ್ರಭೆಗೆ 'ರೇಡಿಯೋ ಆಕ್ಟೀವ್' ವಸ್ತುಗಳೇ ಕಾರಣವಿರಬಹುದೆಂಬ ಮತ್ತೊಂದು ಊಹೆ ಪ್ರಾರಂಭ ವಾಯಿತು. ಇತ್ತೀಚಿಗೆ ಸೌರಶಕ್ತಿಗೆ ಪರಮಾಣುಶಕ್ತಿಯೇ ಮೂಲಾಧಾರವೆಂದು ಸ್ಥಾಪಿಸಲ್ಪಟ್ಟಿದೆ. ಸೂರ್ಯನಲ್ಲಿ ಹೇರಳವಾಗಿರುವ ಜಲಜನಕ ಪರಮಾಣುಗಳು ಸೇರಿ ಸಂತತವಾಗಿ "ಹೀಲಿಯಂ" ಅಥವಾ ಅರ್ಕಾನಿಲದ ಪರಮಾಣುಗಳಾಗಿ ಪರಿ ವರ್ತಿತವಾಗುತ್ತಿರುವುದೇ ಸೂರ್ಯನ ಅಪರಿಮಿತವಾದ ಶಕ್ತಿಗೆ ಕಾರಣ. ಈ ವಾದದ ಪ್ರಕಾರ ಸೌರಶಕ್ತಿಯ ಪ್ರಸಾರವು ಸ್ವಲ್ಪವೂ ಕುಂದದೆ ಇನ್ನೂ ಕೋಟ್ಯಾಂತರ ವರ್ಷಗಳು ನಡೆದುಬರುವುದೆಂದು ಪರಿಗಣಿಸಲಾಗಿದೆ. ಪ್ರತಿ ಸೆಕೆಂಡಿನಲ್ಲೂ ಸೂರ್ಯನಲ್ಲಿ ೫೬ ಕೋಟಿ, ೪೦ ಲಕ್ಷ ಟನ್ ಜಲಜನಕವು ಪರಿ ವರ್ತಿತವಾಗಿ ೫೬ ಕೋಟಿ ಟನ್ ಅರ್ಕಾನಿಲವು ಮಾತ್ರ ಉತ್ಪತ್ತಿಯಾಗುವುದು. ಹೀಗೆ ಒಳಪಡಿ ಬರುವ ೪೦ ಲಕ್ಷ ಟನ್ ವಸ್ತುವು ಶಕ್ತಿಯ ರೂಪವನ್ನು ತಾಳಿ, ಬೆಳಕು ಶಾಖಗಳಾಗಿ ಪ್ರಸಾರವಾಗುವುದು. ಈ ಶಕ್ತಿಯ ಪ್ರಮಾಣವನ್ನು ಗೊತ್ತು ಹಚ್ಚಲು ಸಾಧಕವಾಗುವ ಐನ್‌ಸ್ಟೈನಿನ ನಿಯಮದ ಪ್ರಕಾರ, ಒಳಪಡಿ ಬರುವ ವಸ್ತು ತೂಕವನ್ನು ಬೆಳಕಿನ ವೇಗದಿಂದ ಎರಡುಬಾರಿ ಗುಣಿಸಬೇಕು; ಬೆಳಕಿನ ವೇಗ ಸೆಕಂಡಿಗೆ ೧,೮೬,೦೦೦ ಮೈಲಿಗಳಾದುದರಿಂದ ಈ ಶಕ್ತಿಯ ರುಂದ್ರ ಭೀಷ್ಮತೆಯು ಮಂದಟ್ಟಾಗುವುದು. ಹೀಗೆ ಪ್ರತಿ ಸೆಕೆಂಡಿನಲ್ಲೂ ಸೂರ್ಯನ ತೂಕ

೪೦ ಲಕ್ಷ ಟನ್ ಕಡಮೆಯಾಗಿ ಶಕ್ತಿಸ್ವರೂಪವನ್ನು ತಾಳಿದರೂ, ಸಾವಿರದಲ್ಲಿ ಒಂದು ಭಾಗದಷ್ಟು ಸೂರ್ಯನ ತೂಕ ಕಡಮೆಯಾಗಲು ಒಂದೂವರೆ ಸಾವಿರ ಕೋಟಿ ವರ್ಷಗಳು ಬೇಕು; ಅಂದರೆ ಸೂರ್ಯನ ಶಕ್ತಿಪ್ರಸಾರವು ಏಕರೀತಿಯಾಗಿ ಇನ್ನೂ ಕೋಟ್ಯಾಂತರ ವರ್ಷಗಳ ಕಾಲ ಅವಿಚ್ಛಿನ್ನವಾಗಿ ನಡೆಯುವುದೆಂಬ ಭರವಸೆಯಿದೆ.

ಒಂದು ನಿಮಿಷಕಾಲದಲ್ಲಿ ಭೂಮಿಯ ಮೇಲೆ ಬೀಳುವ ಸೌರಶಕ್ತಿಯ ಪ್ರಮಾಣ ಒಂದು ಚದುರ ಅಡಿಗೆ ಒಂದು ಸಾವಿರ ಕ್ಯಾಲೊರಿ ಅಥವಾ ಒಂದು ಕಿಲೋಕ್ಯಾಲರಿಯಾಗುತ್ತದೆ. ಇಂಡಿಯಾ ದೇಶದ ಜನಸಂಖ್ಯೆ ಮತ್ತು ವಿಸ್ತೀರ್ಣ ವನ್ನು ಪರಿಗಣಿಸಿದರೆ ಪ್ರತಿಯೊಬ್ಬ ಮನುಷ್ಯನ ಪಾಲಿಗೂ ಸರಾಸರಿ ಸುಮಾರು ಮೂರು ಎಕರೆಗಳು ಬರಬಹುದು. ಈ ಮೂರು ಎಕರೆಗಳ ಮೇಲೆ ಪ್ರತಿನಿತ್ಯವೂ ಬೀಳುವ ಸೌರಶಕ್ತಿಯು ಸುಮಾರು ೬ ಕೋಟಿ ಕಿಲೋಕ್ಯಾಲರಿಗಳಾಗುತ್ತವೆ. ಪ್ರತಿಯೊಬ್ಬ ಮನುಷ್ಯನೂ, ದಿನಕ್ಕೆ ತೆಗೆದುಕೊಳ್ಳುವ ಆಹಾರವು ಸುಮಾರು ೩೦೦೦ ಕಿಲೋಕ್ಯಾಲರಿಗಳು; ಈ ಆಹಾರ ಸಾಧನೆಗಾಗಿ ನಿತ್ಯವೂ ಎಣ್ಣೆ ಇದ್ದಲುಗಳ ರೂಪದಲ್ಲಿ ಸುಮಾರು ೧ ಲಕ್ಷ ೪೭ ಸಾವಿರ ಕಿಲೋಕ್ಯಾಲರಿಗಳು ವ್ಯಯವಾಗು ವುವು. ಹೀಗೆ ಪ್ರತಿಮನುಷ್ಯನ ನಿತ್ಯಜೀವನಕ್ಕೆ ಬೇಕಾಗುವ ೧॥ ಲಕ್ಷ ಕಿಲೊ ಕ್ಯಾಲರಿಗಳು ಅವನಿಗೆ ಸಂಬಂಧಿಸಿದ ಮೂರು ಎಕರೆ ಭೂಮಿಯ ಮೇಲೆ ಬೀಳುವ ಸೌರಶಕ್ತಿಯಲ್ಲಿ ಕೇವಲ ನಾಲ್ಕು ನೂರರಲ್ಲಿ ಒಂದುಭಾಗ. ಆದರೂ ಕೂಡ ಸೌರ ಶಕ್ತಿಯನ್ನು ಮಾನವನು ತನ್ನ ನಿತ್ಯಜೀವನದಲ್ಲಿ ನೇರವಾಗಿ ಉಪಯೋಗಿಸುವ ದಾರಿ ಕಾಣದೆ ಪ್ರಕೃತಿದತ್ತವಾದ ಕಲ್ಲಿದ್ದಲೇ ಮೊದಲಾದ ಶಕ್ತಿಸಾಮಗ್ರಿಗಳನ್ನು ತಡೆಯಿಲ್ಲದೆ ವ್ಯಯಮಾಡುತ್ತಿರುವನು. ಆದಕಾರಣ ನಿರಂತರವೂ ಪ್ರಸಾರವಾಗು ತ್ತಿರುವ ಅಗಾಧವಾದ ಸೌರಶಕ್ತಿಯನ್ನು ಮಾನವನು ತನ್ನ ಉಪಯೋಗಕ್ಕೆ ನೇರವಾಗಿ ಹೇಗೆ ಅಳವಡಿಸಿಕೊಳ್ಳಬಹುದೆಂಬ ಪ್ರಶ್ನೆ ಏಳುತ್ತದೆ. ವನವಾಸದಲ್ಲಿ ತೊಳಲುತ್ತಿದ್ದ ಪಾಂಡವರಿಗೆ ಕೃಪೆಮಾಡಿ ಅಕ್ಷಯಪಾತ್ರೆಯನ್ನು ನೀಡಿದ ಸೂರ್ಯ ದೇವನು ತನ್ನ ಶಕ್ತಿಯನ್ನು ಮಾನವನ ಉಪಯೋಗಕ್ಕೆ ಇಂದು ದಯಪಾಲಿಸ ಲಾರನೇ? ವಿಜ್ಞಾನದ ದೃಷ್ಟಿಯಿಂದ ಇದು ಸಾಧ್ಯ. ಆದರೆ ಈ ಶಕ್ತಿ ಹಸ್ತಗತ ವಾಗಲು ಅನೇಕ ಕಷ್ಟತರವಾದ ಸಂಶೋಧನೆಗಳು ಇನ್ನೂ ನಡೆಯಬೇಕಾಗಿವೆ. ಸೌರಶಕ್ತಿಯನ್ನು ಅಡ್ಡಗಟ್ಟಿ ನಮ್ಮ ನಿತ್ಯಜೀವನಕ್ಕೆ ಹಾಯಿಸಿಕೊಳ್ಳುವ ಹೊಸ ಯುಗವು ಈಗಾಗಲೇ ಬಂದಿರುವುದೆಂದು ಯಾರೂ ಭಾವಿಸಬಾರದು. ಆದರೂ ಪ್ರಕೃತಿಯೊಡನೆ ನಿರಂತರವಾದ ಹೋರಾಟ ನಡೆಸುತ್ತಿರುವ ವಿಜ್ಞಾನಿಗಳು ಈವರಿವಿಗೆ

ಸಾಧಿಸಿರುವ ಕೆಲವು ವಿಚಾರಗಳು ಗಮನಾರ್ಹವೂ ಆಶಾದಾಯಕವೂ ಆಗಿವೆ. ಸಸ್ಯವರ್ಗದ ಎಲೆಗಳಲ್ಲಿರುವ "ಕ್ಲೋರೊಫಿಲ್" ಎಂಬ ವಸ್ತುವಿಶೇಷವು ಸೌರಶಕ್ತಿಯನ್ನು ಅಳವಡಿಸಿಕೊಂಡು ಗಿಡಮರಗಳ ಬೆಳವಣಿಗೆಗೆ ಸಹಕಾರಿಯಾಗಿದೆ. ನಿತ್ಯ ಜೀವನದಲ್ಲಿ ಸೌದೆಗಾಗಿ ಬೇಕಾಗುವ ಈ ಮರಗಳನ್ನು ಕೃತಕವಾಗಿ ಅತ್ಯಲ್ಪಕಾಲದಲ್ಲಿ "ಕ್ಲೋರೊಫಿಲ್" ಮತ್ತು ಸೂರ್ಯರಶ್ಮಿಗಳ ಸಹಾಯದಿಂದ ತಯಾರಿಸುವ ಪ್ರಯತ್ನಗಳೂ ನಡೆಯುತ್ತಿವೆ. ಅಲ್ಲದೆ ಸೌರಶಕ್ತಿಯನ್ನು ನೇರವಾಗಿ ವಿದ್ಯುಚ್ಛಕ್ತಿಗೆ ಮಾರ್ಪಡಿಸುವ ಯತ್ನಗಳೂ ನಡೆಯುತ್ತಿವೆ. ಕಾಪರ್ ಆಕ್ಸೈಡ್ ಅಥವಾ ಸಿಲ್ವರ್ ಸೆಲಿನೈಡ್ ಕೋಶಗಳ ಮೇಲೆ ಬೆಳಕು ಬಿದ್ದರೆ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದೆಂಬುದು ಸಾಮಾನ್ಯವಾಗಿ ತಿಳಿದ ವಿಚಾರ. ಲಾಂಗೆ ಎಂಬ ವಿಜ್ಞಾನಿಯು ಒಂದು ಚದುರಗಜ ವಿಸ್ತೀರ್ಣವುಳ್ಳ ಕಾಪರ್ ಆಕ್ಸೈಡ್ ಕೋಶದ ಮೇಲೆ ಬಿಸಿಲು ಬಿದ್ದರೆ ಅನೇಕ ವಾಟುಗಳ ವಿದ್ಯುಚ್ಛಕ್ತಿ ಉತ್ಪನ್ನವಾಗಬಹುದೆಂದು ತೋರಿಸಿದನು. ಅಂತೆಯೇ ಒಂದು ಚದುರ ಮೈಲಿ ವಿಸ್ತೀರ್ಣದ ಸಿಲ್ವರ್ ಸೆಲಿನೈಡ್ ಕೋಶಗಳ ಮೇಲೆ ಬಿಸಲು ಬಿದ್ದರೆ ಸುಮಾರು ೩|| ಲಕ್ಷ ಕಿಲೋವಾಟ್ ಶಕ್ತಿಯನ್ನು ಉತ್ಪತ್ತಿಮಾಡಬಹುದು. ಆದರೆ ಈ ವಿಸ್ತೀರ್ಣದ ಮೇಲೆ ಬೀಳುವ ಸೌರಶಕ್ತಿ ಇದಕ್ಕೂ ಹತ್ತುಪಾಲು ಜಾಸ್ತಿಯಾಗಿರುವುದು. ಅಂದರೆ ಈ ಪ್ರಭಾಕೋಶಗಳ (Photo-cells) ಸಾಮರ್ಥ್ಯವನ್ನು ಕೇವಲ ಸೇಕಡ ಹತ್ತು ಎಂದು ಪರಿಗಣಿಸಬೇಕು.

ಹುಡುಗರು ಆಟಕ್ಕಾಗಿ ಸಣ್ಣ ಮಸೂರ (Lens) ಗಳಿಂದ ಬಿಸಲಿನಲ್ಲಿರುವ ಶಾಖವನ್ನು ಕೇಂದ್ರೀಕರಣಮಾಡಿ ಬಟ್ಟೆ, ಹತ್ತಿ, ಕಾಗದ, ಹುಲ್ಲು ಮುಂತಾದುವನ್ನು ಸುಡುವ ದೃಶ್ಯ ನಮಗೇನೂ ಹೊಸದಲ್ಲ. ಆದರೂ ಬಹು ಹಿಂದಿನ ಕಾಲದಲ್ಲಿ ಆರ್ಕಿಮೆಡೀಸನು ಶತ್ರುಗಳ ಹಡಗುಗಳನ್ನು ದರ್ಪಣಗಳ ಸಹಾಯದಿಂದ ಸುಟ್ಟು ನಾಶಮಾಡಿದನೆಂಬುದು ಕೇವಲ ಕಟ್ಟುಕಥೆಯೇ ಸರಿ. ಈಚೆಗೆ ಕ್ರಿ.ಶ. ೧೭೭೨ ರಲ್ಲಿ ಲೆವಾಯ್‌ಸ್ಲಿಯರ್ ಎಂಬ ರಸವಿಜ್ಞಾನಿಯು ಒಂದು ದೊಡ್ಡದಾದ ಪೀನ ಮಸೂರದ (Convex Lens) ಸಹಾಯದಿಂದ ಸೂರ್ಯನ ಶಾಖವನ್ನು ಕೇಂದ್ರೀಕರಿಸಿ, ವಜ್ರವನ್ನು ಸುಟ್ಟು, ಅದು ಕೇವಲ ಇಂಗಾಲದ ರೂಪಾಂತರವೆಂದು ತೋರಿಸಿಕೊಟ್ಟನು. ಈ ತೆರನಾದ ಪ್ರಯೋಗಗಳಲ್ಲಿ ಮಹಾರಜತ (Platinum) ವನ್ನು ಕೂಡ ಕರಗಿಸಬಲ್ಲ ಸುಮಾರು ೧೭೫೦ ಸೆಂಟಿಗ್ರೇಡ್ ಡಿಗ್ರಿ ಖರತ್ವವನ್ನು ಸಾಧಿಸಲಾಯಿತು. ಕ್ರಿ.ಶ. ೧೮೭೮ ರಲ್ಲಿ ನಡೆದ ಪ್ಯಾರಿಸ್ ಪ್ರದರ್ಶನದಲ್ಲಿ ಮೌಕೊ ಯಂತ್ರವೆಂದು ಕರೆಯಲ್ಪಟ್ಟ ಇಪ್ಪತ್ತು ಚದುರಗಜ ವಿಸ್ತೀರ್ಣದ ನಿಮ್ನದರ್ಪಣ (Concave Mirror) ವನ್ನು

ಉಪಯೋಗಿಸಿ ಒಂದು ಅಶ್ವಶಕ್ತಿಯ ಯಂತ್ರವನ್ನು ನಡೆಸಲಾಯಿತು. ಅನಂತರ ಈಜಿಪ್ಟ್, ಆಸ್ಟ್ರೇಲಿಯ, ಮೆಕ್ಸಿಕೊ ಮುಂತಾದ ದೇಶಗಳಲ್ಲಿ ವ್ಯವಸಾಯಕ್ಕೆ ನೀರನ್ನು ಎತ್ತಲು ಸುಮಾರು ೫೦ ಅಶ್ವಶಕ್ತಿಗಳ ಸೌರಯಂತ್ರಗಳನ್ನು ಸ್ಥಾಪಿಸಿದರು. ಇತ್ತೀಚೆಗೆ ಬಿಸಿಲಿನ ಸಹಾಯದಿಂದ ಹೆಚ್ಚು ಖರತ್ವವನ್ನು ಸಾಧಿಸಬಹುದೆಂಬ ಭಾವನೆ ಮೂಡಿ ಪ್ರಯತ್ನಗಳು ನಡೆದಿವೆ. ಪರವಲಯಾಕಾರದ ದರ್ಪಣಗಳಿಂದ (Parabolic Mirror) ಬಿಸಿಲನ್ನ ಕೇಂದ್ರೀಕರಿಸಿದರೆ ಸುಮಾರು ೫೦೦೦ ಸೆಂಟಿಗ್ರೇಡ್ ಡಿಗ್ರಿ ಖರತ್ವವನ್ನು ಮುಟ್ಟಲು ಸಾಧ್ಯ. ಈ ಕೇಂದ್ರಪ್ರದೇಶದಲ್ಲಿ ಪ್ರಯೋಗವಸ್ತುವನ್ನು ಶೂನ್ಯಾಕಾಶವಿರುವ ಸ್ಫಟಿಕಪಾತ್ರೆಯಲ್ಲಿಟ್ಟರೆ (Quartz Vacuum Vessel) ಸೌರ ಶಕ್ತಿಯ ಫಲವನ್ನು ಸಂಪೂರ್ಣವಾಗಿ ಪಡೆಯಬಹುದು. ಕ್ರಿ.ಶ. ೧೯೪೬ರಲ್ಲಿ ಪ್ಯಾರಿಸ್ ಸಮೀಪದಲ್ಲಿರುವ ಮ್ಯೂಡಾನ್ ಸಮೀಕ್ಷಾ ಮಂದಿರ (Observatory) ದಲ್ಲಿ ಸುಮಾರು ೭ ಅಡಿ ವ್ಯಾಸವೂ, ೩ ಅಡಿ ಕೇಂದ್ರದೂರವೂ ಇರುವ ಕನ್ನಡಿಯಿಂದ ಸೌರಶಕ್ತಿಯನ್ನು ಕೇಂದ್ರೀಕರಿಸಿದರು. ಗ್ರಾಫೈಟ್ ಎಂಬ ಇಂಗಾಲದ ರೂಪಾಂತರವನ್ನು ಪರೀಕ್ಷೆಗಾಗಿ ಉಪಯೋಗಿಸಿದಾಗ ಖರತ್ವವು ೩೫೦೦ ಡಿಗ್ರಿ ಮುಟ್ಟಿತು. ಈ ಶಾಖ ಮಟ್ಟದಲ್ಲೆ ಗ್ರಾಫೈಟ್ ನೇರವಾಗಿ ಅನಿಲೀಕರಣ (Sublimation) ಹೊಂದಿದ್ದರಿಂದ ಖರತ್ವವು ಹೆಚ್ಚಲಿಲ್ಲ. ನೀರು ಮರಳಲು ಪ್ರಾರಂಭವಾದಾಗ, ಹೆಚ್ಚು ಶಾಖದಿಂದ ಹೇಗೆ ಖರತ್ವವು ಏರಲಾರದೋ ಹಾಗೆ, ಗ್ರಾಫೈಟಿನ ಅನಿಲೀಕರಣದಿಂದ ಖರತ್ವವು ಏರದೇ ೩೫೦೦ ಡಿಗ್ರಿಗಳಲ್ಲೇ ನಿಂತಿತು. ಈ ಮ್ಯೂಡಾನ್ ಯಂತ್ರದ ಪ್ರಯೋಗದಿಂದ ಸಾಮಾನ್ಯವಾಗಿ ಜಗ್ಗದ ಅನೇಕ ಪದಾರ್ಥಗಳನ್ನು ದ್ರವರೂಪಕ್ಕೆ ತರಲಾಗಿದೆ; ಕ್ಯಾಲ್ಸಿಯಂ ಆಕ್ಸೈಡ್ ಅಥವಾ ಸುಣ್ಣ, ಜಿರ್‌ಕೋನಿಯ, ಥೋರಿಯ ಮುಂತಾದ ಜಗ್ಗದ ವಸ್ತುಗಳನ್ನು ಕರಗಿಸಲಾಗಿದೆ. ಕ್ರಿ.ಶ. ೧೯೩೪ ರಲ್ಲಿ ಫೆಲಿಕ್ಸ್ ಟ್ರಾಂಬೆ ಎಂಬ ವಿಜ್ಞಾನಿಯು ಟೈಟೇನಿಯಂ, ಅಲ್ಯೂಮಿನಂ, ಕ್ರೋಮಿಯಂ, ಬೆರಿಲಿಯಂ, ಮೆಗ್ನೀಸಿಯಂ ಮುಂತಾದ ಲೋಹಗಳ ಆಕ್ಸೈಡುಗಳನ್ನು ತನ್ನ ಬಿಸಿಲೊಲೆಗಳಲ್ಲಿ ಕರಗಿಸಿ ಕೈಗಾರಿಕೆಗಳಿಗೆ ನೆರವು ನೀಡಿದ್ದಾನೆ. ಕೆಲವು ಜಗ್ಗದ ಲೋಹಗಳನ್ನು ಕರಗಿಸಿದ ನಂತರ ಅವುಗಳ ಭೌತಗುಣಗಳು ವ್ಯತ್ಯಾಸ ಹೊಂದುತ್ತವೆ. ಟಂಗ್‌ಸ್ಟನ್ ತಂತಿಗಳನ್ನು ಮ್ಯೂಡಾನ್ ಬಿಸಿಲೊಲೆಗಳಲ್ಲಿ ಸಂಸ್ಕರಿಸುವುದರಿಂದ ಕೈಗಾರಿಕೆಗಳಲ್ಲಿ ಈ ತಂತಿಯನ್ನು ಸುಲಭವಾಗಿ ಉಪಯೋಗಿಸಲು ಸಾಧ್ಯವಾಗಿದೆ.

ಈ ಬಿಸಿಲೊಲೆಗಳ ಸಹಾಯದಿಂದ ನೈಟ್ರಿಕ್ ಆಕ್ಸೈಡ್ ಸಂಯೋಗವನ್ನು ಸಾಧಿಸಿ, ಕೃತಕ ಗೊಬ್ಬರ ತಯಾರಿಸುವ ಯೋಜನೆಗಳು ನಡೆದಿವೆ. ವಾಯುಮಂಡಲದಲ್ಲಿರುವ ಸಾರಜನಕ, ಆಮ್ಲಜನಕಗಳನ್ನು ಬಿಸಿಲೊಲೆಗಳಲ್ಲಿ ಹಾಯಿಸಿದರೆ ಅಲ್ಲಿನ

ಅಗಾಧವಾದ ಶಾಖದ ಮಟ್ಟಕ್ಕೆ ಅನಿಲಗಳಲ್ಲಿ ಸ್ವಲ್ಪಭಾಗ ಸಂಯೋಗವಾಗುತ್ತದೆ. ಹೀಗೆ ಸಂಯೋಗವಾದ ನೈಟ್ರಿಕ್ ಆಕ್ಸೈಡ್ ಪುನಃ ವಿಭಜನೆಯಾಗದಂತೆ ಅನಿಲ ಮಿಶ್ರಣವನ್ನು ನೀರಿನಲ್ಲಿ ಹಾಯಿಸಿ ಆರಿಸಬೇಕು. ಈ ಯೋಜನೆಗಳಿಗೆ ಸಂಬಂಧಪಟ್ಟ ಪ್ರಯೋಗಗಳನ್ನು ಮುಂದುವರಿಸಿದಲ್ಲಿ ಅನುಕೂಲವಾಗುವುದೆಂದು ಭಾವಿಸಲಾಗಿದೆ. ಕೈಗಾರಿಕಾಕ್ಷೇತ್ರದಲ್ಲಿ ಈ ಪ್ರಯೋಗಗಳು ಫಲಕಾರಿಯಾಗಬೇಕಾದರೆ ದೊಡ್ಡ ದೊಡ್ಡ ಪರವಲಯಾಕಾರದ ದರ್ಪಣಗಳನ್ನು ಸೃಜಿಸಬೇಕಾಗುವುದು. ಇದು ಅಸಾಧ್ಯವಾದೆಡೆಗಳಲ್ಲಿ ಸಣ್ಣ ಸಣ್ಣ ಕನ್ನಡಿಗಳನ್ನು ಜೋಡಿಸಿ ಈ ದರ್ಪಣಗಳನ್ನು ಮಾಡಿದರೂ ಅಷ್ಟೇ ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ಬಿಸಿಲಿನಿಂದ ನೀರನ್ನು ಕುದಿಸುವ ಪ್ರಯತ್ನಗಳು ರಷ್ಯಾದೇಶದ ಟಾಸ್ಕೆಂಟ್ ನಗರದಲ್ಲಿ ನಡೆದಿವೆ. ೧೯೪೫ರಲ್ಲಿ ೩೩ ಅಡಿ ವ್ಯಾಸದ ಪರವಲಯಾಕಾರದ ದರ್ಪಣವನ್ನುಪಯೋಗಿಸಿ ಘಂಟೆಗೆ ೫೦ ಪೌಂಡು ಆವಿ ಉತ್ಪತ್ತಿಯಾಗುವಂತೆ ಮಾಡಿದರು. ವರ್ಷಕ್ಕೆ ಒಂಭತ್ತು ತಿಂಗಳ ಕಾಲ ಬಿಸಿಲಿರುವ ಮಧ್ಯ ಏಷ್ಯದ ಭಾಗಗಳಲ್ಲಿ ಈ ವಿಧವಾದ "ಹೀಲಿಯೊ ಬಾಯಿಲರ್ಸ್" ಎಂಬ ಕುದಿಯುವ ಕಡಾಯಿಗಳನ್ನು ಸ್ಥಾಪಿಸುವುದು ಸುಲಭಸಾಧ್ಯವೆಂದು ಸೋವಿಯಟ್ ಪತ್ರಿಕೆಗಳು ತಿಳಿಸುತ್ತವೆ. ಅಮೆರಿಕದ ಸಾನ್ ಆಸ್ಟೋನಿಯೊ ಸಂಶೋಧನಾಕ್ಷೇತ್ರದಲ್ಲಿ ಸೌರಶಕ್ತಿಯಿಂದ ನೀರನ್ನು ಕಾಯಿಸುವ ಸಲಕರಣಗಳನ್ನು ಸ್ಥಾಪಿಸಿದ್ದಾರೆ. ಇವು ಸಂಶೋಧನೆಗಳಿಗೂ, ನಿತ್ಯದ ಉಪಯೋಗಕ್ಕೂ ಸಹಕಾರಿಯಾಗಿವೆ. ರಾತ್ರಿವೇಳೆಯಲ್ಲೂ ಮೇಘಾವೃತವಾದ ದಿನಗಳಲ್ಲೂ ಚಳಿಯಿಂದ ಪಾರಾಗಲು ಸೌರಶಕ್ತಿಯನ್ನು ಕೂಡಿಡುವ ಪ್ರಯೋಗಗಳೂ ನಡೆದಿವೆ. ಮೆಸಾಚ್ಯುಸೆಟ್ಸ್ ಸಂಸ್ಥೆಯ ಮೇರಿಯೊ ಟೆಲ್‌ಕ್ಸ್ ಎಂಬ ಭೌತವಿಜ್ಞಾನಿಯು ಸೌರಶಕ್ತಿಯನ್ನು ನಿತ್ಯಜೀವನಕ್ಕೆ ಅಳವಡಿಸುವ ಪ್ರಯೋಗಗಳನ್ನು ೧೯೪೮ರಲ್ಲಿ ನಡಸಿದಳು. ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಡೋವರ್ ಎಂಬಲ್ಲಿ ತನ್ನ ವಾಸಕ್ಕೆ ಒಂದು ಹೊಸಮನೆಯನ್ನು ಕಟ್ಟಿಸಿ, ಅದರಲ್ಲಿನ ಬಿಸಿಲು ಒಲೆಗಳಿಗೆ ಸುಮಾರು ೧೫ ಸಾವಿರ ರೂಪಾಯಿಗಳನ್ನು ವೆಚ್ಚಮಾಡಿರುವಳು. ಶಾಖವನ್ನು ತಡೆಗಟ್ಟುವ ಗಾಜಿನ ತಟ್ಟೆಗಳ ಕೆಳಗೆ ೮೦೦ ಚದುರ ಅಡಿ ಕಪ್ಪು ತಗಡುಗಳ ಮಧ್ಯೆ ಗಾಳಿಯನ್ನು ಹಾಯಿಸಿ, ಇದರ ಶಾಖದಿಂದ ಸೋಡಿಯಂಸಲ್ಫೇಟ್ ಡೆಕಾಹೈಡ್ರೇಟ್ ಎಂಬ ವಸ್ತುವನ್ನು ಕರಗಿಸಿ ಶಾಖವನ್ನು ದಾಸ್ತಾನುಮಾಡುವಂತೆ ಏರ್ಪಡಿಸಲಾಗಿದೆ. ನಂತರ ಈ ವಸ್ತುವು ದ್ರವರೂಪದಿಂದ ಘನರೂಪಕ್ಕೆ ಬಂದಂತೆಲ್ಲಾ ಕೂಡಿಟ್ಟ ಶಾಖವು ಪುನಃ ಪ್ರಸಾರವಾಗುವುದು. ಈ ಪ್ರಕಾರವಾಗಿ ಕೂಡಿಟ್ಟ ರವಿಶಕ್ತಿಯನ್ನು ಸುಮಾರು

ಹತ್ತು ದಿನಗಳ ಪರ್ಯಂತ ಉಪಯೋಗಿಸಬಹುದಾದ ಕಾರಣ, ಚಳಿಗಾಲದಲ್ಲೂ ಈ ಯಂತ್ರವನ್ನೇ ನಂಬಿರಬಹುದು.

ನವದೆಹಲಿಯಲ್ಲಿರುವ ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರಿಯ "ಶಾಖ ಮತ್ತು ಶಕ್ತಿ ವಿಭಾಗ"ದಲ್ಲಿ ಅಡಿಗೆಮಾಡಲು ಸಹಾಯಕವಾಗುವ, ನಿಮ್ನದರ್ಪಣ ಯುತವಾದ ಒಂದು ಬಿಸಿಲೊಲೆಯನ್ನು ತಯಾರಿಸಿದ್ದಾರೆ. ಇದರಲ್ಲಿ ಅಡಿಗೆ ಮಾಡುವುದನ್ನು ನೋಡಿದ ಪತ್ರಿಕಾ ಪ್ರತಿನಿಧಿಗಳು ಈ ಬಿಸಿಲೊಲೆಯನ್ನು ಬಹುವಾಗಿ ಕೊಂಡಾಡಿದ್ದಾರೆ. ಈ ಬಿಸಿಲೊಲೆಗಳನ್ನು ಕಡಿಮೆ ಬೆಲೆಗೆ ತಯಾರಿಸಲು ಸಾಧ್ಯವಾಗಿ ಬಿಸಿಲಿರುವ ದಿನಗಳಲ್ಲಿ ಅಡುಗೆಗೆ ಉಪಯೋಗಿಸಬಹುದಾದರೆ, ಇವು ಜನಾದರಣೀಯ ವಾಗುವುದರಲ್ಲಿ ಸಂಶವೇ ಇಲ್ಲ. ಇಂತಹ ಬಿಸಿಲೊಲೆಗಳನ್ನೇ ಅಲ್ಲದೆ, ಸೌರಶಕ್ತಿಯಿಂದ ಕೆಲಸಮಾಡುವ ಸಣ್ಣ ಯಂತ್ರಗಳನ್ನೂ, ಮಂಜುಗೆಡ್ಡೆ ಮಾಡುವ ಸಲಕರಣಗಳನ್ನೂ, ನೀರುಕುದಿಸುವ ಕಡಾಯಿಗಳನ್ನೂ ತಯಾರಿಸುವ ಪ್ರಯತ್ನಗಳು ದೆಹಲಿಯಲ್ಲಿ ನಡೆಯುತ್ತಿವೆ. ಕಲ್ಲಿದ್ದಲು, ಎಣ್ಣೆ ಮುಂತಾದ ಪ್ರಕೃತಿದತ್ತವಾದ ಸೌಲಭ್ಯಗಳು ದಿನೇ ದಿನೇ ಕ್ಷೀಣವಾಗುತ್ತಲೂ, ಜನಬಾಹುಳ್ಯವು ದಿನೇ ದಿನೇ ವೃದ್ಧಿಹೊಂದುತ್ತಲೂ ಇರುವ ಈ ಸಮಯದಲ್ಲಿ ಸೌರಶಕ್ತಿಯನ್ನು ಸುಲಭೋಪಾಯದಲ್ಲಿ ನಿತ್ಯಜೀವನಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನಗಳು ಯಶಸ್ವಿಯಾಗಬೇಕಾದುದು ಅತ್ಯಾವಶ್ಯಕ. ಅದರಲ್ಲೂ, ಬಿಸಿಲೊಲೆಗಳು ಬಡಬಗ್ಗರ ಅಡುಗೆಗೆ ನೆರವಾದರೆ ಸೌದೆಗೆ ಅವರು ಈಗ ಪಡುತ್ತಿರುವ ಪರದಾಟ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುವ ನಿರೀಕ್ಷೆ ಇದೆ. ನಮ್ಮ ಜೀವನವನ್ನು ಸುಗಮವಾಗಿ ನಡೆಸಲು ಅನೇಕ ಸಲಕರಣಗಳು ಈಗಾಗಲೇ ವಿಜ್ಞಾನದಿಂದ ಹಸ್ತಗತವಾಗಿವೆ, ಇಂದೂ ವಿಜ್ಞಾನಿಗಳಿಗೆ ಹೆಚ್ಚು ಪ್ರೋತ್ಸಾಹ ದೊರೆತರೆ, ಅಣುಶಕ್ತಿಯನ್ನೂ ರವಿಶಕ್ತಿಯನ್ನೂ ಮಾನವನ ನಿತ್ಯಜೀವನಕ್ಕೆ ಅಳವಡಿ ಸುವ ಸಾಧನ ವಿಶೇಷಗಳು ಶೀಘ್ರದಲ್ಲೇ ಸೃಷ್ಟಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಜ್ಞಾನಸೇವೆಯಲ್ಲಿ ಸ್ವತಂತ್ರಭಾರತವು ಹೆಚ್ಚಿನ ಭಾಗವಹಿಸುವಂತಾಗ ಲೆಂದು ಹಾರೈಸುತ್ತೇನೆ.

ಡಾ|| ಎಲ್. ಸೀಬಯ್ಯ.

ಬಾಗಿಲಲ್ಲಿ

ಮೂಡಿಬಹ ನೇಸರಿನ ಜೊತೆಗೊಂದು ಹೊಸ ಚಿಂತೆ
ದಿನ ದಿನವು ಮೂಡಿ ಬಂದು,
ಸೂರ್ಯನಸ್ತಮಿಸಿದರು ಮುಳುಗದೆಯೆ, ನ—
ನ್ನೆದೆಯಲ್ಲಿ ಬೇರೂರಿನಿಂದು
ಇರುಳ ಚಿಕ್ಕೆಗಳಲ್ಲಿ ಚಾಚಿ ಸಾಸಿರ ಕುಡಿಯ
ಹಗಲಿರುಳು ಹಬ್ಬುತಿರಲು,
ಬಾಳ ಬೀದಿಯ ನಡುವೆ ಬಿದ್ದೊಂದು ಕಲ್ಲಿನೊಲು
ದಿನದ ಭಾರದ ರೋಣುಗಲ್ಲಿ ನಡಿಗೆ
ಸಿಕ್ಕು ಈ ಜೀವವೇ ತಳಮಳಿಸಿ ನಡುಗೆ,—
ನೂರು ನೋವಿನ ಕೀಟ ತಲೆಯ ಗೂಡಿನಸುತ್ತ
ವ್ಲೊರೆ ಮೊರೆದು ಕೊರೆ ಕೊರೆದು ಹಾರುತಿರಲು
ಸಂಶಯದ ಜೇಡಜಾಲದಿ ಮನಸು
ಹುಳದಂತೆ ಮಿಡುಕುತಿರಲು,
ಬಾಳ ಕಣಜದ ಕಾಳು ಇಲಿಗಳಿಗೆ ಸಾಲಾಗಿ
ಬರಿ ಜೊಳ್ಳು ಒಳಗೊಳಗೆ ಕೊಳೆಯುತಿರಲು,
ಅತೃಪ್ತಿ ದಾರಿದ್ರ್ಯ ಸಂಕಟದ ಸಾಗರದಿ
ಒಡೆದ ಬದುಕಿನ ಹಡಗು ಜೀಕುತಿರಲು
ಯಾವ ಬಿರುಗಾಳಿಯೋ ದೂರಿದಿಂದಬ್ಬರಸಿ
ಬೀಸಿ ಬರಲು,
ಯಾವುದೀ ಶುಭದಭಯವಾಣಿ ಇಂದು
ನುಡಿಯುತಿದೆ ನನ್ನ ಮನೆವಾಗಿಲಲಿ ನಿಂದು!
"ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ!"
ಏನು ನುಡಿ! ಎಂಥ ನುಡಿ!
ಅಲ್ಪತೆಗೆ ಸಿಡಿಲ ಬಡಿ.
ಯಾರು ನುಡಿಯುವರಿಂತು? ಹರಿದಾಸರು!
ಗಂಭೀರ ಮುಖಮುದ್ರೆ; ಗಾನದಾನಂದದಲಿ
ಯಾವ ಹಿರಿದನೊ ಕಂಡು, ಅದನು ಕುಡಿಯುವ ತೆರದಿ
ಅರೆಮುಗಿದ ಕಣ್ಣಿನೆವೆ; ಹೆಗಲಲಿದೆ ತಂಬೂರಿ
ತುಳುಕುತಿದೆ ಹಾಡು.
"ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ!"
ಭಿಕ್ಷಕ್ಕೆ ಬಂದವರ ಮುಂದೆ ಭಿಕ್ಷುಕನಾದೆ
ನನ್ನೆದೆಯ ಜೋಳಿಗೆಯ ನಾನೆ ತೆರೆದು
ಮುಂದೆ ನಡೆದರು ಅವರು ಹಾಡ ಸುರಿದು!

ಜಿ. ಎಸ್. ಶಿವರುದ್ರಪ್ಪ.

ಚೀಣಾದ ತತ್ವಜ್ಞಾನ

ಚೀಣರು ಸಹಜ ತಾತ್ವಿಕ ಮನೋಭಾವ ಉಳ್ಳವರೆಂದು ಹೆಸರುಪಡೆದಿದ್ದಾರೆ. ಇವರ ಸಹನಶೀಲತೆಯಿಂದ ಮತ್ತು ಸರಳಜೀವನದಿಂದ ಇವರಿಗೆ ಈ ಖ್ಯಾತಿ ಬಂದಿರಬಹುದು. ಇವರ ಮುಖ್ಯ ತತ್ವಜ್ಞಾನಿಯಾದ ಕುಂಗ್ ಫುತ್ಸು (Confucius) ಜೀವನದ ಸರಳತೆಯನ್ನು ಕುರಿತು ಹೀಗೆ ಹೇಳಿದ್ದಾನೆ:

"ಊಟಕ್ಕೆ ಒಂದು ತುತ್ತು ಅನ್ನ, ಕುಡಿಯುವುದಕ್ಕೆ ಒಂದು ಬೊಗಸೆ ನೀರು, ಒರಗುವುದಕ್ಕೆ ನನ್ನ ತೋಳಿನ ದಿಂಬು ಇಷ್ಟಿದ್ದರೆ ಸಾಕು ನಾನು ಸುಖಿ. ನೀತಿಯ ಮಾರ್ಗ ಬಿಟ್ಟು ಸಂಪಾದಿಸಿದ ಹಣವಾಗಲಿ ಹೆಸರಾಗಲಿ ಕ್ಷಣಮಾತ್ರದಲ್ಲಿ ಚದುರುವ ಮೇಘದಂತೆ ನಿರರ್ಥಕ."

ಯೇಸು ಕ್ರಿಸ್ತನು ಹುಟ್ಟುವುದರ ಮುನ್ನ ಸುಮಾರು ಐನೂರು ವರ್ಷಗಳ ಹಿಂದೆ ಕುಂಗ್ ಫುತ್ಸೆ ಈ ಮಾತನ್ನು ಹೇಳಿದನು: "ನಿನಗೆ ಇತರರು ಮಾಡಬಾರದೆಂಬುದನ್ನು ನೀನು ಇತರರಿಗೆ ಮಾಡಬೇಡ."

ಚೀಣಾದ ತತ್ವಜ್ಞಾನಿಗಳಲ್ಲಿ ಪ್ರಸಿದ್ಧರಾದವರು ಕುಂಗ್ ಫು ತ್ಸು, ಲ ವೋ ತ್ಸು, ಮ ವೊ ತ್ಸು, ಮತ್ತು ಹಾನ್ ಫೈ ತ್ಸು. 'ತ್ಸು' ಎಂದರೆ ಗುರು, ಆಚಾರ್ಯ, ಸ್ವಾಮಿ ಎಂದರ್ಥ. ಇದು ಪೂಜ್ಯಭಾವಸೂಚಕವಾದ ಪದ.

ಕುಂಗ್ ಫು ತ್ಸು ಚೀಣಾದ ಮಾನವಧರ್ಮವನ್ನು ಪ್ರತಿಪಾದಿಸಿದನು. ಮನುಷ್ಯನ ಇಲ್ಲಿನ ಮತ್ತು ಇಂದಿನ ಬಾಳನ್ನು ತಿದ್ದಲು ತೊಡಗಿದನು. ಇಡೀ ಜನತೆಗೆ ಮಾನವೀಯತೆಯ ಶಿಕ್ಷಣ ಒದಗಿಸಲು ಪ್ರಯತ್ನಪಟ್ಟನು. ಟಾ ಓ ಅಂದರೆ ಧರ್ಮಮಾರ್ಗವನ್ನು ರಾಜರುಗಳಿಗೆ ಬೋಧಿಸುವ ಸಲುವಾಗಿ ಹದಿನಾಲ್ಕು ವರ್ಷಗಳು ಸಂಸ್ಥಾನದಲ್ಲಿ ಸಂಚಾರಮಾಡಿದನು. ತನ್ನ ರಾಷ್ಟ್ರದ ಪೂರ್ವಜರಲ್ಲಿ ಶ್ರದ್ಧಾಭಕ್ತಿಯುಳ್ಳವನಾಗಿದ್ದನು. ಲೋಕದ ಹಿತಕ್ಕಾಗಿ ದುಡಿಯುವುದೇ ಧರ್ಮದ ಸಾರಸರ್ವಸ್ವವೆಂದು ಬಗೆದನು. ನಮ್ಮ ಇಂದ್ರಿಯಗಳಿಗಾಗಲಿ ಬುದ್ಧಿಗಾಗಲಿ ನಿಲುಕದ ಪಾರಲೌಕಿಕ ವಿಷಯಗಳನ್ನು ಪ್ರಸ್ತಾಪಮಾಡುವುದು ವ್ಯರ್ಥ ಕಾಲಕ್ಷೇಪವೆಂದು ಭಾವಿಸಿದ್ದನು. ಭೂತಪ್ರೇತಗಳ ವಿಚಾರದಲ್ಲಿ ಮನಸ್ಸನ್ನು ಕೊಟ್ಟು ಕಾಲ ಕಳೆಯುವುದು ತಿಳಿಗೇಡಿತನವೆಂದು ನಂಬಿದ್ದನು. ಒಬ್ಬ ಶಿಷ್ಯ ಒಂದುಸಲ ಗುರುವನ್ನು ಮೃತರಾದ ಪಿತೃಗಳನ್ನು ಆರಾಧನೆ ಮಾಡುವುದು ಹೇಗೆ ಎಂದು ಕೇಳಿದನು. ಅದಕ್ಕೆ

ಕುಂಗ್ ಫು ತ್ಸೆ ಈ ರೀತಿ ಉತ್ತರವಿತ್ತನು: "ಬದುಕಿರುವ ಮಾನವರನ್ನು ಸೇವೆ ಮಾಡುವುದು ಹೇಗೆ ಎಂಬುದನ್ನು ನಾವಿನ್ನೂ ಅರಿತಿಲ್ಲ; ಹೀಗಿರುವಲ್ಲಿ ಮೃತರಾದ ಪಿತೃಗಳನ್ನು ಸೇವೆಮಾಡುವ ಬಗೆಯನ್ನು ಹೇಗೆ ಅರಿಯಬಲ್ಲೆವು; ಜೀವನವೆಂದರೆ ಏನೆಂಬುದು ನಮಗೆ ತಿಳಿಯದು, ಹೀಗಿರುವಲ್ಲಿ ಮೃತ್ಯುವೆಂದರೇನು ಅನ್ನುವ ಪ್ರಶ್ನೆ ಏಕೆ."

ಈ ವಾಕ್ಯಗಳಿಂದ ಕುಂಗ್ ಫು ತ್ಸೆ ಐಹಿಕ ಹಿತದಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟಂತೆ ಕಾಣುವುದು.

ಕುಂಗ್ ಫು ತ್ಸುವಿನ ತತ್ತ್ವಜ್ಞಾನದಲ್ಲಿ 'ಜೇನ್' ಎಂಬ ಪದ ಬಹು ಮುಖ್ಯ ವಾದದ್ದು. 'ಜೇನ್' ಅಂದರೆ ನಿಜವಾದ ಪೌರುಷ ಅಥವಾ ಆತ್ಮಶಕ್ತಿ ಎಂದರ್ಥ. ಇದರಲ್ಲಿ ಅಡಗಿರುವ ತತ್ತ್ವವನ್ನು ಆತ್ಮನಿಗ್ರಹ ಮತ್ತು ಸಮಾಜಸಂಸ್ಕರಣ ಎಂಬ ಎರಡು ಮಾತಿನಲ್ಲಿ ಅಳವಡಿಸಬಹುದು. ತನ್ನನ್ನು ತಾನು ಗೆದ್ದಾಗ ಮಾತ್ರ ನಿಜವಾದ ಪೌರುಷಸಿದ್ಧಿಯಾಗುವುದು. ಪೌರುಷವನ್ನು ಗಳಿಸಿದ ಮನುಷ್ಯನ ಲಕ್ಷಣಗಳನ್ನು ಕುಂಗ್ ಫು ತ್ಸು ಈ ರೀತಿ ವರ್ಣಿಸಿದ್ದಾನೆ. "ಅವನು ಎಲ್ಲೇ ಇರಲಿ, ಈ ಐದು ಕಲ್ಯಾಣಗುಣಗಳುಳ್ಳವನು ಪುರುಷೋತ್ತಮನೆನಿಸಿಕೊಳ್ಳುತ್ತಾನೆ—ಶ್ರದ್ಧೆ, ಹೃದಯ ವೈಶಾಲ್ಯ, ಸತ್ಯನಿಷ್ಠೆ, ಉದ್ಯಮಶೀಲತೆ ಮತ್ತು ಸಹಿಷ್ಣುತೆ." ಇಡೀ ಮನುಷ್ಯವರ್ಗ ವನ್ನು ಪ್ರೀತಿಸುವುದರಿಂದ ಇವನು ತನ್ನ ಮನುಷ್ಯತ್ವವನ್ನು ಸಿದ್ಧಿಸಿಕೊಳ್ಳುತ್ತಾನೆ ಎಂಬುವುದು ಕುಂಗ್ ಫು ತ್ಸೆಯ ಅಭಿಪ್ರಾಯ.

ಇಂತಹ ಪುರುಷನನ್ನು ಕುಂಗ್ ಫು ತ್ಸು 'ಪುರುಷೊತ್ತಮನೆಂದು' ಕರೆಯು ತ್ತಾನೆ. "ಇವನು ದುಃಖರಹಿತವಾದ ಸೌಜನ್ಯವುಳ್ಳವನು, ಜಟಿಲ ಸಮಸ್ಯೆಗಳಿಗೆ ಸೋಲದ ವಿವೇಕವುಳ್ಳವನು, ಭಯರಹಿತವಾದ ಸಾಹಸವುಳ್ಳವನು" ಎಂದು ಹೇಳಿ ದ್ದಾನೆ. ಆರ್ಜವ ಇವನ ಸ್ವಭಾವದಲ್ಲಿ, ಔಚಿತ್ಯ ಇವನ ನಡೆನುಡಿಯಲ್ಲಿ, ನಮ್ರಭಾವ ಇವನ ಹೆಜ್ಜೆಯಲ್ಲಿ, ಸತ್ಯಸಂಧತೆ ಇವನ ಗುರಿಯಲ್ಲಿ ಎಂದು ವರ್ಣಿಸಿರುವನು. ಮಧ್ಯವಯಸ್ಕನಾದಾಗ ವ್ಯಾಜ್ಯವ್ಯವಹಾರಗಳಿಂದ ಹಿಮ್ಮೆಟ್ಟುತ್ತಾನೆ. ಮುಪ್ಪಿನಲ್ಲಿ ಚಾಪಲ್ಯವನ್ನು ತಡೆಯುತ್ತಾನೆ. ಇಂತಹ ಮಾನವೋತ್ತಮನು ಒಂಬತ್ತು ವಿಷಯ ಗಳಿಗೆ ಗಮನಕೊಡುತ್ತಾನೆ; ಕಣ್ಣುಗಳಿಂದ ನೋಡಬೇಕಾದುದನ್ನು ನೋಡುವುದು, ಕಿವಿಗಳಿಂದ ಕೇಳಬೇಕಾದುದನ್ನು ಕೇಳುವುದು, ಮುಖಭಾವದಲ್ಲಿ ಮಾಧುರ್ಯ, ನಡೆಯಲ್ಲಿ ನಯ, ನುಡಿಯಲ್ಲಿ ಸತ್ಯ, ವ್ಯಾಪಾರ ವ್ಯವಹಾರದಲ್ಲಿ ಸತ್ಯಸಂಧತೆ, ಸಂಶಯಚಿತ್ತನಾದಾಗ ತಿಳಿದವರನ್ನು ಆಶ್ರಯಿಸುವುದು, ಕೋಪಬಂದಾಗ ಅದರ ಪರಿಣಾಮವನ್ನು ಕುರಿತು ಚಿಂತಿಸುವುದು, ಲಾಭಪಡೆಯುವಾಗ ನ್ಯಾಯಾನ್ಯಾಯ

ವಿವೇಚನೆ—ಇವು ಗುಣವಂತನ ಲಕ್ಷಣಗಳು. ಇವನ ಸಂತೋಷವೆಲ್ಲಾ ಇತರರ ಗುಣಕಥನದಲ್ಲಿ ಸಜ್ಜನರ ಸಹವಾಸದಲ್ಲಿ. ತನ್ನ ನೀತಿಯನ್ನು ಕಾಪಾಡಿಕೊಳ್ಳುವುದಕ್ಕಾಗಿ ತನ್ನ ಆಸ್ತಿ ಅಂತಸ್ತುಗಳನ್ನಾದರೂ ಬಿಟ್ಟುಕೊಡಲು ಸಿದ್ಧನಾಗಿರುತ್ತಾನೆ. ಇದಕ್ಕಾಗಿ ಬಡತನವನ್ನಾದರೂ ಸಹಿಸಬಲ್ಲವನಾಗುತ್ತಾನೆ. ಇವನು ತನಗೆ ಅನ್ಯಾಯ ಮಾಡಿದವರಿಗೂ ಕೇಡನ್ನು ಬಯಸುವುದಿಲ್ಲ. ಗುರುಹಿರಿಯರಲ್ಲಿ ಭಕ್ತಿಯುಳ್ಳವನಾಗುವನು, ಅವರಲ್ಲಿ ಎಂದಿಗೂ ಅವಿನೀತನಾಗಿ ನಡೆದುಕೊಳ್ಳುವುದಿಲ್ಲ. ಇದು ಇವನ ಪರಿಪೂರ್ಣ ಸ್ವಭಾವ.

ಕುಂಗ್‌ಫುತ್ಸುವಿನ ತತ್ತ್ವಜ್ಞಾನದ ಮೂಲಸೂತ್ರ ಮಾನವನೀತಿ. ಇದನ್ನೇ ಕುಂಗ್‌ಫುತ್ಸು ಸಾಮರಸ್ಯವೆಂತಲೂ ಮಾಧ್ಯಮಿಕ ತತ್ವವೆಂತಲೂ ಕರೆದಿದ್ದಾನೆ. ಇದಕ್ಕೆ **ಚುಂಗ್‌ಯುಂಗ್** ಎಂದು ಹೆಸರು. ಇದರ ಶಬ್ದಾರ್ಥ ಸುವರ್ಣ ಮಧ್ಯಮ (Golden Mean) ಎಂದು, ಈ ಸುವರ್ಣಶ್ರೇಷ್ಠವಾದ ಮಧ್ಯಮಮಾರ್ಗವನ್ನು ಬಿಟ್ಟು ನಡೆಯುವುದು ಅತಿವರ್ತನೆ ಅಥವಾ ಪ್ರಮಾದವೆನಿಸಿಕೊಳ್ಳುವುದು. ನಮ್ಮ ಜೀವನದ ಧ್ಯೇಯ ನಮ್ಮ ಸ್ವಭಾವದಲ್ಲಿ ಸಾಮರಸ್ಯವನ್ನು ಏರ್ಪಡಿಸಿಕೊಳ್ಳುವುದಲ್ಲದೆ ನಮಗೂ ಬಾಹ್ಯಪ್ರಪಂಚಕ್ಕೂ ಸಾಮರಸ್ಯವನ್ನು ಏರ್ಪಡಿಸಿಕೊಳ್ಳುವುದು. ಸಾಮರಸ್ಯ ನಮ್ಮೆಲ್ಲರಲ್ಲಿಯೂ ಅವ್ಯಕ್ತವಾಗಿ ಉಳಿದಿರುವ ಆತ್ಮಸಂಪತ್ತು. ಇದನ್ನು ವಿಕಾಸಗೊಳಿಸುವುದೇ ನೀತಿಯ ಅಥವಾ ಶೀಲದ ಕೆಲಸ. ಸಾಮರಸ್ಯ ಸಮಾಜದ ಧಾರಣೆಗೆ ಅವಶ್ಯಕವಾದದ್ದರಿಂದ ಇದನ್ನು ಸಮಾಜಧರ್ಮ ಅಥವಾ ಸಮಷ್ಟಿಧರ್ಮ ಎಂದು ಕರೆಯಬಹುದು. ಇದು ಚೀಣಾದ ತತ್ವಜ್ಞಾನದಲ್ಲಿ 'ಲಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಇದು ಸಂಸ್ಕೃತದ 'ಧರ್ಮ' ಅನ್ನುವ ಮಾತಿಗೆ ಸರಿಹೊಂದುವ ಪದ, ಸಮಾಜದಲ್ಲಿ ಧರ್ಮವು ಐದು ರೀತಿಯ ರೂಪವನ್ನು ತಾಳುವುದು. ಒಂದು ಸಂತತಿ ಧರ್ಮ, ತಂದೆ ಮಕ್ಕಳಲ್ಲಿ ಮೂಡಿರಬೇಕಾದ ಧರ್ಮ. ಎರಡನೆಯದು ರಾಜಧರ್ಮ, ರಾಜನಿಗೂ ಪ್ರಜೆಗಳಿಗೂ ಇರಬೇಕಾದ ಸಂಬಂಧ. ಮೂರನೆಯದು ವಿವಾಹಧರ್ಮ, ಸತಿಪತಿಯರು ಪರಸ್ಪರ ನಡೆದುಕೊಳ್ಳಬೇಕಾದ ರೀತಿ. ನಾಲ್ಕನೆಯದು ವಯೋಧರ್ಮ, ಅಂದರೆ ಹಿರಿಯರು ಕಿರಿಯರ ವಿಷಯದಲ್ಲಿ ನಡೆದುಕೊಳ್ಳಬೇಕಾದ ರೀತಿ ಮತ್ತು ಕಿರಿಯರು ಹಿರಿಯರಲ್ಲಿ ನಡೆದುಕೊಳ್ಳಬೇಕಾದ ರೀತಿ. ಕಡೆಯ ಧರ್ಮ ಸ್ನೇಹಧರ್ಮ, ಸ್ನೇಹಿತರಲ್ಲಿ ಪರಸ್ಪರ ಆಚರಣೆ. ಈ ಪಂಚವಿಧದ ಸಂಬಂಧವು ಸಾಮರಸ್ಯ ಪೂರ್ಣವಾದರೆ ಸಮಾಜದ ಸ್ವಾಸ್ಥ್ಯವೇರ್ಪಡುವುದು. ವ್ಯಕ್ತಿಗಳಿಲ್ಲದೆ ಸಮಾಜವಿಲ್ಲ. ವ್ಯಕ್ತಿಗಳಲ್ಲಿ ಹುಟ್ಟುವ ಪರಸ್ಪರ ಸಂಬಂಧಗಳ ತಂತುಗಳಿಂದಲೇ ಸಮಾಜವೆಂಬ ವಸ್ತ್ರ ನೇಯಲ್ಪಟ್ಟಿದೆ. ಈ ತಂತುಗಳೆಲ್ಲವೂ ಒಂದೇ ಬಣ್ಣದವಲ್ಲ, ಆದರೂ ನೇಯುಗೆಯ

ಕೆಲಸದಿಂದ ವೈವಿಧ್ಯದಲ್ಲಿ ಸಾಮರಸ್ಯವೇರ್ಪಡುತ್ತದೆ. ಪರಸ್ಪರ ವಿರೋಧವಿಲ್ಲದೆ ಹಾರ್ದಿಕವಾಗಿ ಸಮಾಜದಲ್ಲಿ ನೆಲಸಿರುವ ಸಮರಸವನ್ನು ಕದಡಿದರೆ ವಿರಸ, ವಿರೋಧ, ಆಗ್ರಹ, ವಿಗ್ರಹಗಳು ಏರ್ಪಡುವುವು. ಈ ರೀತಿಯ ಪರಿಣಾಮವನ್ನೂ ಸಂತತ ವಾಗಿ ತಡೆಗಟ್ಟುವುದೇ ವಿವೇಕದ ಮಾರ್ಗ (ಲಾವೋ) ಮತ್ತು ವಿವೇಕಿಗಳ ಧರ್ಮ (ಲಿ).

ಸಮಾಜದ ಸಂಸ್ಕರಣವು ವ್ಯಕ್ತಿಯ ಉನ್ನತಿಯಿಂದ ಮಾತ್ರ ಸಾಧ್ಯವೆಂದು ಕುಂಗ್ ಫುತ್ಸೆ ನಂಬಿದ್ದನು. ಈ ವಿಷಯದಲ್ಲಿ ಕುಂಗ್ ಫುತ್ಸುವಿನ ಸಿದ್ಧಾಂತವನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ:

"ಲೋಕದ ಹಿತವನ್ನು ಬಯಸಿದ ನಮ್ಮ ಪೂರ್ವಜರು ರಾಷ್ಟ್ರವನ್ನು ಕ್ರಮ ಪಡಿಸಲು ತೊಡಗಿದರು. ರಾಷ್ಟ್ರದ ಉನ್ನತಿ ಗಳಿಸಬೇಕಾದರೆ ಕುಟುಂಬಜೀವನ ಉತ್ತಮಗೊಳ್ಳಬೇಕೆಂಬುದನ್ನು ಅರಿತರು. ಕುಟುಂಬಜೀವನ ಉತ್ತಮಗೊಳ್ಳಬೇಕಾ ದರೆ ವ್ಯಕ್ತಿಜೀವನ ಉತ್ತಮಗೊಳ್ಳಬೇಕೆಂಬುದು ವ್ಯಕ್ತವಾಯಿತು. ವ್ಯಕ್ತಿಜೀವನ ವನ್ನು ಉತ್ತಮಗೊಳಿಸಬೇಕೆಂದು ಬಯಸುವವರಲ್ಲಿ ಹೃದಯ ಪರಿವರ್ತನೆಯಾಗ ಬೇಕೆಂಬುದು ಸಿದ್ಧವಾಯಿತು ಹೃದಯ ಪರಿವರ್ತನೆಯಾಗಬೇಕಾದರೆ ಚಿತ್ತಶುದ್ಧಿ ಯಾಗಬೇಕಾಗುವುದು. ಚಿತ್ತಶುದ್ಧಿಗೆ ಪ್ರಯತ್ನಮಾಡುವವರು ವಿದ್ಯಾವಂತರಾಗ ಬೇಕಾಗುವುದು. ವಿದ್ಯೆಯಿಂದ ಪ್ರಪಂಚದ ಯಥಾರ್ಥಜ್ಞಾನ ದೊರಕುವುದು. ಹೀಗೆ ಯಥಾರ್ಥಜ್ಞಾನದಿಂದ ವಿದ್ಯಾಭಿವೃದ್ಧಿ, ವಿದ್ಯಾಭಿವೃದ್ಧಿಯಿಂದ ಚಿತ್ತಶುದ್ಧಿ, ಚಿತ್ತ ಶುದ್ಧಿಯಿಂದ ಹೃದಯಪರಿವರ್ತನೆ, ಹೃದಯಪರಿವರ್ತನೆಯಿಂದ ವ್ಯಕ್ತಿವಿಕಾಸ, ವ್ಯಕ್ತಿ ವಿಕಾಸದಿಂದ ಕುಟುಂಬದ ಉದ್ಧಾರ, ಕುಟುಂಬದ ಉದ್ಧಾರದಿಂದ ರಾಷ್ಟ್ರೋನ್ನತಿ, ರಾಷ್ಟ್ರೋನ್ನತಿಯಿಂದ ವಿಶ್ವಶಾಂತಿ" ಇದು ಕುಂಗ್ ಫುತ್ಸೆಯ ಅನುಷ್ಠಾನಾತ್ಮಕ ಕಾರ್ಯಕ್ರಮ.

ಲವೋತ್ಸೆ ಕುಂಗ್‌ಫುತ್ಸೆವಿನ ಸಮಕಾಲೀನ ತಾತ್ವಿಕ. ಕ್ರಿ.ಪೂ. ಆರನೆಯ ಶತಮಾನ. ಇವನ ತತ್ವಜ್ಞಾನಕ್ಕೆ 'ಟಾವೋ' ಎಂದು ಹೆಸರು. 'ಟಾವೋ' ಅಂದರೆ ಮಾರ್ಗ. ಕುಂಗ್ ಫುತ್ಸೆಯೂ ತನ್ನ ಮಾರ್ಗವನ್ನು ಟಾವೋ ಎಂದು ಕರೆದಿದ್ದನು. ಆದರೆ ಕುಂಗ್‌ಫುತ್ಸೆಯ ಮಾರ್ಗಕ್ಕೂ ಲವೋತ್ಸೆಯ ಮಾರ್ಗಕ್ಕೂ ವ್ಯತ್ಯಾಸವಿದೆ. ಕುಂಗ್‌ಫುತ್ಸೆಯ ಮಾರ್ಗವನ್ನು ಪ್ರವೃತ್ತಿಮಾರ್ಗ ಎಂದೂ ಲವೋತ್ಸೆಯ ಮಾರ್ಗ ವನ್ನೂ ನಿವೃತ್ತಿಮಾರ್ಗವೆಂದೂ ಕರೆಯಬಹುದು.

ಲವೋತ್ಸೆಯ ತತ್ವಜ್ಞಾನದಲ್ಲಿ 'ಸರಳತೆ'ಗೆ ಮುಖ್ಯಸ್ಥಾನ ಕೊಟ್ಟಿದೆ. ಸರಳತೆ ಅಂದರೆ ಅರಿಷಡ್ವರ್ಗಗಳಿಂದ ದೂರವಾಗಿರುವುದು, ಕಾಮನೆಗಳನ್ನು ಆದಷ್ಟು

ಕಡಮೆಮಾಡಿಕೊಳ್ಳುತ್ತಾ ಹೋಗುವುದು, ಕಪಟ ರಹಿತನಾಗಿ ಬಾಳುವುದು ಟಾವೋ ತತ್ತ್ವದ ಒಂದು ಲಕ್ಷಣ.

'ವೂವೀ' ಅನ್ನುವುದು ಮತ್ತೊಂದು ತತ್ವ. ಇದನ್ನು ನೈಷ್ಕರ್ಮ್ಯ ತತ್ವ ಅಂದು ಕರೆಯಬಹುದು, ಇದು ಗೀತೆಯ 'ಕರ್ಮಣ್ಯಕರ್ಮ ಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ| ಸಬುದ್ಧಿಮಾನ್ ಮನುಷ್ಯೇಷು ಅಕರ್ಮಣಿ ಚ ಕರ್ಮಯಃ" ತಾತ್ಪರ್ಯಕ್ಕೆ ಸರಿಹೊಂದುವ ಸಿದ್ಧಾಂತ. ಕುಂಗ್‌ಫುತ್ಸೆಯ ತತ್ವಕ್ಕೂ ಲವೋತ್ಸೆಯ ತತ್ವಕ್ಕೂ ಅನೇಕ ವ್ಯತ್ಯಾಸಗಳಿವೆ. ಕುಂಗ್‌ಫುತ್ಸೆಗೆ ಎಲ್ಲದರ ಮಾನದಂಡ ಮಾನವ, ಲವೋತ್ಸೆಗೆ ಪ್ರಕೃತಿ. ಮಾನವನ ಜೀವನ ಸುಖಮಯವಾಗಬೇಕಾದರೆ ಪ್ರಕೃತಿಯಂತೆ ಬಾಳುವುದು. ನಿಸರ್ಗನಿಯಮಗಳನ್ನು ಅನುಸರಿಸುವುದು. ನಿಸರ್ಗ ಎಲ್ಲದರ ಜನನಿ, ಸರ್ವವ್ಯಾಪಿತತ್ವ.

ನಿಸರ್ಗದಂತೆ ನಮ್ಮ ಬಾಳಾಗಬೇಕು. ನಿಸರ್ಗದ ಬಾಳು ಬಾಳುವುದೆಂದರೆ ನೀರಿನಂತೆ ಬಾಳುವುದು. ನೀರು ಘಟ್ಟಿಯಲ್ಲ, ಮೃದು, ಹಗುರ, ಆದರೂ ಎಂತಹ ಘಟ್ಟಿಯಾದ ಪದಾರ್ಥವನ್ನೂ ಕರಗಿಸಬಲ್ಲ ಶಕ್ತಿಯುಳ್ಳದ್ದು. ಮಕ್ಕಳಂತೆ ಮನಸ್ಸನ್ನು ಮಾಡಿಕೊಳ್ಳುವುದು ಮಾನವನ ಗುರಿಯಾಗಬೇಕು. ಟಾವೋ ಒಂದು, ಇದು ಎರಡಾಯಿತು. ಎರಡು ಅನೇಕವಾಯಿತು. ಎಲ್ಲ ಪದಾರ್ಥಗಳೂ ಪ್ರಕೃತಿ ಪುರುಷ ಸಂಯೋಗದಿಂದ ಉತ್ಪತ್ತಿಯಾಗುತ್ತವೆ. ಪ್ರಕೃತಿತತ್ವ 'ಯಿನ್', ಪುರುಷತತ್ವ ಯಾಂಗ್—ಇವುಗಳ ಸಂಯೋಗದಿಂದ ನೂತನ ಪ್ರಾಣೋತ್ಪತ್ತಿ 'ಚೀ.' ಪುರುಷ ಪ್ರಕೃತಿ ತತ್ವಗಳಿಂದ ಉತ್ಪತ್ತಿಯಾದ ಸಾಮರಸ್ಯವನ್ನು ಅರಿಯುವುದೇ ಜ್ಞಾನವೆನಿಸಿಕೊಳ್ಳುವುದು. ತನ್ನತನವನ್ನಳಿದು ತನ್ನನ್ನು ಟೊಳ್ಳಾಗಿ ಮಾಡಿಕೊಳ್ಳಬೇಕು. ಇದು ಆಕಿಂಚನ್ಯ ಎನ್ನಿಸಿಕೊಳ್ಳುವುದು. ಇದ್ದುದರಲ್ಲಿ ತೃಪ್ತಿ ನಿರಾಶೆಗಳಿಂದಲೇ ಸುಖ ಪ್ರಾಪ್ತಿ. ಜೀವನದಲ್ಲಿ ಅನಾಸಕ್ತರಾಗಿ ಯಾರು ಬಾಳಬಲ್ಲರೋ ಅವರ ಜೀವನವೇ ಪರಿಪೂರ್ಣವಾದದ್ದು.

ಮೋತ್ಸು ಕುಂಗ್‌ಪುತ್ಸೆಯಂತೆ ಮಾನವನ ಐಹಿಕ ಸುಖಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟನು. 'ಲೋಕಸಂಗ್ರಹ' (Welfare of the World) ಇವನ ಧ್ಯೇಯ. ಯಾವ ತತ್ವವನ್ನಾದರೂ ಅದರ ಲೌಕಿಕ ಪ್ರಯೋಜನದಿಂದ ಅಳೆಯಬೇಕೆಂಬುದು ಇವನ ತತ್ವ. ಮತಾಚಾರ, ಕಲೋಪಾಸನೆ ಇವುಗಳಿಗೆ ಲೌಕಿಕವಾದ ಪ್ರಯೋಜನವಿಲ್ಲದಿದ್ದರೆ ಅವನ್ನು ಬಿಟ್ಟುಬಿಡಬಹುದೆಂದು ವಾದಿಸಿದನು. ಐಹಿಕ ಪ್ರಯೋಜನದೃಷ್ಟಿಯಿಂದ ಅವರ ಕರ್ಮಗಳಿಗಾಗಿ ಜನರು ಹಣವನ್ನು ವ್ಯಯಮಾಡುವುದು ಅನುಚಿತವೆಂದು ವಾದಿಸಿದನು. ಯಾವ ತತ್ವವನ್ನಾದರೂ ಮೂರು ವಿಧವಾದ

ಪರೀಕ್ಷೆಗೆ ಒಳಪಡಿಸಬೇಕೆಂದನು: ಇದರ ಆಧಾರವೇನು, ಇದು ಪರೀಕ್ಷೆಗೆ ಒಳಪಡಬಲ್ಲದೇ, ಇದರ ಪ್ರಾಯೋಗಿಕ ಪ್ರಯೋಜನವೇನು ? ಇದರ ಆಧಾರ ಅನುಭವವಾಗಿರಬೇಕು. ನಮ್ಮ ಅನುಭವ ಅಥವಾ ನಮ್ಮ ಪೂರ್ವಜರ ಅನುಭವ ಆಗಿರಬೇಕು. ಇದು ಇಂದ್ರಿಯಗಳಿಗೆ ಗೋಚರವೇ ಎಂದು ಪರೀಕ್ಷಿಸುವುದು ಎರಡನೆಯದು. ಇದನ್ನು ಸಮಾಜದ ಕಟ್ಟಳೆಗಳಿಂದ ಮತ್ತು ರಾಷ್ಟ್ರದ ಕಾನೂನುಗಳಿಂದ ಕಾರ್ಯಗತಮಾಡುವುದು. ಜನ ತಮ್ಮ ಜೀವನದಲ್ಲಿ ನಡೆಯುವ ಘಟನೆಗಳನ್ನು ವಿಧಿಯ ವಿಲಾಸವೆನ್ನುತ್ತಾರೆ. ವಿಧಿಯನ್ನು ಯಾರಾದರೂ ಕಣ್ಣಾರ ಕಂಡಿದ್ದಾರೆಯೇ ? ಇಲ್ಲ. ಆದ್ದರಿಂದ ಅದು ಸತ್ಯವಲ್ಲ. ಜನರ ಅನುದಿನದ ಬಾಳಿಗೆ ಒದಗದ ಸಂಗೀತವಾಗಲಿ ಸಾಹಿತ್ಯವಾಗಲಿ ಪ್ರಯೋಜನವಿಲ್ಲವೆಂದು ಮೋತ್ಸು ಸಾರುತ್ತಾನೆ. ಒಳ್ಳೆಯದು ಜನರಿಗೆ ಸುಖವನ್ನುಂಟುಮಾಡುವುದು ; ಕೆಟ್ಟದ್ದು ಜನರಿಗೆ ದುಃಖವನ್ನುಂಟುಮಾಡಬಲ್ಲದು. ಎಲ್ಲರನ್ನೂ ಪ್ರೀತಿಯಿಂದ ಕಾಣುವುದು ಅವಶ್ಯಕ. ಮೋತ್ಸುವಿನ ಕಾರಣವೇನೆಂದರೆ, ನಾವು ಎಲ್ಲರನ್ನೂ ಪ್ರೀತಿಯಿಂದ ಕಂಡರೆ ಅವರು ನಮ್ಮನ್ನು ಪ್ರೀತಿಯಿಂದ ಕಾಣುತ್ತಾರೆ. ಯುಕ್ತವಾದದ್ದು ಮತ್ತು ಅಯುಕ್ತವಾದದ್ದೆಂಬುವುದನ್ನು ತೀರ್ಮಾನಿಸಲು ಲೋಕಾನುಭವ ಒಂದೇ ಪ್ರಮಾಣ ಎಂದು ಮೋತ್ಸು ತೀರ್ಮಾನಕ್ಕೆ ಬಂದನು.

ಚೀಣಾದ ತತ್ವಜ್ಞಾನದಲ್ಲಿ ಮತ್ತೊಂದು ಮುಖ್ಯವಾದ ದರ್ಶನ 'ಜೆನ್' ಬೌದ್ಧ ಸಿದ್ಧಾಂತ. ಜೆನ್ ಚೀನಾ ಭಾಷೆಯ 'ಛಾನ್' ಎಂಬ ಮಾತಿನಿಂದ ಹುಟ್ಟಿದೆ. ಛಾನ್ ಅಂದರೆ ಧ್ಯಾನ. ಬೋಧಿಸತ್ವದ ಸಾಕ್ಷಾತ್ಕಾರ. ಇದು ಧ್ಯಾನದಿಂದ ಸಾಧ್ಯವಾದ—ಬುದ್ಧತ್ವವನ್ನೈದುವುದು. ಇದರ ಪ್ರಭಾವ ಚೀಣರ ಮೇಲೆ ಚಿರಸ್ಥಾಯಿಯಾಗಿ ಉಳಿಯಲಾರದಾಯಿತು.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಚೀಣದ ತತ್ವಜ್ಞಾನದಲ್ಲಿ ಹೊಸ ವಿಚಾರವಾಹಿನಿಗಳನ್ನು ಕಾಣುತ್ತೇವೆ.

ಮೊತ್ಸೆತುಂಗನ ಪ್ರಾಯೋಗಿಕವಾದವು ಮಾರ್ಕ್ಸ್‌ವಾದದ ಪ್ರಭಾವದಿಂದ ಉತ್ಪತ್ತಿಯಾದುದೆಂದು ಹೇಳಲು ಸಂಶಯವಿಲ್ಲ.

ಎಂ. ಯಾಮುನಾಚಾರ್ಯ.

ಕಾವ್ಯಾವಲೋಕನ

ಮಕ್ಕಳ ಸಚಿತ್ರ ಭಾರತ—ಅನುವಾದಿಕೆ : ಶ್ರೀಮತಿ ಎಚ್. ವೈ. ಸರಸ್ವತಮ್ಮ ; ಪ್ರಕಾಶಕರು : ಮೈಸೂರು ಮಕ್ಕಳ ಕೂಟ, ಲಕ್ಷ್ಮೀಪುರಂ, ಮೈಸೂರು ; ಬೆಲೆ, ರೂ. ೩-೮-೦.

ಮಕ್ಕಳ ಮನಸ್ಸು ಮೇಣದ ಮುದ್ದೆಯಂತೆ! ಅದಕ್ಕೆ ಸುಲಭವಾಗಿ ಯಾವ ಆಕಾರವನ್ನಾದರೂ ಕೊಡಬಹುದು. ಸರಿಯಾದ ಸಂಸ್ಕಾರ ಕೊಟ್ಟು ಅದನ್ನು ಉತ್ತಮ ವಿಗ್ರಹವನ್ನಾಗಿಸುವುದು ಸಮಾಜದ ಮುಖಂಡರ ಕರ್ತವ್ಯ. ಈ ಕೆಲಸದಲ್ಲಿ ಸಾಹಿತ್ಯ ಅವರಿಗೆ ತುಂಬಾ ನೆರವು ನೀಡಬಲ್ಲುದು. ಕತೆಗಳ ರೂಪದಲ್ಲಿ ಒಳ್ಳೆಯ ತತ್ವಗಳನ್ನು ನಯವಾಗಿ ಬೋಧಿಸಿ ಮಕ್ಕಳಿಗೇ ಅರಿವಾಗದ ರೀತಿಯಲ್ಲಿ ಅವರನ್ನು ದುರ್ಮಾರ್ಗದಿಂದ ತಪ್ಪಿಸಿ ಸನ್ಮಾರ್ಗಕ್ಕೆ ತರಬಹುದು. ಪಂಚತಂತ್ರವೇ ಮೊದಲಾದ ಕಥಾಸಂಗ್ರಹಗಳನ್ನೂ ಅವುಗಳಿಂದ ಸಮಾಜಕ್ಕೊದಗಿರುವ ಸತ್ಪರಿಣಾಮಗಳನ್ನೂ ಗಮನಿಸಿದವರಿಗೆ ಈ ಅಂಶ ವಿದಿತವಾದೀತು.

ಬೆಳೆಯ ಸಿರಿ ಮೊಳೆಯಲ್ಲೇ ಸೂಚಿತವಾಗುತ್ತದೆ! ಆ ಮೊಳೆಯನ್ನು ಸರಿಯಾಗಿ ನೀರು ಗೊಬ್ಬರಗಳನ್ನು ಹಾಕಿ ಪೋಷಿಸಿದಲ್ಲದೆ ಒಳ್ಳೆಯ ಬೆಳೆಯನ್ನು ನಿರೀಕ್ಷಿಸುವುದಕ್ಕೆ ಸಾಧ್ಯವೆ? ಹಾಗೆಯೇ ಮಕ್ಕಳಿಂದ ಮುಂದೆ ಒಳ್ಳೆಯದನ್ನು ನಿರೀಕ್ಷಿಸುವವರು ಒಳ್ಳೆಯ ಆಹಾರದಿಂದ ಅವರ ದೇಹಪೋಷಣೆ ಮಾಡುವಂತೆಯೇ ಅವರಿಗೆ ಸರಿಯಾದ ಸನ್ನಿವೇಶವನ್ನು ಕಲ್ಪಿಸಿ ಅವರ ಮನಸ್ಸಿನ ಬೆಳವಣಿಗೆಗೂ ಬೇಕಾದ ಆಹಾರವನ್ನು ಒದಗಿಸಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಾಗದು. ಆದ್ದರಿಂದ ಮಕ್ಕಳನ್ನು ಸಣ್ಣ ವಯಸ್ಸಿನಿಂದಲೇ ಸನ್ಮಾರ್ಗದೆಡೆಗೆ ಬಾಗಿಸಬೇಕು. ಹಾಗೆ ಬಾಗಿಸುವುದಕ್ಕೆ ಇರುವ ಸುಲಭವಾದ ಸಾಧನವೇ ಕತೆ.

ಕತೆಯೆಂದರೆ ಸಣ್ಣ ಮಕ್ಕಳಿಗೆ ಪ್ರಾಣ. ಅದು ಇಂದ್ರಜಾಲದಂತೆ ಎಂತಹ ದುಷ್ಟಮಗುವನ್ನಾದರೂ ಆಕರ್ಷಿಸಿ ತನ್ನ ಹಿಡಿತದಲ್ಲಿಟ್ಟು, ಒಂದು ಕಡೆಯಿಂದ ತನ್ನಲ್ಲಿ ಬರುವ ಘಟನೆಗಳನ್ನೂ ವ್ಯಕ್ತಿಗಳನ್ನೂ ತೋರಿಸಿ ಮರುಳುಮಾಡಿ, ಅದರ ಅಂತರಂಗಕ್ಕೆ—ನೋಡು ಇವನು ಕೆಟ್ಟವನು, ಇಂತಹ ಕೆಟ್ಟ ಕೆಲಸವನ್ನು ಮಾಡಿದ, ಅದಕ್ಕೆ ಇಂತಹ ಕಷ್ಟವನ್ನನುಭವಿಸಿದ ; ಇವನು ಒಳ್ಳೆಯವನು, ಒಳ್ಳೆಯ ಕೆಲಸವನ್ನು ಮಾಡಿದ, ಆದರಿಂದ ಸುಖವನ್ನನುಭವಿಸಿದ ಎಂದು ಬೋಧಿಸುತ್ತದೆ. ಖಾಲಿ ಹಾಳೆಯಂತಿರುವ ಮಗುವಿನ ಮನಸಿನ ಮೇಲೆ ಆ ಕತೆ ಮುದ್ರಿತವಾಗಿ ಅಚ್ಚಳಿಯದೆ

ಉಳಿಯುತ್ತದೆ. ಮುಂದೆ ಆ ಮಗು ಯಾವ ಕೆಲಸವನ್ನು ಮಾಡಹೋದರೂ ಆ ಕತೆ ಪ್ರೇರಕವಾಗಿ ನಿಂತು ಈ ಮಾರ್ಗವನ್ನು ಹಿಡಿ, ಇದು ಸರಿಯಾದುದು ಎಂದು ಸೂಚಿಸುತ್ತದೆ. ಅದರಿಂದ ಮಗುವಿಗೆ ಮೊದಲಿನಿಂದಲೇ ಇದು ಒಳ್ಳೆಯದು ಇದು ಕೆಟ್ಟುದು ಎಂಬ ವಿವೇಚನಾಶಕ್ತಿ ಬರುತ್ತದೆ. ಭಾವೀಜನಾಂಗವಾದ ಮಕ್ಕಳಿಗೆ ಈ ಬಗೆಯ ವಿವೇಚನೆ ಅತ್ಯಾವಶ್ಯಕ.

ಜಗದ್ವಿಖ್ಯಾತವಾದ ರಾಮಾಯಣ ಮಹಾಭಾರತಗಳು ನಮ್ಮ ದೇಶದ ಎರಡು ಯುಗಗಳ ಸಂಸ್ಕೃತಿಯನ್ನು ಸಾರುವ ಎರಡು ಮಹಾ ಕತೆಗಳು, ಅಲ್ಲಿ ಬರುವ ಅಸಂಖ್ಯಾತ ಪಾತ್ರಗಳು ನಮ್ಮ ಪ್ರತಿನಿಧಿಗಳೇ. ರಾಮ, ಲಕ್ಷ್ಮಣ, ಭರತ, ವಿಭೀಷಣ, ಸೀತೆ, ಊರ್ಮಿಳೆ; ಭೀಷ್ಮ, ಧರ್ಮರಾಯ, ಕರ್ಣ, ಭೀಮ, ಅರ್ಜುನ, ಅಭಿಮನ್ಯು, ಏಕಲವ್ಯ, ಕೃಷ್ಣ—ಈ ಮೊದಲಾದ ವ್ಯಕ್ತಿಗಳು ನಮಗೆ ಆದರ್ಶಪ್ರಾಯರು. ಮನುಷ್ಯನು ದುರ್ಗುಣವನ್ನು ದಮನಮಾಡಿ ಸದ್ಗುಣವನ್ನು ವೃದ್ಧಿಗೊಳಿಸಿಕೊಳ್ಳುವುದೆಂತು ಎಂಬುದನ್ನು ಈ ವ್ಯಕ್ತಿಗಳ ಚಾರಿತ್ರ್ಯವನ್ನು ಕಾಣುವುದರಿಂದ ಅರಿತುಕೊಳ್ಳಬಹುದು. ಹಾಗೆಯೇ ರಾವಣ, ಕುಂಭಕರ್ಣ, ದುರ್ಯೋಧನ, ದುಶ್ಶಾಸನಾದಿಗಳ ನಡತೆಯನ್ನು ಕಾಣುವುದರಿಂದ ನಮ್ಮಲ್ಲಿರುವ ದುರ್ಗುಣವನ್ನು ದಮನಮಾಡದಿದ್ದಲ್ಲಿ ನಮಗೂ ವಿನಾಶವೊದಗುತ್ತದೆಂದು ತಿಳಿಯಬಹುದು. ತಲ್ಲೀನರಾಗಿ ಇಂತಹ ಕತೆಯನ್ನು ಓದುತ್ತಿದ್ದಂತೆಯೇ ಅಲ್ಲಿ ಬರುವ ವ್ಯಕ್ತಿಗಳ ಜೀವನ ಚಿತ್ರವೂ ಘಟನೆಗಳೂ ನಮ್ಮ ಮನದಲ್ಲಿ ನಾಟಿ ಆಜೀವಪರ್ಯಂತವೂ ನಾವು ಕಂಡ ದುಷ್ಟರ ಅವನತಿ ಸತ್ಪುರುಷರ ಮೇಲ್ಮೆಗಳು ಆಗಾಗ್ಗೆ ನಮ್ಮನ್ನೆಚ್ಚರಿಸುತ್ತಿರುತ್ತವೆ. ಮಕ್ಕಳ ವಿಷಯದಲ್ಲಂತೂ ಇದು ಅದ್ಭುತ ಪರಿಣಾಮಕಾರಿ.

ಮಹಾಭಾರತದ ಕಥೆಯನ್ನು ಹದವಾಗಿ, ಸ್ವಾರಸ್ಯವಾಗಿ ಸಂಗ್ರಹಿಸಿ ಮುದ್ದಾದ ಅಕ್ಷರಗಳಲ್ಲಿ ಮುದ್ರಿಸಿ, ಸನ್ನಿವೇಶಕ್ಕೊಪ್ಪುವ ಚಿತ್ತಾಕರ್ಷಕ ಚಿತ್ರಗಳೊಡನೆ 'ಮೈಸೂರು ಮಕ್ಕಳ ಕೂಟ'ದವರು ಪ್ರಕಟಿಸಿರುವ 'ಮಕ್ಕಳ ಸಚಿತ್ರಭಾರತ'ದಂತಹ ಪುಸ್ತಕವು ಇಂದು ಮಕ್ಕಳ ಕೈ ಸೇರಿರುವುದು ಅತ್ಯಂತ ಸಂತೋಷದ ಸಂಗತಿ. ಇದರ ಮೂಲಕರ್ತೃವಾದ ಶ್ರೀ ಮಾಗಂಟಿ ಬಾಪಿನೀಡು ಅವರು ಸರ್ವದಾ ಅಭಿನಂದನೀಯರು. ತೆಲುಗಿನಿಂದ ಇದನ್ನು ಕನ್ನಡಕ್ಕೆ ಅನುವದಿಸಿ ಕನ್ನಡದ ಮಕ್ಕಳಿಗೂ ರಸದೌತಣವನ್ನೂಡಿಸುತ್ತಿರುವ ಶ್ರೀಮತಿ ಎಚ್. ವೈ. ಸರಸ್ವತಮ್ಮನವರೂ ಶ್ಲಾಘನೆಗೆ ಪಾತ್ರರು.

ನ. ಸು.

*
* *

ಮರ್ಯಾದೆ ಮಹಲು—ಬರೆದವರು : "ಅಶ್ವತ್ಥ"; ಪ್ರಕಾಶಕರು : ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ; ಬೆಲೆ, ರೂ. ೩-೮-೦.

ಇದು ಕಾದಂಬರೀ ಯುಗ; ಸತ್ವದಲ್ಲಲ್ಲ, ವಿಪುಲತೆಯಲ್ಲಿ—ಎಂದರೆ ತಪ್ಪಾಗಲಾರದು. ಮುಂದೆ ತಮ್ಮದೇ ಆದ ಒಂದು ವಿಶಿಷ್ಟತೆಯಿಂದ ಬೆಳಕಾಗಿ ನಿಲ್ಲಬಲ್ಲವು ಎಲ್ಲೋ ನಾಲ್ಕಾರು. ಉಳಿದವು ಬರಿಯ ಚರ್ವಿತ-ಚರ್ವಣ. ಜನತೆಯ ಲಘು ಪ್ರವೃತ್ತಿಗಳ ಪ್ರಚೋದನೆಯನ್ನೇ ಮೂಲಧನವನ್ನಾಗಿಸಿಕೊಂಡು ಹುಟ್ಟಿದ ಕಾದಂಬರಿಗಳೇ ಹೆಚ್ಚು. ಉದಯೋನ್ಮುಖ ರಾಷ್ಟ್ರದ ಜನತೆಯ ಸಂಸ್ಕಾರಕ್ಕೆ ನೆರವಾಗುವಂತಹ ಕಾದಂಬರಿಗಳು ವಿರಳ. ಇಂದು ವಿಪುಲವಾಗಿ ಬಂದಿರುವ ಪ್ರಣಯ ಅಸಂಗಾತ್ಮಕಗಳಾದ ಕಾದಂಬರಿಗಳನ್ನು ಕುರಿತು ಪತ್ರಿಕೆಗಳಲ್ಲಿ ಲೇಖಕರಿಗೂ ವಿಮರ್ಶಕರಿಗೂ ಚರ್ಚೆ ಪ್ರತಿಚರ್ಚೆಗಳು ತಲೆ ಬೇಸರಮಾಡುವಷ್ಟು ಆಗಿವೆ. ಶೀಲ-ಅಶ್ಲೀಲ ಎಂಬ ಒರಗಲ್ಲನ್ನೊಂದನ್ನೇ ಹಿಡಿದು ಉಜ್ಜಿ ಖಂಡಿಸುವ 'ವಿಮರ್ಶಕ' (?)ರು ಒಂದು ಕಡೆ. ತಾವು ಬರೆದುದೇ ಸತ್ಯಸ್ಯ ಸತ್ಯ ಎಂದು ಸಮರ್ಥನೆಗಳ ವಾಗ್ಯುದ್ಧವನ್ನು ಮಾಡುವ 'ಲೇಖಕರು' (?) ಒಂದು ಕಡೆ. ಹೀಗಾಗಿ ವಿಮರ್ಶಕರು ಒಂದು ಕೃತಿಯನ್ನು ಇದು ಕಲೆಯೇ ಅಲ್ಲವೇ ಎಂಬ ದೃಷ್ಟಿಯಿಂದ ನೋಡುವುದನ್ನಾಗಲೀ,—ಲೇಖಕರು ತಾವು ಬರೆಯುತ್ತಿರುವುದೂ ಕಲಾತ್ಮಕವಾಗಿರಬೇಡವೆ ಎಂಬುದನ್ನಾಗಲೀ—ಮರೆತುಬಿಟ್ಟಂತೆ ತೋರುತ್ತದೆ! ಈ ಪರಿಸ್ಥಿತಿಯಲ್ಲಿ ನಿಜವಾಗಿಯೂ ಕಲಾತ್ಮಕವಾದ ಕಾದಂಬರಿಗಳಿಗಾಗಿ ಹುಡುಕಿದರೆ—ಈ ವಿಪುಲ ಕಾದಂಬರಿಗಳ ರಾಶಿಯಲ್ಲಿ—ದೊರೆಯುವುವು ನಾಲ್ಕಾರುಮಾತ್ರ. ಅಂತಹ ನಾಲ್ಕಾರು ಉಳಿಸಿಕೊಂಡಿರುವ ವಿಶಿಷ್ಟತೆಯನ್ನೇ ಉಳ್ಳ ಕಾದಂಬರಿ ಇತ್ತೀಚೆಗೆ ಬಂದಿತೇ ಎಂದರೆ ನಾವು ಶ್ರೀ 'ಅಶ್ವತ್ಥರ' ಮರ್ಯಾದೆ ಮಹಲಿನ ಕಡೆ ಕೈ ತೋರಿಸಬೇಕಾಗುತ್ತದೆ. ಏಕೆಂದರೆ ಇಂದಿನ ಹಲವಾರು ಕಾದಂಬರಿಗಳು ಗಹನವಾದ ಸಮಸ್ಯೆಯನ್ನು ಬಿಡಿಸುವ ನೆಪದಲ್ಲಿ ಬೆಳೆದು ಓದುಗರಿಗೆ 'ಪರ್ವತಪ್ರಸವ'ದಂತೆ ನಿರಾಸೆಯನ್ನುಂಟುಮಾಡಿದಾಗ ಈ ಕಾದಂಬರಿಯನ್ನು ಓದಿದ ಸಹೃದಯ ವಿಮರ್ಶಕನಿಗೆ—'ಪರವಾ ಇಲ್ಲ. ಲೇಖಕರಿಗೆ ಒಂದು ಜೀವನದರ್ಶನವಿದೆ; ವಿಚಾರಾರ್ಹವಾದುದನ್ನು, ಸತ್ವಯುತವಾದುದನ್ನು ಹೇಳಿದ್ದಾರೆ' ಎನ್ನಿಸುತ್ತದೆ.

ಇಲ್ಲಿ ಕಾಣುವ ಸತ್ಯ ಇದು. ಮರ್ಯಾದೆಯ ಸೋಗಿನಲ್ಲಿ ಸಮಾಜ ಅನ್ಯಾಯ ಅನಾಚಾರಗಳನ್ನು ಮಾಡುತ್ತದೆ. ಇದು ಹೆಚ್ಚಿದಾಗ ಅದರ ಅಂತರಂಗದಿಂದಲೇ ಸತ್-ವಿಲಯ ಶಕ್ತಿಯೊಂದು ಉದ್ಭವಿಸಿ ಆ ಸಂಪ್ರದಾಯವನ್ನೇ ನಾಶಮಾಡುತ್ತದೆ. ಇಲ್ಲಿ ಸುಧಾರಣೆ ಪರಿವರ್ತನೆ ಸಾಧ್ಯವಿಲ್ಲ; ಮರ್ಯಾದೆಯ ಸೋಗಿನಲ್ಲಿ ಮೆರೆಯುವ

ನಿಸ್ಸತ್ವ ಸಂಪ್ರದಾಯವನ್ನು ಸುಟ್ಟು ಬೂದಿಮಾಡುವುದೆ ಇಲ್ಲಿಗೆ ತಕ್ಕ ಸುಧಾರಣೆಯ ವಿಧಾನ!

ವಸ್ತುವಿನ ಆಯ್ಕೆಯಲ್ಲೇ ವಿಶಿಷ್ಟತೆ ಇದೆ. ಆಯ್ಕೆಯೂ ಕಲಾವಿದನ ಸಂಸ್ಕಾರಕ್ಕೆ ಕನ್ನಡಿ ಹಿಡಿಯುತ್ತದೆ. ಕಾದಂಬರಿಕಾರರು ಆಯ್ದುಕೊಂಡಿರುವ ವಸ್ತುವೇನೋ ಕ್ರಾಂತಿಯುತವಾದುದು—ಅದರ ಧ್ಯೇಯದಲ್ಲಿ. "ಆದರೆ ಪಾತ್ರಗಳು ಹಳೆಯ ಪ್ರವಾಹದಲ್ಲೇ ಕೊಚ್ಚಿಕೊಂಡು ಹೋಗುವುವು; ಈಸಿಕೊಂಡು ಮುನ್ನುಗ್ಗಿ ಕ್ರಾಂತಿಯ ಕೇತನವನ್ನು ಎತ್ತಿ ಹಿಡಿಯುವ ಕೆಚ್ಚಿಲ್ಲ—ಎಂದು ತಟಕ್ಕನೆ ಅನ್ನಿಸಿದರೂ ಹಾಗೆ ಮಾಡಿದ್ದರೆ ಈ ಕೃತಿ ಮುಂದಿನ ಒಂದು ಆದರ್ಶದ ಚಿತ್ರ (ಇದೇ ಲೇಖಕರ 'ಮುನಿಯನ ಮಾದರಿ'ಯಂತೆ) ವಾಗುತಿತ್ತೇ ಹೊರತು, ಇಂದಿನ ನೈಜಪರಿಸ್ಥಿತಿಯ ಸಹಜಚಿತ್ರವಾಗುತ್ತಿರಲಿಲ್ಲ ಎನಿಸುತ್ತದೆ.

ಇಲ್ಲಿ ಕಾಣುವುದು ಎರಡು ಶಕ್ತಿಗಳ ಸಂಘರ್ಷಣೆ. ಆ ಎರಡು ಶಕ್ತಿಗಳಲ್ಲಿ ಒಂದೊಂದಕ್ಕೆ, ತಂದೆ ಮತ್ತು ಮಗ, 'ಪ್ರತಿಮೆ'ಯಾಗಿದ್ದಾರೆ. ತಂದೆ ವಿಶ್ವೇಶ್ವರಯ್ಯನವರು 'ಹಣವಿದ್ದ ಕಡೆ ಗೌರವ, ಸ್ಥಾನ, ಅಧಿಕಾರ' ಎಂದರೆ, ಮಗ ಗುರುಪ್ರಸಾದ 'ಹೆಚ್ಚು ಸಂಪಾದಿಸದೇ ಇರುವುದೇ ಧರ್ಮ' ಎನ್ನುವ ಪ್ರವೃತ್ತಿಯವನು. ತಂದೆ ಮನೆತನದ ಮರ್ಯಾದೆಯ ಹೆಸರಿನಲ್ಲಿ, ಹತ್ತು ಜನರನ್ನು ಬಡಿದು ತಿಂದು ಶ್ರೀಮಂತರಾಗಿ—ಕೀರ್ತಿ, ಪ್ರತಿಷ್ಠೆ, ದರ್ಪಗಳಿಗೆ ಬೆಲೆ ಕೊಟ್ಟವರು. ಮಗ ಸರಳತೆ, ವಿನಯ, ನಿರಹಂಕಾರಕ್ಕೆ ಬೆಲೆ ಕೊಟ್ಟವನು. ಕ್ರಾಂತಿಯುತ ಮನೋಭಾವ ಸುಧಾರಕ. ತನ್ನ ಆವರಣದಿಂದ ಹಕ್ಕಿಯಂತೆ ದೂರ ಹಾರಿಹೋಗಿ ಆದರ್ಶದ ಕನಸುಗಳನ್ನು ಕಟ್ಟಿದವನು. ತನ್ನ ಎಲ್ಲಾ ಯತ್ನಗಳಿಗೂ ಜಗತ್ತಿನ ತಿರಸ್ಕಾರದ ನಗೆಯನ್ನು ಉತ್ತರವಾಗಿ ಪಡೆದನು. ಕಡೆಗೆ ಸೋತ ಕೆಚ್ಚಿನಲ್ಲಿ ತನ್ನ ಆವರಣಕ್ಕೇ ಕಿಚ್ಚಿಟ್ಟವನು.

ಈ ಕಾದಂಬರಿಯ ಕಥಾನಾಯಕ ಗುರುವಿನ ಪಾತ್ರ ಮೇಲುನೋಟಕ್ಕೆ ಕ್ರಿಯಾರಹಿತವಾಗಿ ತೋರುತ್ತದೆ. ಆದರೆ ಆಂತರಿಕವಾಗಿ ಅತ್ಯಂತ ಕ್ರಿಯಾತ್ಮಕವಾದುದು. ಅವನು ಭಾವಜೀವಿ; ಅವನ ಮೌನ ಜಡನಿದ್ರೆಯಲ್ಲ. ಅಗ್ನಿಪರ್ವತದ ನಿದ್ರೆ; ಆಗಾಗ ಅವನು ತನ್ನ ತಂದೆಯ ಅಪೂರ್ವ ಪುತ್ರವಾತ್ಸಲ್ಯವನ್ನು ಕಂಡು ಮೂಕನಾಗುತ್ತಾನೆ; ತಂದೆಯ ಅನ್ಯಾಯಗಳನ್ನು ಕಂಡು ಕುದಿಯುತ್ತಾನೆ. ಆಗಾಗ ಮಾತನಾಡಿದರೂ ಆ ಮಿತವಾದ ಮಾತುಗಳು ಸತ್ಯದ ಚಾವಟಿಯ ಏಟುಗಳಂತೆ. ತಂದೆಯಾದರೇನು, ಮಂತ್ರಿಗಳಾದರೇನು, ಗುರುಗಳಾದರೇನು ಎಲ್ಲರ ಎದುರಿಗೂ ನಿರ್ದಾಕ್ಷಿಣ್ಯವಾಗಿ ಅಪ್ರಿಯ ಸತ್ಯವನ್ನು ಝಳಪಿಸುತ್ತಾನೆ; ಇವನ ಸುಧಾರಣೆಗಳೋ ನಾನಾ ಮುಖವಾದುವು. ತಂದೆಯ ಕಪಟನಾಟಕವನ್ನು ನೋಡಿ ಬೇಸತ್ತ ಇವನ

ಮನಸ್ಸಿನಲ್ಲಿ ಸ್ವಾರ್ಥಪ್ರೇಮಕ್ಕೂ ಆದರ್ಶಕ್ಕೂ ಘರ್ಷಣೆಯಾಗುತ್ತದೆ. ತನ್ನ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿ ವಿಫಲನಾಗುತ್ತಾನೆ. ಮೊದಲು ಕವಿಯಾಗುತ್ತೇನೆಂದು ಹೊರಟು ವಿಫಲನಾದ; ಸಮಾಜಸೇವೆಗೆಂದು ಹೊರಟು ಹಲವರೊಂದಿಗೆ ಹರಿಜನರ ಕೇರಿಯನ್ನು ಗುಡಿಸಿದ. ಮರುದಿನ ಆ ಹಲವರು ಇವನೊಬ್ಬನನ್ನೇ ಬಿಟ್ಟು ಹಿಂದೆ ಸರಿದರು. ಆದರೂ ಈತ ಮುಂದುವರಿಸಿದ. ಜನರು "ಅವನಿಗೇನು ಮನೇಲಿ ಬೇಕಾದಷ್ಟಿದೆ ತಿನ್ನೋದಕ್ಕೆ; ಬೇರೆ ಉದ್ಯೋಗವಿಲ್ಲ. ಇದೆಲ್ಲಾ ಊರ ಮುಖಂಡ ನಾಗೋದಕ್ಕೆ ಮಾಡಿದ ಉಪಾಯ" (p. ೧೩೩) ಎಂದುಕೊಂಡರು. ಜನರ ಅಜ್ಞಾನವನ್ನು ನಿವಾರಿಸಲು ಪತ್ರಿಕೆಗೆ ಲೇಖನಗಳನ್ನು ಬರೆದ. ಆದರೆ ಪತ್ರಿಕೆಯವರು "ನಮ್ಮ ಪತ್ರಿಕೆಯ ಧೋರಣೆಗೆ ಇದು ಹೊಂದಿಕೊಳ್ಳುವುದಿಲ್ಲ" ಎಂದು ಲೇಖನಗಳನ್ನು ಹಿಂದಿರುಗಿಸಿದರು. ಸಾಹಿತಿ ಕಾಮೇಶ್ವರಯ್ಯನವರು ತನ್ನ ತಂಗಿಗೆ ಮಾಡಿದ ಅನ್ಯಾಯವನ್ನು ಸರಿಪಡಿಸುವುದರಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದರೂ ಕಡೆಯಲ್ಲಿ ಸೋಲೇ ಗೆದ್ದಿತು; ನಂಜಪ್ಪನ ದೌತ್ಯದಿಂದ ಕಮಲಾಸಾನಿಯ ಬಾಳಿಗೆ ಕಾಲಿಟ್ಟರೂ ಅಲ್ಲಿಯೂ ಇವನ ಸುಧಾರಕತನ ಅರಿಯದ ಹೆಣ್ಣನ್ನು ಬಲಿತೆಗೆದುಕೊಂಡು ನಿರಾಸೆಯನ್ನುಂಟುಮಾಡಿತು. "ನನ್ನ ದಾರಿಗೂ ಹಿಂದಿನ ನಂಬಿಕೆ ರೂಢಿನೀತಿಗಳಿಗೂ ವ್ಯತ್ಯಾಸವಿದೆ" (p. ೮೮) ಎಂದು ಹೊಸ ಧ್ಯೇಯಗಳನ್ನು ರೂಪಿಸಿಕೊಂಡು "ರೂಢಿಗೆ ಸೋತು ಕೂಡೋದಿಲ್ಲ; ಹೋರಾಡ್ತೀನಿ. ಘನವಾದ ಸೋಲು ಕೀಳಾದ ಜಯಕ್ಕಿಂತ ಶ್ರೇಷ್ಠ" (p. ೨೪೪) ಎಂದು ಮುನ್ನುಗ್ಗಿದ ಈ ಧೀರನಿಗೆ "ಎಲ್ಲದರಲ್ಲೂ ಸೋಲೋದೇ ನನ್ನ ಗತಿ? ನನ್ನಿಂದ ಯಾವುದೂ ನಡೆಯೋದಿಲ್ಲ; ನಾನೇ ಸೋಲು!" (p. ೧೪೧) ಎಂಬ ಅರಿವಾಯಿತು. ಕಡೆಗೆ "ಈ ಲೋಕವೇ ಹೀಗಿದೆ. ನಾನೇನು ಮಾಡಬಲ್ಲೆ? ಯಾವ ಯಾವ ದಿವ್ಯಶಕ್ತಿಗಳು ಅವತರಿಸಿ ಜಗತ್ತನ್ನು ಉದ್ಧರಿಸಲು ಬಾಳಿ ಬಳಲಿ ಅಳಿದರಲ್ಲ; ಅದಕ್ಕಾಗಿ ಜಗ ಎಷ್ಟು ಉತ್ತಮವಾಗಿದೆ? ದಿನೇದಿನೇ ಕೆಡುತ್ತಲೇ ಇದೆ. ಜಗದ ಜನರೆಲ್ಲ ಮಹಾತ್ಮರಾದ ಹೊರತು ಈ ಪ್ರಶ್ನೆ ಕಳೆಯುವುದಿಲ್ಲ. ಲೋಕ ಉದ್ಧಾರವಾಗುವುದಿಲ್ಲ; ಅಲ್ಲಿಯ ವರೆಗೂ ಯಾರು ಏನುಮಾಡಿದರೂ ಈ ನಾಯಿಯ ಬಾಲ ಡೊಂಕೇ" (p. ೨೦೪) ಎಂಬ ತೀರ್ಮಾನಕ್ಕೆ ಬಂದ. ತನ್ನ ಸೋಲನ್ನು ನೋಡಿ ತನ್ನನ್ನು ತಾನೇ ವಿಮರ್ಶಿಮಾಡಿಕೊಂಡ. "ಅನ್ಯಾಯದಲ್ಲೂ ಕ್ರೋಧವಿರಬೇಕು: ಅದೊಂದು ಶ್ರೇಷ್ಠಸಾಧನ—ಮಹತ್ಕಾರ್ಯಕ್ಕೆ. ಅದೂ ಸಾಕಷ್ಟು ಇಲ್ಲವಲ್ಲ. ಇದ್ದಿದ್ದರೆ ಹೀಗೆ ಮೂಕನಾಗುತ್ತಿದ್ದನೆ? ಶುದ್ಧ ಅಪ್ರಯೋಜಕ, ಹೇಡಿ" (p. ೮೬) ಎಂದುಕೊಂಡ. ಗುರುವಿನ ಈ ಸ್ವಾತ್ಮವಿಮರ್ಶೆಯಲ್ಲಿ ಬಹುಮಟ್ಟಿಗೆ ಸತ್ಯಾಂಶವಿದೆ. ಜಗತ್ತನ್ನು ತಿದ್ದುತ್ತೇನೆಂದು ಹೊರಟವರಿಗೆಲ್ಲಾ ಈ ಬಗೆಯ

ಸೋಲು ಅನಿರೀಕ್ಷಿತವೇನಲ್ಲ; ಆಶ್ಚರ್ಯವೂ ಅಲ್ಲ. ಹಲವು ಸುಧಾರಕರಲ್ಲಿ ಇಷ್ಟೊಂದು ಸೋಲುಗಳಿರುವುದಿಲ್ಲ; ಜಯವೂ ಇರುತ್ತದೆ. ಆದರೆ 'ಗುರು'ವಿನ ಸೋಲುಗಳ ಪರಂಪರೆಗೆ ಕಾರಣ ಅವನ ಅಧೈರ್ಯ; ಅವನ ಕನಸುಣಿತನ; ಆವರಣ ದೊಂದಿಗೆ ಹೊಂದಿಕೊಂಡು ಅರ್ಥಮಾಡಿಕೊಳ್ಳಲಾರದ ಅಚಾತುರ್ಯ; ಆವೇಶ. ಭಾವಜೀವಿಗಳಾದವರು ಈ ರೀತಿಯ ಸುಧಾರಣೆಗಳಿಗೆ ಕೈಹಾಕಿದರೆ ಆಗುವುದೇ ಹೀಗೆ. ಆದರೆ ಈ ಜೀವ ಸೋತು ಸುಮ್ಮನಿರಲಿಲ್ಲ; ತನ್ನ ಆವರಣಕ್ಕೇ ಬೆಂಕಿ ಹಚ್ಚಿ ತಾನೂ ಅದರಲ್ಲಿ ಲೀನವಾಯಿತು.

ಕಾದಂಬರಿಯ ಆರಂಭದ ದೃಶ್ಯ ಚಿತ್ತಾಕರ್ಷಕ ಸನ್ನಿವೇಶವಲ್ಲದಿದ್ದರೂ ಅದರ ನಾಟಕೀಯ ಗುಣದಿಂದ ಮನ ಸೆಳೆಯುತ್ತದೆ. ಕಾದಂಬರಿಯ ಉದ್ದಕ್ಕೂ ಈ ನಾಟಕೀಯ ಗುಣ ಹರಿದಿದೆ. ಇದರಿಂದ ಹಲವು ವೇಳೆ ಪಾತ್ರದ ಸ್ವಭಾವಕ್ಕೆ ನ್ಯೂನತೆಯೂ ಬಂದಿದೆ. ಪುಟ ೧೯೦-೧೯೩ ರಲ್ಲಿ ಬರುವ ತಂದೆ ಮಗಳ ಸಂಭಾಷಣೆಯನ್ನು ಇದಕ್ಕೆ ಉದಾಹರಿಸಬಹುದು. ಗುರುಗಳೊಡನೆ ಗುರುಪ್ರಸಾದ ಸಂಭಾಷಣೆ ನಡೆಯಿಸಿದನಂತರ ಅವನಿಗೆ ಬರುವ ಉದ್ರೇಕ ಅತಿ ಎನ್ನಿಸುತ್ತದೆ.

ಪಾತ್ರ ಚಿತ್ರಣದಲ್ಲಿ ಪರಿಣತಿ ತೋರಿಬರುತ್ತದೆ. ಮೊದಲ ಹಲವು ಪುಟಗಳಲ್ಲಿ ಲೇಖಕರು ಪಾತ್ರಪರಿಚಯವನ್ನು ಸೂತ್ರಪ್ರಾಯವಾದ ಮಾತುಗಳಿಂದ ಮಾಡಿಕೊಟ್ಟಿರುವುದು ಅತ್ಯಂತ ಉಚಿತವಾಗಿದೆ. ರಾಯರ ಭಾವಮೈದುನನನ್ನು ಕುರಿತು 'ಹುಣ್ಣಿನ ಮೇಲಿನ ಸೊಣ' ಎಂಬ ಮಾತೂ, ಸಣ್ಣಮ್ಮನನ್ನು 'ಬಟ್ಟೆಯ ಸೂತ್ರದ ಗೊಂಬೆ' ಎಂಬ ಮಾತೂ, ಕುಸುಮಳನ್ನು 'ವ್ಯಕ್ತಿಯಲ್ಲಿ ಚಿತ್ರ' ಎಂಬ ಮಾತೂ, ಕಾಮೇಶ್ವರಯ್ಯನವರನ್ನು 'ಇನ್ನೂ ಮಧ್ಯವಯಸ್ಕರಾದರೂ ಆಗಲೇ ಹೆಸರು ಹೊಂದಿ ಶಾಲೆ ಕಾಲೇಜುಗಳ ಯುವಕ ಯುವತಿಯರಿಗೆ ಅಚ್ಚುಮೆಚ್ಚಾದ ಕ್ರಾಂತಿಕಾರ ಸಾಹಿತಿ ಎನಿಸಿಕೊಂಡ ಆಧುನಿಕ ಪಂಥದ ಆಜನ್ಮಬ್ರಹ್ಮಚಾರಿ ಕಾಮೇಶ್ವರಯ್ಯನವರು' ಎಂಬ ಮಾತೂ, ಮತ್ತು ಇಂಥವೇ ಹಲವು ಮಾತುಗಳು ಪಾತ್ರಗಳ ಸ್ವಭಾವವನ್ನೂ ಸೂಚಿಸುತ್ತವೆ. ಕಾದಂಬರಿಯ ಪಾತ್ರಗಳ ಹೆಸರುಗಳಲ್ಲೇ ಒಂದು ಅರ್ಥಸ್ವಾರಸ್ಯವಿದೆ. ಸಾಹುಕಾರ್ ವಿಶ್ವೇಶ್ವರಯ್ಯನವರು. ಊರು ಮರುಳೂರು; ಸುತ್ತಲ ಹಳ್ಳಿಗಳು—ಚಂದಗೆರೆ, ಪಿರಿಯೂರು, ಕುರುಡಹಳ್ಳಿ: ಗುರು; ಕಾಮೇಶ್ವರಯ್ಯ: ಕವಿವರ ಬಾಡಪ್ಪ, ದಾಸ, ಮಂತ್ರಿ ಮಂಗೇಶಪ್ಪ; ಮುನಿಸಿಪಲ್ ಪ್ರೆಸಿಡೆಂಟ್ ಭೋಗಪ್ಪ; ನಂಜಪ್ಪ; ಸಣ್ಣಮ್ಮ, ಕುಸುಮ ಈ ಹೆಸರುಗಳೂ ಸಹ ಉಚಿತವಾಗಿವೆ.

ಪ್ರಣಯ ಪ್ರಸಂಗ ಸನ್ನಿವೇಶಗಳಲ್ಲೂ ಸಹ 'ಅಶ್ವತ್ಥ'ರು ತಮ್ಮ ವಿಶಿಷ್ಟತೆಯನ್ನು ತೋರಿದ್ದಾರೆ. ಉತ್ತಮ ಕಲೆಯ ರಹಸ್ಯವಿರುವುದು 'ವ್ಯಂಗ್ಯ'ದಲ್ಲಿ;

ಇಂಗಿತದಲ್ಲಿ; ವಾಚ್ಯದಲ್ಲಲ್ಲ. ಆದರೆ ನಮ್ಮ ಹಲವು ಕಾದಂಬರಿಕಾರರು, ಪ್ರಣಯ ಪ್ರಸಂಗಗಳು, ಎಲ್ಲಿ ವಾಚ್ಯವಾಗಿರಬೇಕು ಎಲ್ಲಿ ವ್ಯಂಗ್ಯವಾಗಿರಬೇಕು ಎಂಬ ಔಚಿತ್ಯ ವನ್ನು ಗಮನಿಸದೆ—ಎಷ್ಟು ವಾಚ್ಯವಾಗಿದ್ದರೆ ಅಷ್ಟು ಕಲಾತ್ಮಕವಾಗಿರುತ್ತವೆ ಎಂದು ಭ್ರಾಂತಿಪಟ್ಟಿರುವಂತೆ ತೋರುತ್ತದೆ. 'ವಾಚ್ಯ'ವಾದ ಈ ಪ್ರಣಯ ಪ್ರಸಂಗಗಳಿಂದ ಆಗುವುದು ರಸಾನುಭವವಲ್ಲ; ಭಾವಾನುಭವ. ಅಂಥವನ್ನು ಕುರಿತು ಈ ಕಾದಂಬರಿಯ ನಾಯಕ "ಆ ಪುಟಪುಟದ ಜಿಡ್ಡು, ಕೈಮೈ ಮನಸ್ಸಿಗೆಲ್ಲ ಹತ್ತಿಕೊಳ್ಳೋದು ಪ್ರೇಮವೆ? ಬರಿ ದೈಹಿಕ ಆಕರ್ಷಣೆ, ಚಿತ್ತಭ್ರಮಣೆ. ಪ್ರೇಮ ಹಾಲಿನಹಾಗಿರಬೇಕು, ಹೆಂಡದಹಾಗಲ್ಲ" (p. ೯೩) ಎನ್ನುವುದೂ ಸಹಜ. ಶ್ರೀ 'ಅಶ್ವತ್ಥ'ರು ಈ ಕಾದಂಬರಿಯಲ್ಲಿ 'ವ್ಯಂಗ್ಯ'ದ ವಿಧಾನವನ್ನು ತಕ್ಕಮಟ್ಟಿಗೆ ಅನುಸರಿಸಿದ್ದಾರೆ. ಇಲ್ಲೂ ಕಥಾನಾಯಕನಿಗೆ ವೇಶ್ಯಾಗೃಹ ಪ್ರವೇಶವಾಗುತ್ತದೆ—ನಮ್ಮ ಕಾದಂಬರಿಗಳ ಸತ್ ಸಂಪ್ರದಾಯದ ಪ್ರಕಾರ! ಆದರೆ ಒಂದು ವ್ಯತ್ಯಾಸ; ಇಲ್ಲಿನ ನಾಯಕ ವೇಶ್ಯಾ ಗೃಹಕ್ಕೆ ಹೋದರೂ ನಾವು ಅಲ್ಲಿ ಕಾಣುವುದು ಪ್ರಣಯವಿಲಾಸವನ್ನಲ್ಲ; "ಗರತಿ ಸೂಳೆಯಾಗಬಹುದು, ಸೂಳೆ ಗರತಿಯಾಗಬಾರದೆ" ಎಂಬ ಸಮಸ್ಯೆಯ ವಿಚಾರ ವಿಲಾಸವನ್ನು!

ಸಂಪೂರ್ಣವಾಗಿ ಇದೊಂದು ವಿಡಂಬನಕೃತಿ. ಪತ್ರಿಕೆಗಳ ವಿಷಯ; ಸಾಹಿತ್ಯ ಸಂಘಗಳ ಕರುಣಾಜನಕ ಅವಸ್ಥೆ; ಅಶ್ಲೀಲ ಸಾಹಿತ್ಯದ ಪರಿಣಾಮ; ಸಭೆ ಸಮಾರಂಭಗಳ ವಿಕಟಚಿತ್ರ; ಮುನಿಸಿಪಲ್ ಚುನಾವಣೆಯ ಪ್ರಸಂಗ; ಸಾಹುಕಾರ್ ವಿಶ್ವೇಶ್ವರಯ್ಯನವರ ಸನ್ಮಾನಸಮಾರಂಭ—ಇವೆಲ್ಲವೂ ಸಗೆಯನ್ನುಕ್ಕಿಸುತ್ತವೆ. ಕಾದಂಬರಿಯ ನಡಿಗೆ ಮೊದಲು ನಿಧಾನವಾದರೂ ಬೇಸರವಾಗುವುದಿಲ್ಲ; ೧೬೬ ನೆಯ ಪುಟದಿಂದ ೨೦೩ ರ ವರಗೆ ಕಥನ ಕ್ರಿಯೆ ಮಿಂಚಿನಂತೆ ಹರಿಯುತ್ತದೆ. ಕಟ್ಟಕಡೆಯ ರುದ್ರದೃಶ್ಯ ಕಣ್ಣಿಗೆ ಕಟ್ಟುತ್ತದೆ. ಅಲ್ಲಲ್ಲಿ ಮುತ್ತಿನಂಥ ವಾಕ್ಯವೃಂದಗಳು ಅನುಭವದ ಸೂತ್ರದಂತೆ ಮಿಂಚುತ್ತವೆ. ಲೇಖಕರ ಶೈಲಿಗೆ ಸಹಜವಾದ ಶಕ್ತಿ ಇದೆ; ಓದುಗರನ್ನೂ ಕತೆಯ ಹೊಳೆಯಲ್ಲಿ ತೇಲಿಸಿಕೊಂಡುಹೋಗುವ ಶಕ್ತಿ ಇದೆ.

ಇಂತಹ ಹಲವು ಗುಣಗಳಿಂದ ಕೂಡಿದ ವಿಶಿಷ್ಟ ಕೃತಿಯನ್ನು ಕೊಟ್ಟುದಕ್ಕಾಗಿ ಶ್ರೀ 'ಅಶ್ವತ್ಥ'ರು ಅಭಿನಂದನಾರ್ಹರು!

ಜಿ. ಎಸ್. ಶಿವರುದ್ರಪ್ಪ.

*
* *

ಪಂಪ ಮಹಾಕವಿ ವಿರಚಿತಂ ಆದಿಪುರಾಣಂ—ಸಂಪಾದಕರು: ಪ್ರೊ|| ಕೆ. ಜಿ. ಕುಂದಣಗಾರ, ಎಂ.ಎ., ಮತ್ತು ದಿವಾನ್ ಬಹದ್ದೂರ್ ಎ. ಪಿ. ಚೌಗುಲೆ, ಬಿ.ಎ., ಎಲ್ಎಲ್.ಬಿ.;

ಮುದ್ರಕರು ಮತ್ತು ಪ್ರಕಾಶಕರು: ಅನಂತ ಅಣ್ಣಾರಾವ್ ಚೌಗುಲೆ, ಬೆಳಗಾವಿ; ಡೆಮ್ಮಿ ಅಷ್ಟಪತ್ರ, IV+೧-೬೪+೧-೪೨೧+೧-೧೫೮; ಬೆಲೆ, ಸಾದಾಪ್ರತಿ ರೂ. ೧೦-೦-೦; ಕ್ಯಾಲಿಕೋಪ್ರತಿ ರೂ. ೧೧-೦-೦.

ಕವಿಚಕ್ರವರ್ತಿ ರನ್ನನು ತನ್ನ ಕೃತಿರತ್ನವನ್ನು ಪರೀಕ್ಷಿಪಂಗೆಂಟೆರ್ದೆಯೆ? ಎಂದು ಹಿಂದೆ ವಿಮರ್ಶಕರನ್ನು ಗಾಬರಿಗೊಳಿಸಿದ್ದನು. ಅದೇ ಮಾತನ್ನು ಈಗ ಪ್ರಾಚೀನ ಉದ್ಗ್ರಂಥಗಳನ್ನು ಪರೀಕ್ಷಿಸಿ, ಸಂಶೋಧಿಸಿ, ಪ್ರಕಾಶಪಡಿಸುವವರಿಗೆ ಅನ್ವಯಿಸಬಹುದಾಗಿದೆ. ಪ್ರಾಚೀನ ಉದ್ಗ್ರಂಥಗಳ ಸಂಶೋಧನೆ ಮತ್ತು ಪ್ರಕಟನ ಕಾರ್ಯವು ಬಹು ಶ್ರಮಸಾಧ್ಯವಾದ ವಿಷಯ. ಅದಕ್ಕೆ ವಿಶೇಷಪಾಂಡಿತ್ಯ ಬೇಕು; ವಿವೇಚನಜ್ಞಾನ ಬೇಕು; ತಾಳ್ಮೆ ಬೇಕು; ಅನುಭವ ಬೇಕು; ಇವೆಲ್ಲಕ್ಕಿಂತಲೂ ಮೇಲಾಗಿ ಧನಸಹಾಯ ಬೇಕು. ಸೇವಾಮನೋಭಾವ ಬೇಕು. ಪ್ರತಿಫಲಾಪೇಕ್ಷೆಯಿಂದ ಕೆಲಸಮಾಡುವುದಂತೂ ಈ ಕ್ಷೇತ್ರದಲ್ಲಿ ಸಾಧ್ಯವೇ ಇಲ್ಲ. ಅದರಲ್ಲಿಯೂ ಗ್ರಂಥಗಳು ಪುರಾಣ (ಧಾರ್ಮಿಕ) ಗ್ರಂಥಗಳಾದರಂತೂ ಅವುಗಳ ಪ್ರಕಾಶನ ಕಾರ್ಯ ಮತ್ತಷ್ಟೂ ಕಠಿಣವಾಗುತ್ತದೆ. ಆದುದರಿಂದಲೇ ಸಾಹಿತ್ಯಸೇವಾದೃಷ್ಟಿಯಿಂದ ಉದ್ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಿದ ಕಾವ್ಯಕಲಾನಿಧಿ, ಕಾವ್ಯಮಂಜರಿ ಮಾಲೆಗಳ ಅನೇಕ ಗ್ರಂಥಗಳ ಪ್ರಥಮ ಮುದ್ರಣದ ಪ್ರತಿಗಳೇ ಅಯ್ವತ್ತು ವರ್ಷಗಳಾದರೂ ಇನ್ನೂ ಮಾರಾಟವಾಗದೇ ಉಳಿದುಕೊಂಡಿರುವುವು.

ಇಂತಹ ಬಹು ಶ್ರಮಸಾಧ್ಯವಾದ ಕಾರ್ಯವೊಂದನ್ನು ಕೈಗೊಂಡು ಯಶಸ್ವಿಯಾಗಿ ನಡೆಸಿದ ಪ್ರಸಕ್ತಸಂಪಾದಕರುಗಳು ಅಭಿನಂದನೀಯರು. ಸುಮಾರು ಅಯ್ವತ್ತುಮೂರು ವರ್ಷಗಳ ಹಿಂದೆ ಮೈಸೂರು ಪ್ರಾಚ್ಯಕೋಶಾಗಾರದ ಕನ್ನಡ ಮಾಲೆಯಲ್ಲಿ ಪ್ರಥಮಪುಷ್ಪವಾಗಿ ದಿವಂಗತ ಎಸ್. ಜಿ. ನರಸಿಂಹಾಚಾರ್ಯರವರಿಂದ ಸಂಶೋಧಿತವಾಗಿ ಪ್ರಕಾಶಿತವಾದ ಮಹಾಕವಿ ಪಂಪನ ಆದಿಪುರಾಣಗ್ರಂಥದ ಪ್ರತಿಗಳು ಮುಗಿದುಹೋಗಿ ಸಾಹಿತ್ಯಾಭ್ಯಾಸಿಗಳಿಗೂ ಧಾರ್ಮಿಕವರ್ಗಕ್ಕೂ ವಿಶೇಷ ಅನಾನುಕೂಲವಾಗಿತ್ತು. ಈ ಕೊರತೆಯನ್ನು ಪ್ರಸಕ್ತ ಸಂಪಾದಕರು ನೀಗಿದುದರಿಂದ ಕನ್ನಡಿಗರೆಲ್ಲರೂ ಅವರಿಗೆ ಚಿರಋಣಿಗಳು.

ಶ್ರೀಮಾನ್ ಕುಂದಣಗಾರರೂ ಮತ್ತು ಅವರ ಸಹೋದ್ಯೋಗಿಗಳೂ ಗ್ರಂಥವನ್ನು ಸರ್ವಾಂಗಸುಂದರವನ್ನಾಗಿಯೂ ಬಹುಜನೋಪಯುಕ್ತವನ್ನಾಗಿಯೂ ದೋಷರಹಿತವನ್ನಾಗಿಯೂ ಮಾಡಬೇಕೆಂದು ವಿಶೇಷ ಶ್ರಮಿಸಿದ್ದಾರೆ. ಬೊಂಬಾಯಿ ಶ್ರೇಷ್ಠ ನ್ಯಾಯಸ್ಥಾನದ ನಿವೃತ್ತ ನ್ಯಾಯಮೂರ್ತಿಗಳಾದ ಎನ್. ಎಸ್. ಲೋಕೂರ ಅವರು ಗ್ರಂಥದ ಮತ್ತು ಸಂಪಾದಕರ ಪರಿಚಯಾತ್ಮಕವಾದ ಮುನ್ನುಡಿಯನ್ನು

ಬರೆದಿದ್ದಾರೆ. ಹಿರಿಯ ಸಾಹಿತ್ಯಾರಾಧಕರಾದ ಮೈಸೂರಿನ ಶ್ರೀಮನ್ಮಹಾರಾಜರವರಿಗೆ ಈ ಗ್ರಂಥವು ಅರ್ಪಿತವಾಗಿರುವುದು ಸುಸಂಗತವಾಗಿದೆ. ಸಂಪಾದಕರು ಗ್ರಂಥಾರಂಭದಲ್ಲಿ ಕವಿಚರಿತ್ರೆ, ಕವಿಪ್ರಶಸ್ತಿ, ಪ್ರಸಕ್ತಗ್ರಂಥದ ಭಾಗಗಳಿಗೆ ಸಮವಾದಿಯಾದ ಇತರ ಸಂಸ್ಕೃತ ಕನ್ನಡ ಗ್ರಂಥಗಳ ಭಾಗಗಳು, ಸಂಸ್ಕೃತ, ಪ್ರಾಕೃತ, ಅಪಭ್ರಂಶ ಕನ್ನಡ ಭಾಷೆಗಳಲ್ಲಿರುವ ಆದಿಪುರಾಣಕಾರರ ಪಟ್ಟಿ, ಗ್ರಂಥದಲ್ಲಿ ಉಪಯುಕ್ತವಾದ ಛಂದಸ್ಸು, ಜೈನಪಾರಿಭಾಷಿಕ ವಿಚಾರ ಮೊದಲಾದುವುಗಳನ್ನೊಳಗೊಂಡ ದೀರ್ಘವಾದ ಉಪೋದ್ಘಾತವನ್ನು ಕೊಟ್ಟಿದ್ದಾರೆ. ಹಿಂದಿನ ಮುದ್ರಣದಲ್ಲಿರುವಂತೆಯೇ ಇಲ್ಲಿಯೂ ಕಥಾಸಾರಾಂಶವು ವಿಸ್ತಾರವಾಗಿ ನಿರೂಪಿತವಾಗಿದೆ. ಗ್ರಂಥಪಾಠವು ಪ್ರಥಮ ಮುದ್ರಣಕ್ಕೆ ಉಪಯೋಗಿಸಿದ ಪ್ರತಿಗಳೇ ಅಲ್ಲದೆ ಮೂಡಬಿದ್ರೆಯ ಮಠದ ಮತ್ತೆರಡು ಓಲೆಯ ಪ್ರತಿಗಳ ಸಹಾಯದಿಂದಲೂ ಸಂಸ್ಕೃತ ಭಾಷೆಯಲ್ಲಿರುವ ಪೂರ್ವಪುರಾಣ, ತತ್ತ್ವಾರ್ಥಸೂತ್ರ, ಯಶಸ್ತಿಲಕಚಂಪು, ಕನ್ನಡ ಎಲ್ಲ ಉಪಲಬ್ಧ ಜೈನಪುರಾಣಗಳು ಮೊದಲಾದುವುಗಳ ಸಹಾಯದಿಂದಲೂ ಪರಿಷ್ಕೃತವಾಗಿದೆ. ಅವಶ್ಯವಾದೆಡೆಗಳಲ್ಲೆಲ್ಲ ಪಾಠಾಂತರಗಳೂ ಸಮವಾದೀ ಭಾಗಗಳೂ ವಿವರಣಾಂಶಗಳೂ ಪುಟದಡಿಯಲ್ಲಿ ವಿಪುಲವಾಗಿ ಕೊಡಲ್ಪಟ್ಟಿವೆ. ಗ್ರಂಥಾಂತ್ಯದಲ್ಲಿ ದೀರ್ಘವಾದ ಒಪ್ಪೋಲೆಯಿದೆ. ಗ್ರಂಥವನ್ನು ವಾಸ್ತವವಾಗಿಯೂ ಹೆಚ್ಚು ಉಪಯುಕ್ತವನ್ನಾಗಿ ಮಾಡಿರುವ ನಾಮಕೋಶ, ಜೈನಪಾರಿಭಾಷಿಕ ಶಬ್ದಕೋಶ, ಕಠಿಣ ಶಬ್ದಗಳ ಕೋಶ, ವೃತ್ತ ಮತ್ತು ಅವುಗಳ ಸಂಖ್ಯೆ, ಪದ್ಯಗಳ ಅಕಾರಾದಿ ಮೊದಲಾದುವು ಅನುಬಂಧಗಳಾಗಿ ಸೇರಿಸಲ್ಪಟ್ಟಿವೆ. ನಾಮಕೋಶ, ಪಾರಿಭಾಷಿಕ ಶಬ್ದಕೋಶಗಳು ಪ್ರಸಕ್ತಗ್ರಂಥದ ಅವಲೋಕನಕ್ಕೇ ಅಲ್ಲದೆ ಇತರ ಎಲ್ಲ ಜೈನಪುರಾಣಗಳ ಅಭ್ಯಾಸಕ್ಕೂ ಬಹುಮಟ್ಟಿಗೆ ಸಹಾಯಕವಾಗಿವೆ. ಕಠಿಣ ಶಬ್ದಕೋಶದ ಕೆಲವು ಅಪೂರ್ವ ಶಬ್ದಗಳ ಪಕ್ಕದಲ್ಲಿ ಅವುಗಳು ಉಪಯೋಗವಾಗಿರುವ ಇತರ ಗ್ರಂಥಗಳ ಸೂಚನೆಯನ್ನೂ ಕೊಟ್ಟಿರುವುದು ಶ್ಲಾಘನೀಯವಾಗಿದೆ. ಪ್ರಸಕ್ತ ಗ್ರಂಥದ ಪ್ರಕಟನೆಯಿಂದ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ವಿಶೇಷ ಪ್ರಯೋಜನವುಂಟಾಗಿದೆ.

ಆದರೂ ಗ್ರಂಥಸಂಪಾದನೆ, ಶ್ರೇಷ್ಠಮಟ್ಟದ ಸಂಪಾದನಾಕಾರ್ಯ, ಗ್ರಂಥಪಾಠಗಳ ವಿಷಯವಾಗಿ ನಮಗೆ ತೋರಿಬಂದ ವ್ಯಕ್ತವ್ಯಾಂಶಗಳನ್ನು ತಿಳಿಯಪಡಿಸಲು ಸಂಕೋಚಿಸುತ್ತೇವೆ. ವಕ್ತವ್ಯಾಂಶವನ್ನೆಲ್ಲ ಹೇಳಲೂ ಸಾಧ್ಯವಿಲ್ಲ. ಮಾದರಿಗಾಗಿ ಕೆಲವನ್ನು ಸೂಚಿಸುತ್ತೇವೆ. ಇಲ್ಲಿ ಯಾವ ವೈಯಕ್ತಿಕ ದೃಷ್ಟಿಯೂ ಇಲ್ಲವೆಂಬುದನ್ನು ಸಂಪಾದಕರು ಜ್ಞಾಪಕದಲ್ಲಿಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಸಂಶೋಧನೆಯ ಸಾಧನ ಮತ್ತು ಅವುಗಳನ್ನು ಉಪಯೋಗಿಸಿರುವ ರೀತಿ—ಸಂಪಾದಕರು ನುರಿತ ಪಂಡಿತರು. ಮೇಧಾವಿಗಳು; ಸಂಶೋಧನೆಯ ನಿಯಮಗಳನ್ನರಿತವರು; ಪ್ರಸಕ್ತ ಪರಿಶೋಧನೆಗೆ ಹಿಂದಿನ ಮುದ್ರಣಕ್ಕಿಂತ ಹೆಚ್ಚಾಗಿ ಎರಡು ಪ್ರತಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಆದರೂ ಆ ವಿಷಯದಲ್ಲಿ ಇನ್ನೂ ಹೆಚ್ಚಿನ ಪ್ರತಿಗಳನ್ನು ಉಪಯೋಗಿಸಿಕೊಂಡಿದ್ದರೆ ಗ್ರಂಥಪಾಠವು ಹೆಚ್ಚು ಶುದ್ಧವೂ ಸಂಪಾದನೆಯ ರೀತಿಯು ಹೆಚ್ಚು ಶಾಸ್ತ್ರೀಯವೂ ಆಗುತ್ತಿತ್ತೆಂದು ನಮ್ಮ ಭಾವನೆ. ಆದಿಪುರಾಣ ಧಾರ್ಮಿಕಗ್ರಂಥ; ಅದರ ಕೈಬರಹದ ಪ್ರತಿಗಳು ಹೇರಳವಾಗಿ ಸಿಕ್ಕುತ್ತವೆ;[1] ಅಲ್ಲದೆ ಅತಿ ಪ್ರಾಚೀನವಾದ ಶುದ್ಧವಾದ ಪ್ರತಿಗಳೂ ಲಭ್ಯವಾಗುತ್ತವೆ. ಈ ಅದೃಷ್ಟ ಅನೇಕ ಕನ್ನಡ ಗ್ರಂಥಗಳಿಗಿಲ್ಲ. ಇಂತಹ ಗ್ರಂಥಗಳ ಪುನರ್ಮುದ್ರಣದ

---

[1] ನಮಗೆ ತಿಳಿದಮಟ್ಟಿಗೆ ಮೈಸೂರು ಪ್ರಾಚ್ಯಕೋಶಾಗಾರದ ಕೆ. ೨೭, ಕೆ. ಎ. ೭, ಕೆ. ಎ. ೧೩೧, ಮೂಡಬಿದ್ರೆಯ ಶ್ರೀ ಮಠದ ಸರಸ್ವತೀ ಭಂಡಾರದ ೨೮, ೧೧೮, ೪೧೦, ೪೯೩, ೫೫೯. ೬೯೦, ೭೨೦, ೭೩೬, ಅದೇ ಮೂಡಬಿದ್ರೆಯ ವೀರವಾಣೀ ಜೈನಸಿದ್ಧಾಂತ ಭವನದ (ಶ್ರೀ ಲೋಕನಾಥ ಶಾಸ್ತ್ರಿಗಳ ಭಂಡಾರ) ೪, ೯, ೧೯೩, ಹುಂಬುಚ ಜೈನಮಠದ ೯, ೩೦, ೧೯೪, ಒರಾಂಗಾ ಮಠದ ೬೦, ೮೮, ಶ್ರವಣಬೆಳುಗೊಳ ಶ್ರೀ ಮಠದ ೫೯, ೬೪, ೧೨೪, ಈ ನಂಬರಿನ ಪ್ರತಿಗಳು ಪಂಪನ ಆದಿಪುರಾಣಗಳು. ಇವುಗಳಲ್ಲಿ ಶ್ರವಣಬೆಳುಗೊಳದ ೬೪ ನೆಯ ನಂಬರಿನ ಪ್ರತಿ ಶಕ ೧೩೨೪ ನೆಯ (ಕ್ರಿ. ಶ. ೧೪೦೨) ಚಿತ್ರಭಾನು ಸಂವತ್ಸರ ಕಾರ್ತಿಕ ಬ || ೭ ಗುರುವಾರದಂದು ಪ್ರತಿಯಾದುದು, ಲೋಕನಾಥ ಶಾಸ್ತ್ರಿಗಳ ೪ ನೆಯ ನಂಬರಿನ ಪ್ರತಿ ಶಕ ೧೪೮೫ನೆಯ (ಕ್ರಿ. ಶ. ೧೫೬೩) ದುರ್ಮತಿ ಸಂ|| ಜ್ಯೇ|| ಶು|| ೧೫ ಬುಧವಾರದಂದು ಬರೆದುದು. ಶ್ರವಣಬೆಳುಗೊಳದ ೯೫ ನೆಯ ನಂಬರಿನ ಪ್ರತಿ ಶಕ ೧೫೨೦ ನೆಯ (ಕ್ರಿ.ಶ. ೧೫೯೮) ಹೇವಿಳಂಬಿ ಸಂ|| ಆಶ್ವ|| ಶು|| ೨ ಚಂದ್ರವಾರದಂದು ಲಿಖಿತವಾದುದು. ಅದೇ ಮಠದ ೧೨೪ ನೆಯ ಪ್ರತಿಯ ಕಾಲ ಉಕ್ತವಾಗಿಲ್ಲವಾದರೂ ಲಿಪಿಶಾಸ್ತ್ರದೃಷ್ಟಿಯಿಂದ ಇವುಗಳಿಗಿಂತ ಪ್ರಾಚೀನವೆಂದು ಊಹಿಸಲು ಕಾರಣವಿದೆ. ಇವಲ್ಲದೆ ಮೈಸೂರು ಚಂದ್ರನಾಥ ಬಸ್ತಿ, ಜೈನವಿದ್ಯಾರ್ಥಿನಿಲಯದ ಭಂಡಾರ, ಸಾಲಿಗ್ರಾಮ, ಹೆಗ್ಗಡದೇವನಕೋಟೆ, ಸಂತೆಸರಗೂರು, ಹಾಸನಗಳಲ್ಲಿ ಒಂದೊಂದು ಪ್ರತಿಯನ್ನು ನೋಡಿದ್ದೇವೆ. ಮೈಸೂರು ಪ್ರಾಚ್ಯಕೋಶಾಗಾರದ ಮುಖ್ಯಾಧಿಕಾರಿಗಳಾದ ಶ್ರೀಮಾನ್ ಹೆಚ್. ಆರ್. ರಂಗಸ್ವಾಮಯ್ಯಂಗಾರ್ಯರಲ್ಲಿ ಕಾಲದೃಷ್ಟಿಯಿಂದ ಅತಿ ಪ್ರಾಚೀನವಲ್ಲದಿದ್ದರೂ ಶುದ್ಧವಾದ ಒಂದು ಪ್ರತಿ ಇದೆ. ಅದೇ ಕೋಶಾಗಾರದ ಸಹಾಯಾಧಿಕಾರಿಗಳಾದ ಶ್ರೀ ಎಚ್. ದೇವೀರಪ್ಪನವರು ಸಂಶೋಧನೆಗಾಗಿ ಆಯ್ದು ಪ್ರತಿಗಳನ್ನು ಶೇಖರಿಸಿದ್ದಾರೆಂದು ಕೇಳಿದ್ದೇವೆ. ಇನ್ನು ಪಂಪನೇ ಜೀವಿಸಿದ್ದ ಉತ್ತರ ಕರ್ಣಾಟಕದಲ್ಲಿ ಎಷ್ಟು ಪ್ರತಿಗಳು ಸಿಕ್ಕಬಹುದು!! ಇವುಗಳಲ್ಲನೇಕ ಒಂದು ಮತ್ತೊಂದರ ಪ್ರತಿಯಾಗಿರಬಹುದು. ಆದರೂ ಅವುಗಳನ್ನೆಲ್ಲಾ ಶೇಖರಿಸಿ ಭಾಗಗಳನ್ನು ತೋಲನಮಾಡಿ ವರ್ಗಗಳಾಗಿ ಭಾಗಿಸಿ, ತಲೆಮೊರೆಯಾಗಿ ವಿಂಗಡಿಸಿ ಪ್ರತಿಗಳ ಬಲಾಬಲವನ್ನು ನಿಷ್ಕರ್ಷೆಮಾಡಿ ಸಂಶೋಧನೆ ಮಾಡಿದ್ದರೆ ಹೆಚ್ಚು ಶಾಸ್ತ್ರೀಯವೂ ಶುದ್ಧವೂ ಆಗುತ್ತಿತ್ತೆಂದು ನಮ್ಮ ಭಾವನೆ.

ಅವಕಾಶವೂ ಬಹು ವಿರಳ. ಅವಕಾಶವಿದ್ದಾಗ ಎಲ್ಲ ಒಳ್ಳೆಯ ಪಾಠಗಳನ್ನೂ ಶೇಖರಿಸದಿದ್ದರೆ ಅವೆಲ್ಲವೂ ಎಂದೆಂದಿಗೂ ಇಲ್ಲವಾಗಬಹುದು.

ಗ್ರಂಥಪಾಠ ಮತ್ತು ಪಾಠಾಂತರಗಳು—ಸಂಪಾದಕರ ಶ್ರಮದಫಲವಾಗಿ ಈಗಿನ ಮುದ್ರಣದಲ್ಲಿ ಕೆಲವು ಪಾಠಗಳು ಹೆಚ್ಚು ಆಕರ್ಷಕವಾಗಿವೆ. ಹಿಂದಣ ಮುದ್ರಣದಲ್ಲಿ ೧ ನೆಯ ಆಶ್ವಾಸದ ೩೫ ನೆಯ ಪದ್ಯದ ನಾಲ್ಕನೆಯ ಪಾದದಲ್ಲಿ 'ಏನೀಸನ್ಮಾನಂದಂದನೋ' ಎಂದಿದೆ. ಅದಕ್ಕಿಂತ ಇಲ್ಲಿರುವ 'ಏನೀ**ಸಲ್**ಮನಂದಂದನೋ' ಎಂಬುದು ಉತ್ತಮವಾಗಿದೆ. ೧೧ ನೆಯ ಆಶ್ವಾಸದ ೧೦ ನೆಯ ಪದ್ಯದ ೨ ನೆಯ ಪಾದದಲ್ಲಿ ಹಿಂದಿನ ಮುದ್ರಣದ ಪ್ರತಿಯಲ್ಲಿ ವಿದ್ವಿಷ್ಟ ಫಣೀಂದ್ರ ಚಂದ್ರಕರವಂ ಎಂದಿದೆ. ಇದು ಅರ್ಥವಾಗುವುದಿಲ್ಲ. ಇಲ್ಲಿಯಾದರೋ 'ಚಂದ್ರಕಿರವಂ' ಎಂದಿದೆ. ಇದು ಸುಲಭವಾಗಿ ಅರ್ಥವಾಗುತ್ತದೆ, (ಚಂದ್ರಕಿ=ನವಿಲು). ೧೧-೧೫೨ ನೆಯ ಮೂರನೆಯ ಪಾದದಲ್ಲಿ 'ನಾನಾವನಕುಸುಮಲತೋತ್ತಂಸ' ಎಂದು ಹಿಂದಿನ ಪಾಠ; ಅದಕ್ಕಿಂತ ಈಗಿರುವ 'ಕುಸುಮಕೃತೋತ್ತಂಸ' ಎಂಬುದು ಹೆಚ್ಚು ಆದರಣೀಯವಾಗಿದೆ. ಆದರೆ ಇನ್ನು ಕೆಲವೆಡೆಗಳಲ್ಲಿ ಹಿಂದಿನ ಅರ್ಥವಾಗದ ಪಾಠ ಹಾಗೆಯೇ ಉಳಿದಿದೆ ೧೧ ನೆಯ ಆಶ್ವಾಸದ ೨೩ ನೆಯ ಪದ್ಯ ನೋಡಿ. ಇಲ್ಲಿಯ ೨ ನೆಯ ಪಾದದಲ್ಲಿ 'ಅಪಾಂಗಾಶ್ರೇಣಿಯೊಳ್' ಎಂದಿರುವುದು ಅನ್ವಯವಾಗುವುದಿಲ್ಲ. ಅದು 'ಅಪಾಂಗ ಶ್ರೇ**ಣಿಗಳ್**' ಎಂದಿರಬೇಕು (ಕಾವ್ಯಾವಲೋಕನದ ೯೩೧ ನೆಯ ಪದ್ಯನೋಡಿ). ಮತ್ತೆ ಕೆಲವೆಡೆಯಲ್ಲಿ ಉತ್ತಮ ಪಾಠವನ್ನು ಪಾಠಾಂತರವಾಗಿ ಕೊಟ್ಟಿರುವುದೂ ಉಂಟು. ೧ ನೆಯ ಆಶ್ವಾಸದ ೭೧ ನೆಯ ಪದ್ಯದ ೨ ನೆಯ ಪಾದದಲ್ಲಿ 'ಕಾಂಡಪಟ' ಎನ್ನುವದಕ್ಕೆ 'ಕನ್ನವಡ' ಎಂಬ ಪಾಠಾಂತರವಿದೆ. (ಕನ್ನವಡ ಎಂದರೆ ಗಾಜಿನ ಗೋಡೆ, ಅಥವಾ ಕನ್ನಡಿಗಳಿಂದ ಮಾಡಿದ ಗೋಡೆ). 'ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ **ಕನ್ನವಡ**ದಂತಿದೆ' ಎನ್ನುವುದು ಹೆಚ್ಚು ಸ್ವರಸ. ಬೇರೆ ಕೆಲವೆಡೆಗಳಲ್ಲಿ ಹೊಸ ಪಾಠಾಂತರಗಳನ್ನು ಗ್ರಂಥಪಾಠವನ್ನಾಗಿ ಆರಿಸಿಕೊಂಡಿರುವುದರಿಂದ ದೋಷವುಂಟಾಗಿದೆ. ೯ ನೆಯ ಆಶ್ವಾಸದ ೫೧ ನೆಯ ಪದ್ಯದಲ್ಲಿ 'ಪುಷ್ಟಂ' ಎನ್ನುವುದಕ್ಕೆ ಬದಲಾಗಿ 'ಪ್ಲುಷ್ಟಂ' ಎಂಬುದನ್ನು ಗ್ರಂಥಪಾಠವನ್ನಾಗಿಸಿರುವುದರಿಂದ ಛಂದೋಭಂಗವಾಗಿದೆ. ಕೆಲವೆಡೆಗಳಲ್ಲಿ ಅಪೂರ್ವವಾದ ಶಬ್ದರೂಪವನ್ನು ಉಳಿಸಿಕೊಂಡಿರುವುದು ಶ್ಲಾಘನೀಯವಾಗಿದೆ. 'ತಿರೀಟ' ಎಂಬ ಶಬ್ದವನ್ನು ನೋಡಿ. ಇದು 'ಕಿರೀಟ' ಎನ್ನುವುದಕ್ಕೆ ಪರ್ಯಾಯಪದ. ಇದು ಈ ಗ್ರಂಥದ ೭-೩೯, ೮-೬೪, ೧೪-೪೬ ಮುಂದಿನ ವಚನ, (ಇಲ್ಲಿ ತೀರಿಟ ಎಂದು ತಪ್ಪಾಗಿ ಬಿದ್ದಿದೆ) ೧೬-೫೨ ಇವುಗಳಲ್ಲಿ ಉಪಯುಕ್ತವಾಗಿವೆ. ಈ ಪದ ಕನ್ನಡ ಗ್ರಂಥಗಳಲ್ಲಿ

ಸರ್ವಸಾಮಾನ್ಯವಾಗಿ ಉಪಯುಕ್ತವಾಗಿಲ್ಲ. ಇದು ಸಂಸ್ಕೃತಪದ; ಆದರೂ ಅನೇಕ ಸಂಸ್ಕೃತ ಕೋಶಗಳಲ್ಲಿಯೂ ನಿಘಂಟುಗಳಲ್ಲಿಯೂ ಸಿಕ್ಕುವುದಿಲ್ಲ. ಮೋನಿಯರ್ ವಿಲಿಯಮ್ಸ್ ನಿಘಂಟಿನಲ್ಲಿ ಇದು ಕಿರೀಟಶಬ್ದದ ಅಪಭ್ರಂಶ ಎಂದಿದೆ. ಕಿಟಲ್ ನಿಘಂಟಿನಲ್ಲಿ ತಿರೀಟ=ಕಿರೀಟ, ಎಂದು ಬರೆದು ಚಂದ್ರಪ್ರಭ ಪುರಾಣದ ಓಲೆಯ ಪ್ರತಿಯ ೫-೮೦, ೭-೭ ಭಾಗವನ್ನು ಪ್ರಮಾಣವನ್ನಾಗಿ ಸೂಚಿಸಿದೆ. ಆದರೆ ದಿವಂಗತ ಎಸ್. ಜಿ. ನರಸಿಂಹಾಚಾರ್ಯರಿಂದ ಸಂಶೋಧಿತವಾದ ಆ ಗ್ರಂಥದ ಆ ಭಾಗಗಳಲ್ಲಿ ಕಿರೀಟ ಎಂದೇ ಇದೆ. 'ಶಬ್ದಾರ್ಥಕಲ್ಪದ್ರುಮ'ದಲ್ಲಿ ಮಾತ್ರ ತಿರೀಟ ಶಬ್ದಕ್ಕೆ ಕಿರೀಟವೆಂದು ಅರ್ಥಕೊಟ್ಟು 'ತೀರ್ಯತೆ ಅನೇನ ಶಿರೋಬಾಧಾ' ಎಂಬ ನಿಷ್ಪತ್ತಿಯನ್ನೂ 'ಉಣಾದಿಕೋಶಃ' ಎಂಬ ಪ್ರಮಾಣವನ್ನೂ ಸೂಚಿಸಿದೆ. ನಾವು ಈ ಸಂದರ್ಭದಲ್ಲಿ ನೋಡಿದ ಆದಿಪುರಾಣದ ಕೈಬರಹದ ಪ್ರತಿಗಳಲ್ಲೆಲ್ಲಾ (೫ ಪ್ರತಿಗಳು) ಮೇಲೆ ಹೇಳಿದೆಡೆಗಳಲ್ಲೆಲ್ಲಾ ತಿರೀಟ ಎಂದೇ ಇದೆ. ಇದನ್ನು ಉಳಿಸಿಕೊಂಡಿರುವದು ಶ್ಲಾಘನೀಯ. ಸಾಧ್ಯವಿದ್ದಿದ್ದರೆ ಈ ಶಬ್ದ ಉಪಯೋಗವಾಗಿರುವ ಇತರ ಗ್ರಂಥಗಳ ಪ್ರಯೋಗಗಳನ್ನು ಪುಟದಡಿಯಲ್ಲಿಯೋ ಶಬ್ದಕೋಶದಲ್ಲಿಯೋ ಸೂಚಿಸಿದ್ದರೆ ಚೆನ್ನಾಗಿತ್ತು.

ಪ್ರಸಕ್ತ ಗ್ರಂಥದಲ್ಲಿ ಪಾಠಾಂತರಗಳು ಯಥೇಷ್ಟವಾಗಿ ಕೊಡಲ್ಪಟ್ಟಿವೆ. ಆದರೆ ಅವುಗಳಲ್ಲಿ ಒಂದು ಕ್ರಮವೂ ಎಚ್ಚರಿಕೆಯೂ ಇಲ್ಲವೆಂದು ಸಂಕೋಚದಿಂದ ಸೂಚಿಸಬೇಕಾಗಿದೆ. (೧) ಶುದ್ಧ ಶೋಧನದೃಷ್ಟಿಯಿಂದ ಅನೇಕ ಅಪ್ರಯೋಜಕವಾದುವು. ಅಂತಹವುಗಳಿಂದ ಪಂಡಿತವಾಚಕರಿಗೆ ವಿಶೇಷ ಶ್ರಮವೂ ಜಿಗುಪ್ಸೆಯೂ ಭ್ರಮೆಯೂ ಉಂಟಾಗುತ್ತದೆ. (೨) ಇಲ್ಲಿಯ ಸಂಶೋಧನೆಗೆ ಚ. ಅ. ಬ. ಪ್ರತಿಗಳು ಉಪಯುಕ್ತವಾಗಿವೆ. ಆದರೆ ಪಾಠಾಂತರಗಳಲ್ಲಿ ಚ. ಅ. ಬ. ಗಳೇ ಅಲ್ಲದೆ ಕ. ಖ. ಗ. (ಪು. ೧೮ ಪಾ. ೧, ೩. ೮) ನಿ (ಪು. ೩೭-೬) ಆ (ಪು. ೪೧-೨ ಪು. ೨೨೫-೨) ಆ II (ಪು. ೨೬೧-೫) I ಆ II (ಪು. ೨೧೩-೧೩)ಪಾಠಾಂತರಗಳಿವೆ. ಕ. ಖ. ಗ. ಏನೋ ಮುದ್ರಿತ (ಚ) ಪ್ರತಿಯಲ್ಲಿರುವ ಅವಾಂತರ ಪಾಠಗಳು. ಉಳಿದುವಕ್ಕಾದರೂ ಗ್ರಂಥಾರಂಭದಲ್ಲಿ ವಿವರಣೆ ಬೇಡವೇ? (೩) ಪಾಠಾಂತರಗಳನ್ನು ಕೊಡುವಾಗ ಅನೇಕೆಡೆಗಳಲ್ಲಿ ಒಂದೋ ಎರಡೋ ಅಕ್ಷರಕ್ಕೆ ಅಪ್ರಯೋಜಕವಾಗಿ ದೀರ್ಘಭಾಗಗಳು ಪಾಠಾಂತರಗಳಾಗಿ ಕೊಟ್ಟಿವೆ. (೨-೧೦, ೧೦೭-೧-೨, ೧೪೩-೧, ೧೫೦-೧, ೨೬೯-೩). (೪) ಕೆಲವು ಎಲ್ಲಿಗನ್ವಯಿಸುತ್ತವೆಯೋ ಗೊತ್ತಾಗುವುದಿಲ್ಲ (೪೭-೧). (೫) ಕೆಲವೆಡೆಗಳಲ್ಲಿ ಪಾಠಕ್ಕೂ ಪಾಠಾಂತರಕ್ಕೂ ವ್ಯತ್ಯಾಸವಿಲ್ಲ (೯೩-೩, ೧೩೮-೪). (೬) ಒಂದೇ ಅಕ್ಷರಕ್ಕೆ ಪಾಠಾಂತರವನ್ನು ಸೂಚಿಸುವಾಗ ಸಂಖ್ಯೆಯನ್ನು ಹಿಂದೆ, ತಲೆಯಮೇಲೆ (೧ ನೆಯ ಆಶ್ವಾಸ ಪೂರ್ತಿ

ತಿದ್ದುಪಡಿ

ಆದಿಪುರಾಣದ ವಿಮರ್ಶೆಯ ಸಂಬಂಧದಲ್ಲಿ ಈ ತಿದ್ದುಪಡಿಯನ್ನು ಸೇರಿಸಿಕೊಳ್ಳಬೇಕಾಗಿ ವಿನಂತಿ.

೧. 'ಗೃಹಕೋಕಿಲ' ಎಂಬ ಶಬ್ದಾರ್ಥದ ವಿಷಯದಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರು ಕಿಟಲ್ ನಿಘಂಟಿನಲ್ಲಿರುವ 'ಗೃಹಪಿಕ' ಎಂಬ ಶಬ್ದವನ್ನು ಗಮನಕ್ಕೆ ತಂದಿದ್ದಾರೆ. 'ಗೃಹಪಿಕ' ಎಂಬದು ಗೃಹಗೋಧಿಕಾ ಎಂಬುದಕ್ಕೆ ಸಮಾನ ಪದವೆಂದೂ ಅದಕ್ಕೆ ಮಂಗರಾಜ ನಿಘಂಟುವಿನ ಆಧಾರವಿದೆಯೆಂದೂ ಅಲ್ಲಿ ಸೂಚಿತವಾಗಿದೆ. ಆದುದರಿಂದ 'ಗೃಹಕೋಕಿಲ' ಎಂಬುದು 'ಗೃಹಪಿಕ' ಎಂಬುದರ ರೂಪಾಂತರವಿರಬಹುದೇ ?

೨. ರೇಫಸಹಿತವಾದ ವ್ಯಂಜನಗಳನ್ನು ಐಚ್ಛಿಕವಾಗಿ ದ್ವಿತ್ವವನ್ನಾಗಿ ಉಚ್ಚರಿಸುವದಕ್ಕೆ ಪಾಣಿನಿಯ 'ಅಚೋಽಹರಾಭ್ಯಾಂ ದ್ವೇ' (೮-೪-೪೬) ಎಂಬ ಸೂತ್ರದ ಪ್ರಕಾರ ಅವಕಾಶವಿದೆಯೆಂದು ಶ್ರೀ ಎನ್. ಶಿವರಾಮಶಾಸ್ತ್ರಿಗಳಿಂದ ತಿಳಿದು ಬಂದಿದೆ. ಈ ಪದ್ಧತಿ ಕನ್ನಡ ಗ್ರಂಥಗಳಲ್ಲಿ ರೂಢಿಯಲ್ಲಿಲ್ಲವೆಂದು ಮಾತ್ರ ತಿಳಿದುಕೊಳ್ಳಬಹುದು.

'ಸ್ವಚ್ಛಂದಂ'

ಯಾಗಿ) ಮುಂದೆ (ಆಮೇಲೆಲ್ಲ) ಕೆಲವೆಡೆಗಳಲ್ಲಿ ಹಿಂದೆಮುಂದೆ (೨೯-೫೫) ಕೊಟ್ಟಿರುತ್ತದೆ. ಇದರಿಂದ ಯಾವ ಅಕ್ಷರಕ್ಕೆ ಪಾಠಾಂತರವೆಂಬುದನ್ನು ಗೊತ್ತುಮಾಡುವುದು ಕಷ್ಟವಾಗುತ್ತದೆ. (೭) ಅನೇಕಡೆಗಳಲ್ಲಿ ಪಾಠಾಂತರ ಅಂಗೀಕೃತಪಾಠಕ್ಕೆ ಹೊಂದುವುದಿಲ್ಲ. ಮೇಲಿನ ಸಂಖ್ಯೆಗಳಿಂದ ಸೂಚಿತವಾದ ಪದ್ಯಭಾಗಕ್ಕೆ ಹೆಚ್ಚಾಗಿಯೋ ಕಡಿಮೆಯಾಗಿಯೋ ಇರುತ್ತದೆ. ೯ ನೆಯ ಆಶ್ವಾಸದ ೬ ನೆಯ ಪದ್ಯದ ಮೊದಲನೆಯ ಪಾದದ 'ಮುದ್ದಂ' ಎಂಬುದಕ್ಕೆ ಪಂಪಭಾರತದಲ್ಲಿ 'ಉತ್ಸಂಚ' ಎಂದಿದೆ ಎಂದು ಅಡಿಟಿಪ್ಪಣಿ ಇದೆ. ಪಾಠಾಂತರ ಮೇಲಿನ ಪಾಠದ ಭಾಗಕ್ಕೆ ಹೊಂದುವುದಿಲ್ಲ. ವಾಸ್ತವವಾಗಿ ಈ ಪೂರ್ಣ ಪದ್ಯವೂ ಪಂಪಭಾರತದ ೧೪-೨೨ ನೆಯ ಪದ್ಯವೂ ಒಂದೇ. 'ಎಡೆಗೊಂಡಿರಿಮುತ್ಸಂಚಂ' ಎಂಬ ಪೂರ್ಣಪಾದದ ಪಾಠಾಂತರ ಕೊಟ್ಟಿದ್ದರೆ ಸುಗಮವಾಗುತ್ತಿತ್ತು. (೮) ಪಂಪನ ಕಾಲದಲ್ಲಿ ಪೂರ್ವದ ಹಳಗನ್ನಡ ರೂಪಗಳೂ ಹಳಗನ್ನಡ ರೂಪಗಳೂ ಜೊತೆಯಲ್ಲಿಯೇ ಉಪಯೋಗವಾಗುತ್ತಿದ್ದಿರಬಹುದು. ಆಧಾರವಿಲ್ಲದಿದ್ದಾಗ ಪ್ರತಿಗಳಲ್ಲಿ ಹೇಗಿದೆಯೋ ಹಾಗೆಯೇ ಇಟ್ಟುಕೊಳ್ಳಬಹುದು. ಪ್ರತಿಗಳ ಆಧಾರವಿರುವಾಗ ಅವುಗಳನ್ನು ಒಂದು ಸಲ ಅಂಗೀಕೃತಪಾಠವನ್ನಾಗಿಯೂ ಮತ್ತೊಂದು ಸಲ ಪಾಠಾಂತರವನ್ನಾಗಿಯೂ ಉಪಯೋಗಿಸಿದೆ. ಇದರಲ್ಲಿ ಒಂದು ಕ್ರಮವಿದ್ದರೆ ಒಳ್ಳೆಯದಲ್ಲವೆ? (೯) ಪೂರ್ವಪುರಾಣದ ಪಾಠಾಂತರಗಳನ್ನೂ ಸಂವಾದಭಾಗಗಳನ್ನೂ ಎಲ್ಲೆಡೆಯಲ್ಲಿಯೂ ಕನ್ನಡ ಲಿಪಿಯಲ್ಲಿಯೇ ಕೊಟ್ಟು ೨೩೩, ೨೩೫ ನೆಯ ಪುಟಗಳಲ್ಲಿ ದೇವನಾಗರಿ ಲಿಪಿಯಲ್ಲಿ ಕೊಟ್ಟಿರುವುದಕ್ಕೆ ಕಾರಣ ತಿಳಿಯುವುದಿಲ್ಲ.

ಪ್ರಾಸ ಮತ್ತು ಛಂದಸ್ಸು—ಕನ್ನಡ ಚಂಪು ಮತ್ತು ಪದ್ಯಗ್ರಂಥಗಳ ಸಂಶೋಧನೆಯನ್ನು ಮಾಡುವಾಗ ಪ್ರಾಸ, ಛಂದಸ್ಸುಗಳಿಗೆ ಹೆಚ್ಚು ಗಮನ ಕೊಡುವುದು ಆವಶ್ಯಕ. ಈಗಿನ ಮುದ್ರಣದಲ್ಲಿ ೧ ನೆಯ ಆಶ್ವಾಸದ ೨೪ ನೆಯ ಪದ್ಯದ ಮೊದಲನೆಯ ಪಾದದಲ್ಲಿಯೂ, ೪ ನೆಯ ಆಶ್ವಾಸದ ೮೭ ನೆಯ ಪದ್ಯದ ಮೊದಲನೆಯ ಪಾದದಲ್ಲಿಯೂ ೪ ನೆಯ ಆಶ್ವಾಸದ ೫೫ ನೆಯ ಪದ್ಯದ ೩ ನೆಯ ಪಾದದಲ್ಲಿಯೂ ಪ್ರಾಸಭಂಗವಾಗಿದೆ. ಅವು ಕ್ರಮವಾಗಿ 'ಇರು'[2], 'ಅಟಿಪದೆ', 'ಲ್ಲಗೆ' ಆಗಿರಬೇಕು. ಮೊದಲೆರಡು ಪದ್ಯಗಳು ಗ್ರಂಥಾಂತ್ಯದಲ್ಲಿರುವ ಅಕಾರಾದಿಯಲ್ಲಿಯೂ ತಪ್ಪಾಗಿಯೇ ಇವೆ. ಉಪೋದ್ಘಾತದ ೨೬ ನೆಯ ಪುಟದಲ್ಲಿ '೨ ನೆಯ ಆಶ್ವಾಸದ ೫೧ ನೆಯ ಪದ್ಯದ ಮೂರನೆಯ ಪಾದದಲ್ಲಿ ಎರಡಕ್ಷರಗಳು ಕಡಿಮೆ

[2] ಉಪೋದ್ಘಾತದ ೧೫ ನೆಯ ಪುಟದಲ್ಲಿಯೂ 'ಇದು' ಎಂದು ತಪ್ಪಾಗಿಯೇ ಪ್ರಯೋಗವಾಗಿದೆ.

ಯಾಗಿವೆ. ಇದು ಗ್ರಂಥಪಾತ' ಎಂದು ಉಕ್ತವಾಗಿದೆ. ಇದು ಸರಿಯಲ್ಲ. ಸರಿಯಾಗಿ ಸಂಶೋಧನೆ ಮಾಡಿದರೆ ಸರಿಹೋಗುತ್ತದೆ. ಆ ಪದ್ಯದಡಿಯಲ್ಲಿಯೇ 'ಬರೇಚರಿಯರುಮಂಬರೇಚರರುಮ' ಎಂಬ (ಅ. ಬ.) ಪಾಠ ಸೂಚಿತವಾಗಿದೆ. ಅದನ್ನು ಸರಿಯಾಗಿ ಅಳವಡಿಸಿಕೊಂಡರೆ

ತ್ರರನಭಿಯೋಗದಿಂದತಿಬಲಂಗೆ ನಿಯೋಜಿಸಿ ಮಾಣ್ದರಂಬರೇ
ಚರಿಯರುಮಂಬರೇಚರರುಮಣ್ಮಳವಟ್ಟಿರೆ ಜೈನದೀಕ್ಷೆಯಂ ||

ಎಂಬ ೩-೪ ನೆಯ ಪಾದಗಳು ಸಮನ್ವಯವಾಗುತ್ತವೆ. ಮೈಸೂರು ಪ್ರಾಚ್ಯಕೋಶಾಗಾರದ ಕೆ ೨೩ ನೆಯ ನಂಬರಿನ ಪ್ರತಿಯ ಪಾಠ ಹೀಗೆಯೇ ಇದೆ. ಉಪೋದ್ಘಾತದ ಅದೇ ಪುಟದಲ್ಲಿ ಮೇಲಿನ ಟಿಪ್ಪಣಿಯ ಕೆಳಗೆ 'ಱಳಕುಳಪ್ರಾಸವೂ ಕಂಡು ಬಂದಿದೆ. ೬-೯೪ ನೋಡಿ' ಎಂಬ ಮತ್ತೊಂದು ಸೂಚನೆ ಇದೆ. ಇದೂ ಸರಿಯಲ್ಲ. ೬-೯೪ ನೆಯ ಪದ್ಯದ ಪ್ರಾಸಸ್ಥಾನದಲ್ಲಿ ಬರುವ (ಎಳಸುವ, ಗಿಳಿಯ ಬಿಚ್ಚಳಿಪ, ಕಳದೊಳ್) ಳಕಾರಗಳಾವುವೂ ಱಳವಲ್ಲ. ಎಲ್ಲ ಕುಳವೇ. ಅವಕ್ಕೆ ಬದಲಾಗಿ ಮೊದಲನೆಯ ಪಾದದಲ್ಲಿ ಬರುವ ಗಳಪು ಱಳವಾಗಿರಬೇಕು, ೧೧-೮೦ ರಲ್ಲಿಯೂ ಹಾಗೆಯೇ. ೧೧ ನೆಯ ಆಶ್ವಾಸದ ೧೧೯ ನೆಯ ಪದ್ಯದ ೨ ನೆಯ ಪಾದದಲ್ಲಿ ಒಂದು ಮಾತ್ರೆ ಹೆಚ್ಚಿದೆಯೆಂದು ಅಡಿ ಟಿಪ್ಪಣಿಯಿದೆ; ಆದರೆ

ಮಿಕ್ಕೆಸೆ | ವಾಮೋ | ದಮಿದಱ | ತಣ್ಗಂ | ಪಿನೊಳೊಳ

ಎಂಬುದು ಸರಿಯಾಗಿಯೇ ಇದೆ; ಪಾದಾಂತ್ಯದಲ್ಲಿರಬೇಕಾದ ಗುರುವಿಲ್ಲ. ಪ್ರಾಚ್ಯಕೋಶಗಾರದ ಕೆ. ಎ. ೭ ರಲ್ಲಿರುವ ಹಾಗೆ ಕೊನೆಯ ಭಾಗವನ್ನು 'ತಣ್ಗಂಪಿನೊಳೊಳ್ಪೊಕ್ಕವೆನೆ' ಮಾಡಿಕೊಳ್ಳಬಹುದು. ಹಾಗೆಯೇ ೧೧ ನೆಯ ಆಶ್ವಾಸದ ೧೪೮ ನೆಯ ಪದ್ಯದ ೪ ನೆಯ ಚರಣದಲ್ಲಿ ೨ ಮಾತ್ರೆ ಹೆಚ್ಚಿದೆಯೆಂದು ಟಿಪ್ಪಣಿಯಿದೆ. ಇದು ಮಾಲಿನೀವೃತ್ತ. ನಾಲ್ಕನೆಯ ಪಾದವಾದ

ಸ್ತನದೊ | ಳಮರ್ದ | ಹಸ್ತಸ್ವ | ಸ್ತಿಕಂಗ | ಳ್ಬಿಡಂಗಂ

ಎಂಬುವುದರಲ್ಲಿ ನನಮಯ ಯಗಣಗಳು ಸರಿಯಾಗಿವೆ. ಎರಡನೆಯ ಗಣದ 'ರ್ದ' ಶಿಥಿಲದ್ವಿತ್ವ. ಇಲ್ಲಿಯೂ ದೋಷವಿಲ್ಲ. ಮತ್ತು ೧೪ ನೆಯ ಆಶ್ವಾಸದ ೧೦೩ ನೆಯ ಪದ್ಯದ ೩ ನೆಯ ಭಾಗಕ್ಕೆ ಕೊಟ್ಟಿರುವ

ದನ್ನರ | ರಾಂಪ | ಸ್ನರೆಂಬ | ನಿಮ್ಮರ | ಸನಗೆ | ರ್ವೋ

ಎಂಬ (ಜ) ಪಾಠದಲ್ಲಿ ಛಂದೋಭಂಗವಿದೆಯೆಂದು ಹೇಳಿರುವುದೂ ಸರಿಯಲ್ಲ. ಇವುಗಳಿಗೆಲ್ಲ ಬದಲಾಗಿ ೩ ನೆಯ ಆಶ್ವಾಸದ ೯೦ ನೆಯ ಪದ್ಯದ ೪ ನೆಯ ಪಾದದಲ್ಲಿ

೧೨ ನೆಯ ಅಕ್ಷರವಾದ 'ಕ' ಹೆಚ್ಚು. ಅದೇ ಆಶ್ವಾಸದ ೬೯ ನೆಯ ಪದ್ಯದ ೨ ನೆಯ ಪಾದದಲ್ಲಿ ೧೧ ನೆಯ ಅಕ್ಷರವಾಗಿ 'ಗ' ಎಂಬ ಮತ್ತೊಂದು ಅಕ್ಷರ ವಿರಬೇಕು. ಉಪೋದ್ಘಾತದಲ್ಲಿ ಉದಹರಿಸಿರುವ ಪಂಪಭಾರತದ ೪-೨೯ ನೆಯ ಪದ್ಯವಾದ 'ಚಾಗದ ಭೋಗದ' ಎಂಬ ಪದ್ಯದ ೧ ನೆಯ ಪಾದದಲ್ಲಿ 'ಸಿ' ಎಂಬ ಅಕ್ಷರ ಹೆಚ್ಚಾಗಿದೆ.

ಪ್ರಸಕ್ತ ಗ್ರಂಥದಲ್ಲಿ ವಾಚಕರ ಸೌಕರ್ಯಕ್ಕಾಗಿ ಅಪೂರ್ವವಾದ ಮಾಲಿನೀ, ಪೃಥ್ವೀ, ಉಜ್ವಳ ಮೊದಲಾದ ವೃತ್ತಗಳನ್ನು ನಿರ್ದೇಶಿಸಿದೆ. ಆದರೆ ಅದರಲ್ಲಿಯೂ ಒಂದು ನಿಯಮವಿಲ್ಲ. ಎಷ್ಟೋ ಅಂತಹ ವೃತ್ತಗಳಿಗೆ (೧೦-೨೭, ೧೧-೧೫, ೧೧-೨೩, ೧೧-೩೦, ೧೧-೫೩, ೧೩-೮೩ ರಿಂದ ೯೦) ಸೂಚನೆಯೇ ಇಲ್ಲ. ಸೂಚಿತ ವಾಗಿರುವೆಡೆಗಳಲ್ಲಿಯೂ ವೃತ್ತಗಳ ಹೆಸರುಗಳು ಶಾಜ್ರ್ಲಾ, (೫೫) ಮಾಲಿನಿ (೧೭೫, ೨೦೩) ಪೃಥ್ವಿ (೧೭೬, ೨೭೫) ಎಂದು ಅಶುದ್ಧವಾಗಿವೆ. ಇವೆಲ್ಲಕ್ಕಿಂತಲೂ ಹದಿನಾರನೆಯ ಆಶ್ವಾಸದ ೭೫ ನೆಯ ಪದ್ಯದ ಮುಂದಿನ ಭಾಗವನ್ನು ವಚನವೆಂದು ಸೂಚಿಸಿ ದಂಡಾಕಾರವಾಗಿ ಕೊಟ್ಟಿದೆ. ಅದು ಒಂದು ಕಂದಪದ್ಯ. ಅದರ ಸರಿಯಾದ ರೂಪವಿದು.

ಭರತಯತಿಪತಿಯ ತದನಂ
ತರದೊಳ್ ತದ್ವೃಷಭಸೇನಗಣನಾಥ ಪುರ|
ಸ್ಸರ ಪುರುತನಯರ್ ಕ್ರಮದೊಳ್
ಪರಮಸುಖಾಸ್ಪದಮನನಿಬರುಂ ಕೈಕೊಂಡರ್||

ಶಬ್ದರೂಪಗಳು ಮತ್ತು ಮುದ್ರಣ ದೋಷಗಳು—ಪ್ರಮಾದದಿಂದ ಉಳಿದುಕೊಂಡಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಸಂಶೋಧಕರೇನೋ ಒಪ್ಪೋಲೆಯನ್ನು ಕೊಟ್ಟಿದ್ದಾರೆ. ಅಲ್ಲಿ ನಿರ್ದೇಶವಿಲ್ಲದ ಅನೇಕ ತಪ್ಪುಗಳು ಉಳಿದು ಕೊಂಡಿವೆ. ಕೆಲವು ಪ್ರಮಾದಗಳಲ್ಲವೆಂಬ ಭಾವನೆಯನ್ನೂ ಮೂಡಿಸುತ್ತವೆ. ಸಂಭಿನ್ನಮತಿ (ಉಪೋ ೩೩) ಸುಶೀಮಾನಗರ (೪೨) ಕುರುಮಿದ (೩೫) ಪುಷ್ಕಳಾ ವತಿ (೪೯) ಜಿನಶೇನ (೧೩೪) ಮೊದಲಾದ ಅಂಕಿತನಾಮಗಳೂ, ಶಕಟರೇಪದಿಂದ ಕೂಡಿರಬೇಕಾದ ಬೆರಗು (ಪು. ೬೫ ಪ. ೬೩) ಎರಗು (ಪು. ೭೩ ಪ. ೯೦) ಮರೆದು (ಪು. ೯೪ ಪ. ೬೦) ಎಂಬ ಶಬ್ದಗಳೂ, ಭೋಧಿಸು (ಪು. ೫೫) ಲತಾಗ್ರಹ (ಪು. ೫೭) ಧ್ರೌವ್ಯಾತ್ಮ (ಪು. ೨೫) ಆಯುಷ್ಯ (೬೯) ಬ್ರಮ್ಹೇಂದ್ರ (೬೮) ಎಂಬ ಅಪಶಬ್ದಗಳೂ ಈ ಜಾತಿಗೆ ಸೇರುವುವು. ಪ್ರಮಾದದಿಂದುಂಟಾದ ಮುದ್ರಣ ದೋಷವೇ ಆದರೂ ಆಶ್ವಾಸಾಂತ್ಯ ಗದ್ಯಗಳಲ್ಲಿ ಕಂಡುಬರುವ ರಾಕ್‌ಚಂದ್ರ

(ಪು. ೧೯) ಮಖಚಂದ್ರ (ಪು ೩೦೩) ಪ್ರಣೆತ (೩೦೩) ದ್ವೀತಿಯೀಶ್ವಾಸಂ (೪೬) ಎಂಬುವೂ ಪುಟಗಳ ಮೇಲುಗಡೆ ದಪ್ಪಕ್ಷರದಲ್ಲಿ ಕಾಣುವ ಆದಿಪುರಾಣ (ಪು. ೧೬೬, ೧೭೪) ದ್ವಿತಿಯಾಶ್ವಾಸಂ (೨೩-೨೫-೩೧) ಏಕದಶಾಶ್ವಾಸಂ (೨೭೧) ಏಕಾದಶಮಾಶ್ವಾಸಂ (೨೭೦ ರಿಂದ ೩೦೩ ರ ವರೆಗೆ) ಎಂಬುವೂ ಇಂಗ್ಲಿಷ್ ಉಪೋದ್ಘಾತದಲ್ಲಿ ಆದಿಪುರಾಣದ ರಚನೆಯ ಕಾಲವು ೬೪೧ ಎಂದಿರುವುದೂ ಗ್ರಂಥದ ಸೌಂದರ್ಯಕ್ಕೆ ಕುಂದುತರುವಂತಹದಾಗಿದೆ.

ಗ್ರಂಥದ ಮೊದಲಿಂದ ಕೊನೆಯ ವರೆಗೆ ರೇಫಯುತವಾದ ವ್ಯಂಜನಗಳೆಲ್ಲ ದ್ವಿತ್ವವಾಗಿ ಅಚ್ಚಾಗಿವೆ (ಸಂಪರ್ಕ್ಕ, ವರ್ಗ್ಗ, ಚರ್ಚ್ಚೆ, ಕಾರ್ತ್ತಿಕೇಯ, ನಿರ್ದ್ಧರಿತ, ಕರ್ಮ್ಮ, ಪರ್ಯ್ಯಾಯ, ಸ್ಪರ್ಶ್ಶನ ಇತ್ಯಾದಿ). ಇವು ಪ್ರತಿಮಾಡುವವರು ಅರ್ಥವಿಲ್ಲದೆ ಮಾಡಿಕೊಂಡಿರುವ ಸಂಕೇತ. ಇವುಗಳೆಲ್ಲ ಸಂಸ್ಕೃತ ಶಬ್ದಗಳು. ಇವುಗಳ ರೂಪನಿಷ್ಪತ್ತಿಯಲ್ಲಿ ದ್ವಿತ್ವಕ್ಕೆ ಕಾರಣವಿಲ್ಲ. ಅಲ್ಲದೆ ಕಣ್ಣಿಗೆ ಬಹು ಅಸಹ್ಯವಾಗಿ ಕಾಣುತ್ತದೆ. ಕೆಲವಂತು ಬಹು ವಿಕಾರವಾಗಿ ಕಾಣುತ್ತವೆ. ಜ್ಯೋತಿರ್ಬ್ಭಜಾತ, (ಪು ೧೪೫) ದರ್ಬ್ಭಶಯನ (೩೨೧) ಮೊದಲಾದುವನ್ನು ನೋಡಿ. ಇವುಗಳಲ್ಲಿಯೂ ಏಕರೂಪತೆಯಿಲ್ಲ (ಸಂಪೂರ್ಣ್ಣಂ—೩೩೧, ಸಂಪೂರ್ಣಂ—೩೮೯).

ಉಪೋದ್ಘಾತ—ಅನುಬಂಧಗಳು. ಹಿಂದೆಯೇ ತಿಳಿಸಿರುವಂತೆ ಬಹು ಉಪಯುಕ್ತವಾದ ಭಾಗಗಳು ಇವು. ಉಪೋದ್ಘಾತದಲ್ಲಿ ಪೂರ್ವಪುರಾಣವೇ ಮೊದಲಾದ ಸಂಸ್ಕೃತಗ್ರಂಥಗಳಿಗೆ ಪಂಪನ ಋಣವೆಷ್ಟೆಂಬುದನ್ನು ಬಹು ದೀರ್ಘವಾಗಿ ಸೂಚಿಸಿದೆ. ಅಲ್ಲದೆ ಅಲ್ಲಿಯೆ (ಪುಟ ೨೨) "ಪಂಪನು ಹೀಗೆ ಪೂರ್ವಪುರಾಣವನ್ನು ಅನುಸರಿಸುತ್ತ ಹೋಗಿರುವುದರಿಂದ ತನ್ನ ಆದಿಪುರಾಣವನ್ನು ಅತ್ಯಲ್ಪಕಾಲದಲ್ಲಿ ರಚಿಸುವುದು ತೀರ ಸುಲಭವಾಯಿತು ಎಂಬಲ್ಲಿ ಎಳ್ಳಷ್ಟೂ ಸಂಶಯವಿಲ್ಲ" ಎಂಬ ವಾಕ್ಯವೂ ಉಕ್ತವಾಗಿದೆ. ಇದರಿಂದ ಪಂಪನ ವ್ಯಕ್ತಿತ್ವಕ್ಕೆ ಸ್ವಲ್ಪ ಊನಬರುವುದಲ್ಲದೆ ಅವನ ಸ್ವಂತಶಕ್ತಿಯೆಷ್ಟು ಸ್ವೀಕರಣಭಾಗವೆಷ್ಟು ಎನ್ನುವ ಸಮಸ್ಯೆ ತಲೆದೋರುತ್ತದೆ. ಈ ಸಂದರ್ಭದಲ್ಲಿ ಪಂಪನು ಮೂಲವನ್ನು ಬಿಟ್ಟು ಸ್ವತಃ ಬರೆದಿರುವ ಭಾಗಗಳೆಷ್ಟು? ಅಲ್ಲಿ ಅವನು ಮೂಲಕ್ಕಿಂತ ಹಿಗ್ಗಿದ್ದಾನೆಯೇ ಕುಗ್ಗಿದ್ದಾನೆಯೇ? ಅದರಿಂದ ಕಾವ್ಯಕ್ಕಾಗಿರುವ ಲಾಭನಷ್ಟಗಳೇನು ಎಂಬುವದನ್ನು ಸ್ವಲ್ಪ ವಿಶದಪಡಿಸಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತೆಂದು ಹೇಳಬಯಸುತ್ತೇವೆ. ನಾಮ ಮತ್ತು ಪಾರಿಭಾಷಿಕ ಶಬ್ದಕೋಶಗಳಲ್ಲಿ ವಿವರಣೆಗಾಗಿ ಉಪಯೋಗಿಸಿರುವ ಭಾಷೆ ಕೃತಕ (ವರದತ್ತ, ವೈಜಯಂತ ನೋಡಿ). ಕೆಲವು ಚರ್ವಿತ ಚರ್ವಣ (ಆಚಾಮ್ಲವರ್ಧನತಪ ನೋಡಿ). ಕೆಲವು ಶಬ್ದಗಳ ವಿವರಣೆ ಇತ್ತೀಚಿನ ಚಕ್ರಬಂಧ ಸ್ಪರ್ಧೆಗಳಲ್ಲಿ ಕೊಡುವ

ವಿವರಣೆಯಂತಿದೆ (ಅಕ್ಷೀಣಾಭಿಧಾನ, ಆಯುಕರ್ಮ, ಉಚ್ಚೈರ್ಗೋತ್ರ ನೋಡಿ). ಕಠಿಣ ಶಬ್ದಕೋಶದಲ್ಲಿ ಕೆಲವು ಅಪೂರ್ವ ಶಬ್ದಗಳಿಗೆ ಬೇರೆಬೇರೆ ಪ್ರಯೋಗಗಳನ್ನು ಸೂಚಿಸಿದೆ. ಉಳಿದುವಕ್ಕೂ ಸೂಚಿಸಿದ್ದರೆ ಚೆನ್ನಾಗಿತ್ತು. ಗೃಹಕೋಕಿಲಾ (೨-೧೪೮) ಎಂಬ ಶಬ್ದಕ್ಕೆ ಹಲ್ಲಿ ಎಂದು ಅರ್ಥಕೊಟ್ಟಿದೆ. ಇದಕ್ಕೆ ಆಧಾರ ಮತ್ತು ಪ್ರಯೋಗಗಳು ಸಿಕ್ಕುವುದಿಲ್ಲ. ಎಸ್. ಜಿ. ನರಸಿಂಹಾಚಾರ್ಯರು ಗೃಹಕಪೋತ ಎಂದರ್ಥಮಾಡಿದ್ದಾರೆ. ಗೃಹಕೋಕಿಲ ಎಂಬ ಶಬ್ದ ಯಾವ ಕೋಶಗಳಲ್ಲಿಯೂ ನಿಘಂಟುಗಳಲ್ಲಿಯೂ ಸಿಕ್ಕುವುದಿಲ್ಲ. ಗೃಹಗೋಧಿಕಾ ಎಂಬ ಶಬ್ದವು ಮಾತ್ರ ಅಮರ ಕೋಶ ಮತ್ತು ಇತರ ನಿಘಂಟುಗಳಲ್ಲಿ ಹಲ್ಲಿ ಎಂಬರ್ಥದಲ್ಲಿ ಉಪಯುಕ್ತವಾಗಿವೆ. ಪಂಪನಿಗೆ ಮೂಲವಾದ ಜಿನಸೇನರ ಆದಿಪುರಾಣದ

> ಅಥ ಅನ್ಯೇದ್ಯುಃ ಅಮುಷ್ಯಾಂಗೆ ಪೇತುಃ ಶೋಣಿತ ಬಿಂದವಃ
> ಮಿಥಃ ಕಲಹ ವಿಶ್ಲಿಷ್ಟ **ಗೃಹಗೋಧಿಕ** ವಾಲದೇಃ||
>
> (ಆದಿ. ಪರ್ವ ೫, ಶ್ಲೋ. ೧೦೫)

ಎಂಬ ಭಾಗದಲ್ಲಿ ಗೃಹಗೋಧಿಕ ಎಂಬ ಪ್ರಯೋಗವೇ ಇದೆ. ಪಂಪನೇ ಭ್ರಮಿಸಿದನೇ? ಈಚೆಗೆ ಭ್ರಮಮೂಲದಿಂದ ಶಬ್ದವಿರೂಪವಾಯಿತೆ? ಇಲ್ಲ ಗೃಹಕೋಕಿಲ ಶಬ್ದವೇ ಬೇರೆಯೆಡೆ ಹಲ್ಲಿ ಎಂಬರ್ಥದಲ್ಲಿ ಪ್ರಯೋಗವಿದೆಯೆ? ಸೂಚಿಸಿದ್ದರೆ ಉಪಕಾರವಾಗಿತ್ತು.

ವೃತ್ತಜಾತಿಗಳ ವಿಷಯವಾದ ಅನುಬಂಧದಲ್ಲಿಯೂ ಅನೇಕ ತಪ್ಪುಗಳಿವೆ. ೨ ನೆಯ ಆಶ್ವಾಸದಲ್ಲಿ ಒಂದು ಅಕ್ಕರವೃತ್ತವಿದೆ. ಅದು ಪಟ್ಟಿಯಲ್ಲಿಲ್ಲ; ಆದರೂ ಒಟ್ಟು ವೃತ್ತಗಳ ಸಂಖ್ಯೆ ೭೯ ಸರಿಯಾಗಿದೆ. ೧೧ ನೆಯ ಆಶ್ವಾಸದಲ್ಲಿ ಅಕ್ಕರವೇ ಇಲ್ಲ. ಅಲ್ಲಿ ಒಂದು ಸೂಚಿತವಾಗಿದೆ. ೧೦ ನೆಯ ಆಶ್ವಾಸದಲ್ಲಿ ೭೯ ಕ್ಕೆ ೬೮, ೧೧ ನೆಯ ಆಶ್ವಾಸದಲ್ಲಿ ೧೫೩ ಕ್ಕೆ ೧೫೭, ೧೨ ನೆಯ ಆಶ್ವಾಸದಲ್ಲಿ ೧೨೯ ಕ್ಕೆ ೧೩೦, ಒಟ್ಟು ೧೬೨೫ ಕ್ಕೆ ೧೬೩೦ ಎಂದು ಪದ್ಯಸಂಖ್ಯೆ ನಮೂದಿದೆ. ಕೆಲವು ವೃತ್ತಗಳ ಹೆಸರು ತಪ್ಪಾಗಿದೆ.

ಮೇಲಿನ ಕೆಲವು ಸೂಚನೆಗಳು ಶುದ್ಧವಿಮರ್ಶೆಯ ದೃಷ್ಟಿಯಿಂದ ಗ್ರಂಥದ ಉಪಯೋಗವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಮಾಡಿದುವುಗಳು. ಅಂದಮಾತ್ರಕ್ಕೆ ಈಗಿನ ಮುದ್ರಣದ ಉಪಯೋಗ ಕಡಿಮೆಯೆಂದಲ್ಲ. ನಿಜವಾಗಿಯೂ ಈ ಗ್ರಂಥದ ಪ್ರಕಟಣದಿಂದ ಬಹು ಅಗತ್ಯಪರಿಹಾರವಾಗಬೇಕಾಗಿದ್ದ ಕೊರತೆಯೊಂದು ನೀಗಿದಂತಾಗಿದೆ. ಸಂಪಾದಕರ ಕಾರ್ಯ ಶ್ಲಾಘನೀಯವಾದುದು. ಅವರಿಂದ ಇತೋಪ್ಯತಿಶಯವಾದ ಉತ್ತಮ ಗ್ರಂಥಗಳ ಪ್ರಕಾಶನವಾಗಲೆಂದು ಹಾರೈಸುತ್ತೇವೆ.

'ಸ್ವಚ್ಛಂದಂ'

* * *

ಆಚಣ್ಣ ಕವಿ ವಿರಚಿತಂ ಶ್ರೀ ವರ್ಧಮಾನ ಪುರಾಣಂ—ಸಂಪಾದಕರು: ಶ್ರೀ ಎಂ. ಮರಿಯಪ್ಪ ಭಟ್ಟ, ಎಂ.ಎ., ಎಲ್.ಟಿ. ಮತ್ತು ಶ್ರೀ ಎಂ. ಗೋವಿಂದರಾವ್, ಎಂ.ಎ., ಬಿ.ಓ.ಎಲ್; ಪ್ರಕಾಶಕರು: ಮದ್ರಾಸು ವಿಶ್ವವಿದ್ಯಾನಿಲಯ; ರಾಜಾಕಾರ XVIV+೨೯೬+ii; ಬೆಲೆ, ರೂ. ೧೫-೦-೦.

ಮದ್ರಾಸು ವಿಶ್ವವಿದ್ಯಾನಿಲಯವು ಕಳೆದ ಕಾಲು ಶತಮಾನಗಳಿಂದ ಕನ್ನಡ ಸಾಹಿತ್ಯದ ಉದ್ಗ್ರಂಥಗಳನ್ನು ಸಂಶೋಧಿಸಿ ಪ್ರಕಟಮಾಡುವ ಪವಿತ್ರ ಕಾರ್ಯವನ್ನು ಕೈಗೊಂಡು ಈಗಾಗಲೇ 'ಕವಿರಾಜಮಾರ್ಗ' 'ರಸರತ್ನಾಕರ' ವಸ್ತುಕೋಶ, ಪುಷ್ಪದಂತಪುರಾಣ, ಶಬ್ದಮಣಿದರ್ಪಣ, ಖಗೇಂದ್ರಮಣಿದರ್ಪಣ, ಕವಿಹ್ವಾಬಂಧನ ಮೊದಲಾದ ಪ್ರಾಚೀನ ಗ್ರಂಥಗಳನ್ನು ಪ್ರಕಾಶಪಡಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಪ್ರಸಕ್ತವಾದ 'ವರ್ಧಮಾನ ಪುರಾಣ'ವು ಅದರ ೧೧ನೆಯ ಕುಸುಮ. ಆ ಮಾಲೆಯ ಈಗಿನ ಸಂಪಾದಕರಾದ ಶ್ರೀ ಎಂ. ಮರಿಯಪ್ಪಭಟ್ಟ, ಎಂ.ಎ., ಎಲ್.ಟಿ.; ಮತ್ತು ಶ್ರೀ ಎಂ. ಗೋವಿಂದರಾವ್, ಎಂ.ಎ., ಬಿ.ಓ.ಎಲ್., ಅವರು ತಮಗೆ ಹಿಂದೆ ಆ ಮಾಲೆಯ ಸಂಪಾದಕರಾಗಿದ್ದ ಶ್ರೀ ಎ. ವೆಂಕಟರಾವ್, ಶ್ರೀ ಎಚ್. ಶೇಷಯ್ಯಂಗಾರ್ ಮತ್ತು ಶ್ರೀ ಎಚ್. ಚನ್ನಕೇಶವಯ್ಯಂಗಾರ್ ಅವರುಗಳಂತೆಯೇ ವಿಶೇಷ ಉತ್ಸಾಹದಿಂದ ಮಾಲೆಯ ಕಾರ್ಯವನ್ನು ನಡೆಸಿಕೊಂಡು ಬರುತ್ತಿರುವುದರಿಂದ ಅವರು ಎಲ್ಲ ಕನ್ನಡಿಗರ ಧನ್ಯವಾದಗಳಿಗೆ ಪಾತ್ರರಾಗಿರುತ್ತಾರೆ.

ಈ ಗ್ರಂಥವು ಆರಾ ಸೆಂಟ್ರಲ್ ಲೈಬ್ರೆರಿಯ ಶಕ ೧೩೫೧ರಲ್ಲಿ ಪ್ರತಿಯಾದ ಒಂದೇ ಪ್ರತಿಯ ಆಧಾರದ ಮೇಲೆ ಸಂಶೋಧಿತವಾಗಿದೆಯೆಂದೂ ಅದು ಒಂದು ಸಾಹಸವೆಂದೂ ಸಂಪಾದಕರು ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ನಮಗೇನೋ ಅದು ಸಾಹಸವೆಂದೇ ತೋರುತ್ತದೆ. ಪ್ರಾಚೀನ ಗ್ರಂಥಗಳ ಸಂಶೋಧನೆಗೆ—ಅವು ಶುದ್ಧವಾಗಿ ಶಾಸ್ತ್ರೀಯವಾಗಿ ಸಂಶೋಧಿತವಾಗಬೇಕಾದರೆ—ಆದಷ್ಟು ಪ್ರತಿಗಳನ್ನು ಶೇಖರಿಸಿಯೇ ತೀರಬೇಕು. ಉದಾಸೀನ ಮಾಡಿದರೆ ಒಂದು ಕಡೆ ಪ್ರಕಾಶಿತ ಗ್ರಂಥದಲ್ಲಿ ತಪ್ಪುಗಳೂ ಸ್ಖಾಲಿತ್ಯಗಳೂ ಪಾಠಗಳೂ ಉಳಿದುಕೊಳ್ಳುತ್ತವೆ. ಇನ್ನೊಂದು ಕಡೆ ಇಂತಹ ಗ್ರಂಥಗಳ ಪುನರ್ಮುದ್ರಣದ ಸಂಭವ ಬಹು ಅಪೂರ್ವವಾಗಿರುವುದರಿಂದ ಉತ್ತಮಪ್ರತಿಗಳ ಪಾಠ ವಾಚಕರಿಗಿಲ್ಲದೇಹೋಗುತ್ತದೆ. ಪ್ರತಿಗಳು ಸಿಕ್ಕದೇ ಇರುವವುಗಳ ವಿಷಯ ಅನಿವಾರ್ಯ. ಪ್ರಸಕ್ತ ವರ್ಧಮಾನ ಪುರಾಣದ ವಿಷಯದಲ್ಲಿ ಹಾಗಲ್ಲ. ಕೆಲವೆಡೆಗಳಲ್ಲಿ ಉತ್ತಮ ಪ್ರತಿಗಳಿವೆ.[1] ಒಂದೇ

[1] ನಮಗೆ ತಿಳಿದಮಟ್ಟಿಗೆ ಮೂಡಬಿದ್ರೆಯ ಶ್ರೀಮಠದ ಭಂಡಾರದಲ್ಲಿ ೨೯೫, ೫೪೦, ಮತ್ತು ೬೧೮ ನೆಯ ನಂಬರುಗಳ ಮೂರು ಪ್ರತಿಗಳಿವೆ. ಇವುಗಳಲ್ಲಿ ೨೯೫ ನೆಯ ನಂಬರಿನ ಪ್ರತಿ

ಪ್ರತಿ ಇರುವುದರಿಂದ ಮಾಲೀಕರು ಅದನ್ನು ಹೊರಕ್ಕೆ ಕೊಡದಿರಬಹುದು. ಅಂತಹ ಸಂದರ್ಭಗಳಲ್ಲಿ ಅವರಿಂದ ಒಂದು ಪ್ರತಿಯನ್ನು ಮಾಡಿಸಿ ತರಿಸಿಕೊಳ್ಳಬಹುದು. ಅಥವಾ ಪ್ರತಿಗಳಿರುವ ಸ್ಥಳಕ್ಕೇ ಹೋಗಿ ತೋಲನಮಾಡಿ ಪಾಠಾಂತರಗಳನ್ನು ಗುರುತು ಮಾಡಿಕೊಂಡು ಬರಬಹುದು. ಮದ್ರಾಸ್ ವಿಶ್ವವಿದ್ಯಾನಿಲಯದಂತಹ ದೊಡ್ಡ ಸಂಸ್ಥೆಗೆ ಇವೆರಡೂ ಅಸಾಧ್ಯವಲ್ಲ.

ಮುನ್ನುಡಿಯಲ್ಲಿ ಸಂಪಾದಕರು ತಾವು ಉಪಯೋಗಿಸಿರುವ ಪ್ರತಿಯಲ್ಲಿ ಕಂಡು ಬಂದ ವೈಶಿಷ್ಟ್ಯವನ್ನು ಈ ರೀತಿ ವಿವರಿಸಿದ್ದಾರೆ: "ಗ್ರಂಥದಲ್ಲಿ ಉಪಯೋಗಿಸಲ್ಪಟ್ಟಿರುವ ಕೆಲವು ಕಠಿಣ ಶಬ್ದಗಳಿಗೆ ಓಲೆಯ ಪಕ್ಕದಲ್ಲಿ ಅರ್ಥ ಬರೆದಿದೆ. ಕೆಲವು ಸಂದರ್ಭಗಳಲ್ಲಿ ಆ ಅರ್ಥಗಳಿಗೆ ಆಕರಗಳಾಗಿರುವ ಗ್ರಂಥಗಳ ಹೆಸರನ್ನು ಹೇಳಿದೆ. ಹಲವು ಕಡೆಗಳಲ್ಲಿ ಕವಿಯ ಮಾತುಗಳನ್ನು ಸಮರ್ಥಿಸುವುದಕ್ಕಾಗಿ ಉತ್ತರ ಪುರಾಣವೇ ಮುಂತಾದ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳನ್ನು ಎತ್ತಿ ಬರೆದಿದೆ. ಒಂದು ಸಂದರ್ಭದಲ್ಲಿ ನಾಗವರ್ಮಕೃತ ವರ್ಧಮಾನ ಪುರಾಣದಿಂದ ಒಂದು ಕಂದ ಪದ್ಯವು ಉದ್ಧರಿಸಲ್ಪಟ್ಟಿದೆ." ಈ ಅಂಶಗಳು ಸಂಶೋಧನೆಯ ದೃಷ್ಟಿಯಿಂದ ಬಹು

ಸಂಪಾದಕರು ಉಪಯೋಗಿಸಿಕೊಂಡಿರುವ ಆರಾ ಲೈಬ್ರೆರಿಯ ಪ್ರತಿಯ ಕಾಲವನ್ನೇ ಅಂದರೆ ಶಕ ೧೩೫೧ ನೆಯ ಕೀಲಕಸಂ | ಚೈ | ಶು || ೭ ಸ್ವಚ್ಛವಾರ (ಆರಾ ಲೈಬ್ರೆರಿಯಲ್ಲಿ ವಾರ ಹೇಳಿಲ್ಲ) ಉಳ್ಳದ್ದು. ಮೂಡಬಿದ್ರೆಯ ಪ್ರತಿಯು ಲಿಪಿಶಾಸ್ತ್ರದೃಷ್ಟಿಯಿಂದ ಬಹು ಪ್ರಾಚೀನವಾಗಿ ಕಾಣುವುದರಿಂದ ಬಹುಶಃ ಆರಾ ಪ್ರತಿಗೆ ಇದೇ ಮೂಲವಿರಬೇಕು. ಲಿಪಿಕಾರನು ಪ್ರತಿಯಾದ ಕಾಲವನ್ನೂ (ತಾನೇ ಬೇರೆ ದಿನ ಪ್ರತಿ ಮಾಡಿದ್ದರೂ) ಮೂಲದಲ್ಲಿರುವಂತೆಯೇ ಪ್ರತಿ ಮಾಡಿದ್ದಿರ ಬಹುದು. (ಹಾಗೆ ಮಾಡುವುದು ಅಸಂಭವವೇನೂ ಅಲ್ಲ. ಮೈಸೂರು ಪ್ರಾಚ್ಯಕೋಶಾಗಾರದ ಅನೇಕ ಪ್ರತಿಗಳಲ್ಲಿ ಬರವಣಿಗೆಯು ಬೇರೇ ಸಾಧನಗಳಿಂದ ೧೮ ನೆಯ ಶತಮಾನಕ್ಕೆ ಸೇರಿದುದೆಂದು ಸ್ಪಷ್ಟವಾಗಿದ್ದರೂ ಪ್ರತಿಮಾಡಿದ ಕಾಲ ೧೫-೧೬ ನೆಯ ಶತಮಾನಗಳಿಗೆ ಅನ್ವಯಿಸಿರುವಂತೆ ಲಿಖಿತವಾಗಿರುತ್ತವೆ. ಇದಕ್ಕೆ ಕಾರಣ ಲಿಪಿಕಾರನು ಮೂಲಪ್ರತಿಯಲ್ಲಿರುವ ಪ್ರತಿ ಮಾಡಿದ ಕಾಲವನ್ನು ತಿಳಿಸುವ ಭಾಗವನ್ನೂ ಗ್ರಂಥದ ಭಾಗವೆಂದೇ ತಿಳಿದು ಪ್ರತಿ ಮಾಡಿರುತ್ತಾನೆ) ನಾವು ಎರಡು ಪ್ರತಿಗಳನ್ನೂ ತೋಲನಮಾಡಿ ನೋಡಿಲ್ಲವಾದುದರಿಂದ ಅದರ ಪ್ರತಿಯೇ ಇದು ಇದ್ದರೂ ಇರಬಹುದು. ಎರಡು ಪ್ರತಿಗಳನ್ನೂ ಒಂದೇ ದಿನ ಪ್ರತಿಮಾಡಿ ಮುಗಿಸಿರುವುದು ಅಸಂಭವ. ಅಂತೂ ಮೂಡಬಿದ್ರೆಯ ಪ್ರತಿ ಪ್ರಾಚೀನವಾದ ಶುದ್ಧವಾದ ಪ್ರತಿ. ಹಾಗೆಯೇ ಶ್ರವಣಬೆಳುಗೊಳದ ಮಠದಲ್ಲಿ ೩೩೫ ನೆಯ ನಂಬರಿನ ಶುದ್ಧವಾದ ಪ್ರತಿಯೊಂದಿದೆ. ಹಾಸನದ ಪಾಯಪ್ಪ ಶೆಟ್ಟರಲ್ಲಿ ಪ್ರಾಚೀನವಲ್ಲದಿದ್ದರೂ ಬಹು ಉತ್ತಮ ರೀತಿಯಲ್ಲಿ ರಕ್ಷಿತವಾಗಿರುವ ಚಿತ್ರಗಳಿಂದ ಕೂಡಿದ ಒಂದು ಪ್ರತಿಯಿದೆ. ಮೈಸೂರು ಪ್ರಾಚ್ಯಕೋಶಾಗಾರದಲ್ಲಿ ಕೆ. ಎ. ೫ ನೆಯ ನಂಬರಿನ ಕಾಗದ ಪ್ರತಿ ಇದೆ. ಇವುಗಳನ್ನೆಲ್ಲಾ ಉಪಯೋಗಿಸಿಕೊಂಡಿದ್ದರೆ ಈ ಸಂಸ್ಕರಣವು ಬಹು ಉತ್ತಮವಾಗುತ್ತಿತ್ತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಮುಖ್ಯವಾದುವು. ಮಾದರಿಗಾಗಿ ಅಂತಹ ಕೆಲವು ಪುಟಗಳ ಪಡಿಯಚ್ಚುಗಳನ್ನು ಕೊಡಬಹುದಾಗಿತ್ತು. ಮತ್ತು ಆ ಪ್ರಯೋಗಗಳಲ್ಲಿ ಕೆಲವನ್ನೂ ಮತ್ತು ನಾಗವರ್ಮನ ಕಂದಪದ್ಯದ ಪೂರ್ಣಭಾಗವನ್ನೂ ಕೊಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತು.

ಗ್ರಂಥದ ಆದಿಯಲ್ಲಿ ಕವಿಕಾವ್ಯದ ವಿಚಾರವಾಗಿ ಸುಮಾರು ೪೪ ಪುಟದಷ್ಟು ದೀರ್ಘವಾದ ಉಪೋದ್ಘಾತವಿದೆ. ಇದರಲ್ಲಿ ಕವಿಯ ವಿಷಯ, ಗ್ರಂಥರಚನಾ ಕಾಲ, ಆತನ ಪೋಷಕನ ವಿಷಯ, ಆತನ ಕವಿತಾಧೋರಣೆ ಮೊದಲಾದವು ವಿಸ್ತಾರವಾಗಿ ಚರ್ಚಿತವಾಗಿವೆ. ಕವಿಯು ಉಪಯೋಗಿಸಿರುವ ಯಮಕ ಅನುಪ್ರಾಸ, ಏಕಾಕ್ಷರಿ, ದ್ವ್ಯಕ್ಷರಿ ಮೊದಲಾದ ಶಬ್ದಾಲಂಕಾರಗಳಿಗೂ ಪರಿಸಂಖ್ಯ ಉಪಮಾ ಮೊದಲಾದ ಅರ್ಥಾಲಂಕಾರಗಳಿಗೂ ವಿಪ್ರಲಂಬ ಶೃಂಗಾರ, ಕರುಣ ಮೊದಲಾದ ರಸಗಳಿಗೂ ಉದಾಹರಣೆಗಳನ್ನು ಕೊಟ್ಟು ಇಲ್ಲಿ ಉಪಯುಕ್ತವಾಗಿರುವ ಅಪೂರ್ವವಾದ ಕನ್ನಡಪದಗಳು ಮತ್ತು ಗಾದೆಗಳನ್ನು ನಿರ್ದೇಶಿಸಿ—ಈ ಗ್ರಂಥದಲ್ಲಿ ಕಾವ್ಯಧರ್ಮವೂ ಧರ್ಮವೂ ಮಿಳಿತವಾಗಿ ಇದೊಂದು ಮಹಾಕಾವ್ಯವಾಗಿದೆ ಎಂದು ಶ್ಲಾಘಿಸಲ್ಪಟ್ಟಿದೆ. ಇಂತಹ ವಿಮರ್ಶೆಯಲ್ಲಿ ರುಚಿಮಾಂದ್ಯವಿದೆಯೆಂದು ಬಹು ಸಂಕೋಚದಿಂದ ಹೇಳಬೇಕಾಗಿದೆ. ಬರಿಯ ಶಬ್ದಾಲಂಕಾರ, ಚಿತ್ರಕವಿತೆಗಳಿಂದ ಕೂಡಿದ ಗ್ರಂಥಗಳು ಕಾವ್ಯಮೀಮಾಂಸಕರಿಂದ ಅಧಮಗೋಷ್ಠಿಗೆ ಸೇರಿಸಲ್ಪಟ್ಟಿರುವುದು ನಿರ್ವಿವಾದವಾದ ವಿಷಯ. ಈ ಬಾಹ್ಯಾಲಂಕಾರಗಳು ಆಂತರ್ಯವಾದ ಭಾವರಸಪುಷ್ಟಿಗೆ ಸಹಾಯವಾಗದಿದ್ದ ಪಕ್ಷದಲ್ಲಿ ಅವು ಬರಿಯ ಶಬ್ದಗಳ ಕಸರತ್ತು ಮಾತ್ರ. ಕೇವಲ ಪಾಂಡಿತ್ಯದೃಷ್ಟಿಯಿಂದ ಅವಕ್ಕೆ ಮನ್ನಣೆ ದೊರಕಬಹುದು. ಕವಿ ಆಚಣ್ಣ ಪಂಡಿತ. ಶಬ್ದಜಾಲದ ಪೂರ್ಣ ಹಿಡಿತವಿದೆ ಆತನಿಗೆ. ಉದ್ದಕ್ಕೂ ಸಾಧನೆ ಮಾಡಿದ್ದಾನೆ. ಅವನ ಕವಿತಾ ಧೋರಣೆಗೆ ಉದಾಹರಣೆಯಾಗಿ ಕೊಟ್ಟಿರುವ

ಕಲಿ ಕೊಂಕಲ್ಕೇಕಕ್ಕುಂ
ಕೆಲಕ್ಕೆ ಕೋಲಿಕ್ಕೆ ಲಕ್ಕೆ ಲೆಕ್ಕಕ್ಕೆಲ್ಲಂ|
ಕಲಿ ಕೊಲಲೆ ಕಲಲ್ಕಕ್ಕುಂ
ಕುಲಕಕ್ಕುಂ ಕಲಿ ಕಲಂಕಿ ಕೊಂಕೆ ಕಲಂಕಂ||

ಎಂಬ ದ್ವ್ಯಕ್ಷರೀಪದ್ಯವೂ

ಕುಂದಿನಿಂದೆಚ್ಚನದು ಬಂ| ಟಂದ ಮಲ್ಲದೆ ನಿಂದುದೆಂ
ದೆಂದು ನಿಂದೆಲ್ಲಮಧಟಂ| ಬಂದುನಚ್ಚದೆ ನಿಂದಿಕುಂ|

ಎಂಬ ಗತಪ್ರತ್ಯಾಗತ ಪದ್ಯವೂ ಯಾವ ಭಾವದೌನ್ನತ್ಯವನ್ನು ಏರಬಲ್ಲುದು?

ಅಲ್ಲದೆ ವರ್ಧಮಾನ ತೀರ್ಥಂಕರನು ಇತರ ೨೩ ಪೌರಾಣಿಕ ವ್ಯಕ್ತಿಗಳಂತಿರದೆ

ಭಾಗವು ಮೈಸೂರು ಪ್ರಾಚ್ಯಕೋಶಾಗಾರದ ಕೆ. ಎ. ೫ನೆಯ ಪ್ರತಿಯ ಈ ಭಾಗಕ್ಕೆ ಒಂದಕ್ಷರವೂ ವ್ಯತ್ಯಾಸವೇ ಇಲ್ಲದೆ ಇದೆ. ಅಷ್ಟೇ ಅಲ್ಲ. ಈ ಗ್ರಂಥದಲ್ಲಿ ಕಂಸದಲ್ಲಿ ಕೊಟ್ಟಿರುವ ಭಾಗಗಳೆಲ್ಲ (ಒಂದೆರಡು ಕಡೆ ವಿನಾ) ಮೇಲಿನ ಪ್ರತಿಯ ಭಾಗಗಳಿಗೆ ಅಕ್ಷರಶಃ ಹೊಂದಿಕೊಳ್ಳುತ್ತವೆ. ಅಲ್ಲದೆ ಅಲ್ಲಿರುವ ಹಾಗೆಯೇ ಇಲ್ಲಿಯೂ ಎಂಟನೆಯ ಆಶ್ವಾಸದ ೪೮ನೆಯ ಪದ್ಯದ 'ಮುಕ್ಕುಳಿಸೆ' ಎಂಬ ಪದದಿಂದ ಮುಂದಕ್ಕೆ ಮತ್ತು 'ವ'॥ ಮುಂದಕ್ಕೆ 'ಖಬ್ಗಾಖಿಗ್ಗಿ' ಎನ್ನುವ ವರೆಗೆ ಗ್ರಂಥ ಪಾತವಿದೆ. ಆದುದರಿಂದ ಕಂಸದಲ್ಲಿರುವ ಪಾಠಗಳು ಕೆ. ಎ. ೫ನೆಯ ಪ್ರತಿಯ ಪಾಠಗಳೇ ಇರಬೇಕಲ್ಲವೆ? ಹಾಗಿದ್ದರೆ ಅದರ ಸೂಚನೆಯನ್ನು ಕೊಟ್ಟಿದ್ದರೆ ಆ ಪಾಠಗಳಿಗೆ ಹೆಚ್ಚು ಪ್ರಾಶಸ್ತ್ಯವು ಬರುತ್ತಿರಲಿಲ್ಲವೆ?

ಪಾಠಾಂತರಗಳ ಸಹಾಯವಿಲ್ಲದಿರುವುದರಿಂದ ಕೆಲವೆಡೆಗಳಲ್ಲಿ ಸರಿಯಾಗಿ ಅರ್ಥವಾಗುವುದಿಲ್ಲ. ಕೆಲವೆಡೆಗಳಲ್ಲಿ ಅಪಶಬ್ದಗಳ ಪ್ರಯೋಗವಿದೆ—ಜನಾರ್ಧನ (XXIX, ೨೭) ವೃತಭಂಗ (XXXII, ೯) ದುಃಕೃತ (೧ ಅ, ೨ ಪ) ಪುಪ್ಪವತಿ (೧೩-೫೭). ಮತ್ತೆ ಕೆಲವೆಡೆಗಳಲ್ಲಿ ಮುದ್ರಣದೋಷಗಳಿವೆ.—ವಿಮಳಸಂಧೋದಕ (೧೪-೫೧) ಬಂದುರತರ (೧೪-೩೦) ಶಶಶೇಖರ (೮-೫) ; ಬೇರೆ ಕೆಲವೆಡೆಗಳಲ್ಲಿ ಱಟಕುಳಗಳ ತಪ್ಪು ಪ್ರಯೋಗವಿದೆ. ತಣ್ಬೆಳಲ್ ೧-೩೭, ತೊಳಲ್ (೧-೬೭) ಇಲ್ಲಿ ಱಟವಿರಬೇಕು ; ಏಟಿಸು (೧-೬೯) ಅಟ್ಟು (೧-೬೫) ಇಲ್ಲಿ ಕುಳವಿರಬೇಕು. ಹೆಚ್ಚು ಪ್ರತಿಗಳ ಸಹಾಯವಿದ್ದಿದ್ದರೆ ಇಂತಹ ಅನೇಕ ತಪ್ಪುಗಳು ಕಡಿಮೆಯಾಗುತ್ತಿದ್ದವು. ಇಂತಹ ಪ್ರಾಚೀನ ಗ್ರಂಥಗಳನ್ನು ಪ್ರಕಟಮಾಡುವಾಗ ಶಬ್ದಕೋಶ, ಪದ್ಯಗಳ ಅಕಾರಾದಿ, ಈ ಮಾಲೆಯ ಎಲ್ಲ ಗ್ರಂಥಗಳ ಒಂದು ಪರಿಚಯ—ಇವೆಲ್ಲ ಇರುವುದು ಒಳ್ಳೆಯದು. ಸಂಪಾದಕರು ಬಹು ಕಷ್ಟಪಟ್ಟು ಗ್ರಂಥವನ್ನು ಸಂಶೋಧಿಸಿ ಒಳ್ಳೆಯ ಬೆಂಡುಕಾಗದದಲ್ಲಿ ಅಂದವಾದ ರೀತಿಯಲ್ಲಿ ಪ್ರಕಟಿಸಿರುವುದು ಶ್ಲಾಘನೀಯ. ಆದರೂ ೧೫ ರೂ. ಬೆಲೆ ಮಾತ್ರ ಹೆಚ್ಚೆಂದು ಹೇಳಬೇಕಾದುದು ಅನಿವಾರ್ಯ. ಕೆಲವು ಪ್ರತಿಗಳನ್ನಾದರೂ ಸಾಮಾನ್ಯ ಕಾಗದದಲ್ಲಿ ಸುಲಭಬೆಲೆಗೆ ಸಿಕ್ಕುವಂತೆ ಅಚ್ಚುಮಾಡಿಸಿದ್ದರೆ ಚೆನ್ನಾಗಿತ್ತು.

ಇಂತಹ ಸ್ತುತ್ಯವಾದ ಕಾರ್ಯವನ್ನು ಮದ್ರಾಸ್ ವಿಶ್ವವಿದ್ಯಾನಿಲಯ ಹೆಚ್ಚಿನ ರೀತಿಯಲ್ಲಿ ನಡಸಲೆಂದೂ ಸಂಪಾದಕರ ಕಾರ್ಯ ಮತ್ತಷ್ಟು ಜನಪ್ರಿಯವಾಗಲೆಂದೂ ಹಾರೈಸುತ್ತೇವೆ.

'ಸ್ವಚ್ಛಂದಂ'

ಸಾದರ ಸ್ವೀಕಾರ

೧. **ಜಗತ್ತುಗಳ ಹುಟ್ಟು ಸಾವು**—ಲೇಖಕರು: ಶ್ರೀಮಾನ್ ಆರ್. ಎಲ್. ನರಸಿಂಹಯ್ಯ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪು. XIV+೨೭೮ ; ಬೆಲೆ, ರೂ. ?

೨. **ಛತ್ರಪತಿ ಶಿವಾಜಿ** (ಆರ್ಯಕೀರ್ತಿ, ದ್ವಿತೀಯಖಂಡ) (ಐದನೆಯ ಮುದ್ರಣ)—ಲೇಖಕರು : ಶ್ರೀ ಚ. ವಾಸುದೇವಯ್ಯ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪ XIV+೧೫೯ ; ಬೆಲೆ, ರೂ. ೨-೮-೦.

೩. **ಗಾನಕಲೆ**—ಲೇಖಕರು: ಶ್ರೀಮಾನ್ ರಾಳಪಲ್ಲಿ ಅನಂತಕೃಷ್ಣಶರ್ಮ; ಪ್ರಕಾಶಕರು: ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪ IV+೧೦೮ ; ಬೆಲೆ, ರೂ. ೧-೮-೦.

೪. **ಉಮರನ ಒಸಗೆ**—ಲೇಖಕರು : ಶ್ರೀಮಾನ್ ಡಿ.ವಿ.ಜಿ.; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ಅ. ಪ. ೮+೧೪೦ ; ಬೆಲೆ, ರೂ. ೧-೧೨-೦.

೫. **ಪಂಪ ಮಹಾಕವಿ ವಿರಚಿತಂ** (ಆದಿಪುರಾಣಂ)—ಸಂಪಾದಕರು : ಪ್ರೊ|| ಕೆ. ಜಿ. ಕುಂದಣಗಾರ, ಎಂ.ಎ.; ಮತ್ತು ದಿವಾನ್ ಬಹದ್ದೂರು ಎ. ಪಿ. ಚೌಗುಲೆ, ಬಿ.ಎ. ಎಲ್‌ಎಲ್.ಬಿ. ; ಮುದ್ರಕರು ಮತ್ತು ಪ್ರಕಾಶಕರು : ಅನಂತ ಅಣ್ಣಾರಾವ್ ಚೌಗುಲೆ, ಬೆಳಗಾವಿ ; ಡೆಮ್ಮಿ I-V+೧-೬೪+೧-೪೨೧+೧-೧೫೯. ಬೆಲೆ, ಸಾದಾಪ್ರತಿ ರೂ. ೧೦-೦-೦ ; ಕ್ಯಾಲಿಕೋಪ್ರತಿ ರೂ. ೧೧-೦-೦.

೬. **ಆಚಣ್ಣ ಕವಿ ವಿರಚಿತಂ**—ಶ್ರೀ ವರ್ಧಮಾನ ಪುರಾಣಂ (ಮದ್ರಾಸ್ ವಿಶ್ವವಿದ್ಯಾನಿಲಯದ ಕರ್ಣಾಟಕ ಗ್ರಂಥಮಾಲೆಯ ೧೧ ನೆಯ ಕುಸುಮ) ಸಂಪಾದಕರು : ಶ್ರೀಗಳಾದ ಎಂ. ಮರಿಯಪ್ಪ ಭಟ್ಟ, ಎಂ.ಎ., ಎಲ್.ಟಿ. ಮತ್ತು ಎಂ. ಗೋವಿಂದರಾವ್, ಎಂ.ಎ., ಬಿ.ಒ.ಎಲ್. ; ಪ್ರಕಾಶಕರು : ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ಶಾಖೆ ; ಮದ್ರಾಸ್, ರಾಜಾಕಾರ ; ಅ.ಪು. XLIV+೨೯೬+ii ; ಬೆಲೆ, ರೂ. ೧೫-೦-೦.

೭. **ಶಿವಶರಣರ ಕೃತಿಗಳು** (ಸ್ವರ ಪ್ರಸ್ತಾರಸಹಿತ)—ಸ್ವರ ಸಂಯೋಜಕರು ; ಗಾನ ವಿಶಾರದ ವೈಣಿಕ ವಿದ್ವಾನ್, ಮೈಸೂರು ಎಲ್. ರಾಜಾರಾವ್ ; ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ; ಕ್ರೌನ್ ಅ. ಪ. VII+೧೪೮+೨ ; ಬೆಲೆ, ರೂ. ೨-೦-೦.

೮. **ದಿವ್ಯಜೀವನ**—ಯುಗಧರ್ಮ ನಿರೂಪಣೆಯ ಸಾಹಿತ್ಯಗ್ರಂಥ ಮತ್ತು ಶ್ರೀ ಮಹಾವೀರ ಗ್ರಂಥಮಾಲೆಯ ೯ ನೆಯ ಪುಷ್ಪ ; ಲೇಖಕರು: ಶ್ರೀ ಮಾರನಾಡು ವರ್ಧಮಾನ ಹೆಗ್ಗಡೆ ; ಪ್ರಕಾಶಕರು : ವಿಶ್ವ ಜೈನ ಮಿಶನ್ ಶಾಖೆ ; ಕ್ರೌನ್ ಅ. ಪು. XVI+೧೧೬ ; ಬೆಲೆ, ರೂ. ೧-೮-೦.

೯. **ಪರಿವರ್ತನೆ**—ಲೇಖಕರು : ಶ್ರೀ ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ.ಎ.; ಪ್ರಕಾಶಕರು : ಎಂ. ಎಸ್. ಅಂಡ್ ಸನ್ಸ್, ಗಾಂಧೀಬಜಾರ್, ಬಸವನಗುಡಿ, ಬೆಂಗಳೂರು—೪ ; ಕ್ರೌನ್ ೬+೧೨೨ ; ಬೆಲೆ, ರೂ. ೧-೪-೦.

೧೦. **ಬಾಳ ಸಂಜೆ** (ಐತಿಹಾಸಿಕ ನಾಟಕ) ಮತ್ತು ನೀಲಿಕಾಗದ (ಸಾಮಾಜಿಕ ನಾಟಕ)—ಲೇಖಕರು: ಶ್ರೀ ರಾಮಚಂದ್ರಶರ್ಮ; ಪ್ರಕಾಶಕರು: ಹೆಚ್. ಎನ್. ರಂಗಸ್ವಾಮಿ; ಸಾಯ್ ನ್ಯಾಶನಲ್ ಮಾರ್ಟ್ ೧೩, ನಾಗಸಂದ್ರ ರೋಡ್, ಬೆಂಗಳೂರು—೪; ಕ್ರೌ ಅ. ಪ. ೫೪; ಬೆಲೆ, ರೂ. ೧-೪-೦.

೧೧. **ಯೋಗಿರಾಜ ಶ್ರೀ ಪ್ರಭುಕುಮಾರ ಪಟ್ಟಾಧ್ಯಕ್ಷರು**—ಗ್ರಂಥಕರ್ತರು: ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು; ಶ್ರೀ ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ, ಗೂಳೂರು; ಪ್ರಕಾಶಕರು: 'ಸುಕುಮಾರ' ಗ್ರಂಥಮಾಲೆ, ಶ್ರೀ ಶಿವಯೋಗಮಂದಿರ; ಕ್ರೌ ಅ. ಪ. ೫+೫೬; ಬೆಲೆ, ರೂ. ೦-೮-೦.

೧೨. **ಕುಡಿಮಿಂಚು**—ಲೇಖಕರು: ಎನ್. ಎಸ್. ಗದಗಕರ; ಪ್ರಕಾಶಕರು: ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ; ಕ್ರೌ ಅ. ಪ. ೫+೬೪; ಬೆಲೆ, ರೂ. ೦-೧೪-೦.

೧೩. **ದೇವತಾತ್ಮ**—ಮಿಂಚಿನಬಳ್ಳಿಯ ೧೫ ನೆಯ ವರ್ಷದ ೨ ನೆಯ ಕುಡಿ; ಬರೆದವರು: ಶ್ರೀ ಮಹಾದೇವಿಯಮ್ಮ; ಪ್ರಕಾಶಕರು: ಬಿಂದುಮಾಧವ ಬುರ್ಲಿ, ಮಿಂಚಿನಬಳ್ಳಿ ಚಾವಡಿ, ಜವಳಿ ಪೇಟೆ, ಧಾರವಾಡ; ಕ್ರೌ ಅ. ಪ. ೯೬; ಬೆಲೆ, ರೂ. ೧-೦-೦.

೧೪. **ಕಾವ್ಯಕುಂಜ**—ಬರೆದವರು: ಶ್ರೀ ನಾ. ನ. ಜವಳಿ ಧಾರವಾಡ; ಪ್ರಕಾಶಕರು: ಭಾರತ ಮುದ್ರಣಾಲಯ, ಧಾರವಾಡ; ಕ್ರೌ ಅ. ಪ. ೮೧; ಬೆಲೆ, ರೂ. ೧-೪-೦.

೧೫. **ಮಂದಾರಕುಸುಮ** (ಏಳು ಕತೆಗಳ ಸಂಕಲನ)—ಬರೆದವರು: ಶ್ರೀ ರಾಮಚಂದ್ರ ಶರ್ಮ; ಪ್ರಕಾಶಕರು: ಹೆಚ್. ಎನ್. ರಂಗಸ್ವಾಮಿ, ಸಾಯ್ ನ್ಯಾಶನಲ್ ಮಾರ್ಟ್—೧೩, ನಾಗಸಂದ್ರ ರೋಡ್, ಬೆಂಗಳೂರು—೪; ಕ್ರೌ ಅ. ಪ. ೧೧೦+೨; ಬೆಲೆ, ರೂ. ೧-೪-೦.

೧೬. **ವಿವೇಕಾಭ್ಯುದಯ** (ಶ್ರವಣಬೆಳ್ಗೊಳದ ಕೈಪಿಡಿ)—ಬೆಲೆ, ರೂ. ೦-೮-೦.

೧೭. **ಬದುಕಿಬಂದ ಜೀವ**—ಲೇಖಕರು: ಅಲೆಕ್ಸಾಂಡರ್ ಬಾರ್ ಮೈನ್; ಪ್ರಕಾಶಕರು: ಎಸ್. ನಾರಾಯಣ; ಕ್ರೌ ಅ. ಪ. V+೨೨೬.

೧೮. **ರಷ್ಯಾ** (ನಿಜಚಿತ್ರ)—ಬರೆದವರು: ಎಡ್ಮಂಡ್ ಸ್ಟೀವನ್ಸ್; ಪ್ರಕಾಶಕರು: ಎನ್. ನಾರಾಯಣ; ಕ್ರೌ ಅ. ಪ. ೨೦೮;

೧೯. **ಕೋಪ ಮತ್ತು ಕನಿಕರದಲ್ಲಿ**—ಬರೆದವರು: ರಾಬರ್ಟ್ ಮ್ಯಾಗಿಡಾಫ್; ಪ್ರಕಾಶಕರು: ಎನ್. ನಾರಾಯಣ; ಕ್ರೌ ಅ. ಪ. ೨೯೨+VI;

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಣ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಸಾದಾ ರೂ. ೧-೨-೦ ; ಕ್ಯಾಲಿಕೊ ೨-೨-೦.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦.

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. ***ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. ***ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. **ತಮಿಳು ಪಾಠಗಳು**—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. **ಅಶೋಕ**—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎಸ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.

೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. *ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. *ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ರಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦. *ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ.,
ಎಲ್‌ಎಲ್. ಬಿ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟಿನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬⅔ ರಂತೆ ೨೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩⅓ ರಂತೆ ೨೦೦೦ ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೨೮, ೨೯, ೩೦, ೩೧, ೩೨ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಿಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ, ಸಾಮಾನ್ಯ ಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ

ಸಾದಾ ಪ್ರತಿ, ರೂ. ೨-೪-೦ ; ಕ್ಯಾಲಿಕೊ ಪ್ರತಿ, ರೂ. ೩-೪-೦

ಶ್ರೀ ಕೆ. ವಿ. ಅಯ್ಯರ್ ಅವರು ಬರೆದುದು. ಶ್ರೀ ಡಿ. ವಿ. ಗುಂಡಪ್ಪ ಅವರ ಮುನ್ನುಡಿಯೊಡನೆ.

★

೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ

ಸಾದಾ ಪ್ರತಿ, ರೂ. ೧-೧೨-೦ ; ಕ್ಯಾಲಿಕೊ ಪ್ರತಿ, ರೂ. ೨-೧೨-೦

ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ ಅವರು ಸಂಸ್ಕೃತದಿಂದ ಅನುವಾದಮಾಡಿದ್ದು. ಶ್ರೀ ಎ. ಆರ್. ಕೃಷ್ಣಶಾಸ್ತ್ರೀ ಅವರ 'ಕವಿ ಕಾವ್ಯ ಪರಿಚಯ'ದೊಂದಿಗೆ.

★

೩. ಮೊನ್ನ ವನ್ನ

ಸಾದಾ ಪ್ರತಿ, ರೂ. ೨-೦-೦ ; ಕ್ಯಾಲಿಕೊ ಪ್ರತಿ, ರೂ. ೩-೦-೦

ಬೆಲ್ಜಿಯಂ ದೇಶದ ಮಾರಿಸ್ ಮ್ಯಾಟರ್‌ಲಿಂಕ್ ಎಂಬ ಕವಿಯ ಮೂರಂಕದ ನಾಟಕವನ್ನು ಶ್ರೀ ಎಸ್. ಜಿ. ಶಾಸ್ತ್ರಿ ಅವರು ಕನ್ನಡಿಸಿಕೊಟ್ಟದ್ದು. ಶ್ರೀ ಜಿ. ಪಿ. ರಾಜರತ್ನಂ ಅವರ 'ಕವಿ ಕಾವ್ಯ ಪರಿಚಯ'ದೊಂದಿಗೆ.

★

೪. ನಾಗನ ಪದಗಳು

ಸಾದಾ ಪ್ರತಿ, ರೂ. ೧-೪-೦ ; ಕ್ಯಾಲಿಕೊ ಪ್ರತಿ, ರೂ. ೨-೪-೦

'ರತ್ನನ ಪದಗಳು' ಜಾತಿಯ ಹೊಸ ಕವನಗಳ ಸಂಗ್ರಹ. ಶ್ರೀ ರಾಜರತ್ನಂ ಬರೆದವು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ', ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು: 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

ನಾಗಾನಂದನಾಟಕ (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—
ಬೆಲೆ ರೂ. ೧—೦—೦

ಕಿರಿಯಕಾಣಿಕೆ (ಎರಡನೆಯ ಮುದ್ರಣ)— ಕ್ಯಾಲಿಕೊ ಪ್ರತಿ ರೂ. ೧—೮—೦

ಮಾರಾಟಗಾರರು :

ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು

ಆಷಾಢಭೂತಿ (ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ. ಅವರಿಂದ)—
ಕ್ಯಾಲಿಕೊ ಪ್ರತಿ ರೂ. ೧—೮—೦

ಸಾವಿನ ಸಮಸ್ಯೆ (ಶ್ರೀ ವೆಂಬಾರ್ ವೆಂಕಟಾಚಾರ್ಯ, ಎಂ.ಎ., ಬಿ.ಕಾಮ್., ಎಲ್‌ಎಲ್.ಬಿ. ಅವರಿಂದ)— ಸಾದಾ ಪ್ರತಿ ರೂ. ೦—೧೨—೦

ಮಾರಾಟಗಾರರು :

ಕೃಷ್ಣ ಮತ್ತು ಕಂಪನಿ, ಮೈಸೂರು

ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦

ಮಾರಾಟಗಾರರು :

ಶ್ರೀ ರಾಮಚಂದ್ರ ಬುಕ್ ಡಿಪೊ,
ದೇವರಾಜ ಮಾರ್ಕೆಟ್, ಮೈಸೂರು

Edited by N. Anantharangachar, M.A., B.T. and T. S. Shama Rao, M.A.
Published by The University of Mysore, Mysore. Printed by Hugh Warren
at the Wesley Press and Publishing House, Mysore City